ಸೋಮವಾರ, ಸೆಪ್ಟೆಂಬರ್ 19, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 260 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್‌ನಂತಹ ಅಧ್ಯಯನಕ್ಕಾಗಿ ಉತ್ತಮ ಕಾಲೇಜುಗಳಿಗಾಗಿ ಹುಡುಕಾಟ ಆರಂಭಿಸಿದ್ದಾರೆ. ಇಂಥ ಸಂದರ್ಭದಲ್ಲಿ ಯಾವ ಅಂಶಗಳನ್ನು ಪರಿಗಣಿಸಬೇಕು? ಇಲ್ಲಿದೆ ಮಾಹಿತಿ

ಆಳ-ಅಗಲ
ಚೀತಾ ಬಂದಾಯ್ತು, ಮುಂದೇನು...
'ಎಎಪಿ ಜನಪ್ರಿಯತೆ: ಬಿಜೆಪಿಗೆ ದಿಗಿಲು' 8
'ಕೋಮುವಾದ ಆದರ್ಶವಾಗಿಸಲು ಯತ್ನ' 4
ಫೈನಲ್‌ನಲ್ಲಿ ಮುಂಬೈ ಸಿಟಿ ವಿರುದ್ಧ ಗೆಲುವು
ಬೆಂಗಳೂರು ಎಫ್‌ಸಿಗೆ ಡುರಾಂಡ್ ಕಪ್ 10

ರೈತ ಅರ್ಜಿ ಸಲ್ಲಿಸಿದ 7 ದಿನಗಳಲ್ಲಿ ಆದೇಶ • ಭೂ ಕಂದಾಯ ಕಾಯ್ದೆ ತಿದ್ದುಪಡಿಗೆ ಮಸೂದೆ

ಭೂ ಪರಿವರ್ತನೆ ಇನ್ನಷ್ಟು ಸರಳ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೃಷಿಭೂಮಿಯಲ್ಲಿ ಸ್ವಂತಕ್ಕೆ ಮನೆ, ಕೃಷಿ ಪರಿಕರಗಳನ್ನು ಸಂಗ್ರಹಿಸಿಡಲು ಕಟ್ಟಡ, ತೋಟದ ಮನೆ ನಿರ್ಮಿಸಿಕೊಳ್ಳಲು ರೈತರು ಅರ್ಜಿ ಸಲ್ಲಿಸಿದ ಏಳು ದಿನಗಳ ಒಳಗೇ ಮಂಜೂರಾತಿ ಆದೇಶ ಹೊರಡಿಸಲು ಜಿಲ್ಲಾಧಿಕಾರಿಗೆ ಗಡುವು ವಿಧಿಸುವ ಉದ್ದೇಶದಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ ತಿದ್ದುಪಡಿ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದೇ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡನೆ ಆಗಲಿದೆ.

ಕೃಷಿಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಪರಿವರ್ತಿಸುವ ಪ್ರಕ್ರಿಯೆಯನ್ನು 'ರೈತ ಸ್ನೇಹಿ'ಗೊಳಿಸುವುದು ತಿದ್ದುಪಡಿಯ ಉದ್ದೇಶ. ಸೋಮವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್ 95ಕ್ಕೆ ತಿದ್ದುಪಡಿಗೆ ಒಪ್ಪಿಗೆ ಪಡೆಯಲಾಗುವುದು ಎಂದು ಮೂಲಗಳು ತಿಳಿಸಿವೆ.

'ಮಹಾ ಯೋಜನೆ (ಮಾಸ್ಟರ್ ಪ್ಲಾನ್) ಅಥವಾ ನಗರ ಯೋಜನಾ ಪ್ರಾಧಿಕಾರದ ಮಂಜೂರಾತಿ ಅನ್ವಯ ಕೃಷಿಭೂಮಿ ಅಥವಾ ಅದರ ಭಾಗವನ್ನು ಯಾವುದಾದರೂ ಇತರ ಉದ್ದೇಶಕ್ಕೆ ಬಳಸಲು ಇಚ್ಛಿಸುವವರು ನಿಗದಿಪಡಿಸಿದ ದಂಡ ಪಾವತಿಸಿ ಪ್ರಮಾಣಪತ್ರ ಸಹಿತ ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಬೇಕು. ಹೀಗೆ ಸಲ್ಲಿಕೆಯಾದ ಅರ್ಜಿಗಳಿಗೆ ಏಳು ದಿನಗಳಲ್ಲಿ ಜಿಲ್ಲಾಧಿಕಾರಿ ಮಂಜೂರಾತಿ ಆದೇಶ ಹೊರಡಿಸಬೇಕು. 15 ದಿನ ಕಳೆದರೂ ಜಿಲ್ಲಾಧಿಕಾರಿ ಅರ್ಜಿಗಳ ವಿಲೇವಾರಿ ಮಾಡದಿದ್ದರೆ, ಕೃಷಿಯೇತರ ಭೂಮಿಯಾಗಿ ಪರಿವರ್ತನೆ ಆಗಿದೆ ಎಂದು ಪರಿಭಾವಿಸಿಕೊಳ್ಳಬಹುದು' ಎಂದು ಪ್ರಸ್ತಾವಿತ ಮಸೂದೆಯಲ್ಲಿ ತಿಳಿಸಲಾಗಿದೆ.

ಮಾಸ್ಟರ್ ಪ್ಲಾನ್ ಪ್ರಕಟವಾಗದೇ ಇದ್ದರೆ ಅಥವಾ ಸ್ಥಳೀಯ ಯೋಜನಾ ಪ್ರದೇಶದ ಹೊರಗಿನ ಕೃಷಿ ಭೂಮಿ ಆಗಿದ್ದರೆ, ಅರ್ಜಿ ಸಲ್ಲಿಕೆಯಾದ 15 ದಿನಗಳ ಒಳಗೆ ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರದ ಅಧಿಕಾರಿಗಳು ಅಭಿಪ್ರಾಯ ನೀಡಬೇಕು. ಆ ಅಭಿಪ್ರಾಯ ಆಧರಿಸಿ ಭೂ ಪರಿವರ್ತನೆಗೆ ಜಿಲ್ಲಾಧಿಕಾರಿ ಮಂಜೂರಾತಿ ನೀಡಬೇಕು. ನಿಗದಿಪಡಿಸಿದ ಅವಧಿಯ ಒಳಗೆ ಅಧಿಕಾರಿಗಳು ಅಭಿಪ್ರಾಯ ನೀಡಲು ವಿಫಲರಾದರೆ, ಭೂ ಪರಿವರ್ತನೆಗೆ ಯಾವುದೇ ಆಕ್ಷೇಪ ಇಲ್ಲವೆಂದು ಭಾವಿಸಿ 30 ದಿನಗಳ ಒಳಗೆ ಜಿಲ್ಲಾಧಿಕಾರಿ ಮಂಜೂರಾತಿ ಆದೇಶ ಹೊರಡಿಸಬೇಕು. ಆ ಅವಧಿಯೊಳಗೆ ಆದೇಶ ಹೊರಡಿಸದಿದ್ದರೆ, ಅನುಮತಿ ನೀಡಲಾಗಿದೆ ಎಂದು ಭಾವಿಸಿಕೊಳ್ಳಲು ಕೂಡಾ ಅವಕಾಶ ನೀಡಲಾಗಿದೆ.

ಪ್ರಮಾಣಪತ್ರದಲ್ಲಿ ಸುಳ್ಳು ಮತ್ತು ತಪ್ಪು ಮಾಹಿತಿ ನೀಡಿದರೆ ಅಪರಾಧವಾಗಲಿದೆ. ಅಲ್ಲದೆ, ಭೂ ಪರಿವರ್ತನೆ ಆದೇಶವನ್ನು ಜಿಲ್ಲಾಧಿಕಾರಿ ರದ್ದುಪಡಿಸಬಹುದು. ಭೂ ಪರಿವರ್ತನೆಗೆ ಕಟ್ಟಿದ ದಂಡ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಭೂ ಪರಿವರ್ತನೆ ಮಾಡಿಕೊಂಡಿದ್ದರೆ, ಅಂಥ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಆದೇಶ ಹೊರಡಿಸಲೂ ಜಿಲ್ಲಾಧಿಕಾರಿಗೆ ಅಧಿಕಾರ ನೀಡಲಾಗಿದೆ.

ಒಟ್ಟು ಕೃಷಿ ಭೂಮಿಯ ಸರ್ವೆ ನಂಬರ್‌ನ ಒಂದು ಭಾಗವನ್ನು ಭೂ ಪರಿವರ್ತನೆ ಮಾಡುವುದಾದರೆ, ಸರ್ವೆ ಸೆಟ್ಲಮೆಂಟ್ ಮತ್ತು ಭೂ ದಾಖಲೆಗಳ ಇಲಾಖೆಯಿಂದ ಮಂಜೂರು ಮಾಡಿದ ಭೂ ಪರಿವರ್ತನೆಗೂ ಮೊದಲಿನ ನಕ್ಷೆಯನ್ನು ಅರ್ಜಿಯ ಜೊತೆ ಕಡ್ಡಾಯವಾಗಿ ಸಲ್ಲಿಸಬೇಕು. ಭೂ ಪರಿವರ್ತನೆಗೆ ಪೂರ್ವದ ನಕ್ಷೆಗಾಗಿ ಸಲ್ಲಿಸಿದ ಅರ್ಜಿಯನ್ನು ಸರ್ವೆ ಸೆಟ್ಲ್‌ಮೆಂಟ್ ಮತ್ತು ಭೂ ದಾಖಲೆಗಳ ಇಲಾಖೆ 15 ದಿನಗಳಲ್ಲಿ ವಿಲೇವಾರಿ ಮಾಡದಿದ್ದರೆ, ಅರ್ಜಿ ವಿಲೇವಾರಿ ಮಾಡಲಾಗಿದೆ ಎಂದು ಭಾವಿಸಬಹುದು ಎಂಬ ಅಂಶವೂ ತಿದ್ದುಪಡಿಯಲ್ಲಿ ಸೇರಿದೆ.

ದಂಡ ಮೊತ್ತ ₹ 1 ಲಕ್ಷಕ್ಕೆ ಹೆಚ್ಚಳ

ಭೂ ಕಂದಾಯ ಕಾಯ್ದೆಯ ಸೆಕ್ಷನ್‌ಗಳನ್ನು ಉಲ್ಲಂಘಿಸಿದರೆ ವಿಧಿಸಲಾಗುವ ದಂಡದ ಮೊತ್ತವನ್ನೂ ಹೆಚ್ಚಿಸುವ ಬಗ್ಗೆಯೂ ತಿದ್ದುಪಡಿ ಮಸೂದೆಯಲ್ಲಿ ಪ್ರಸ್ತಾವವಿದೆ.

ಕೃಷಿ ಭೂಮಿಯನ್ನು ಜಿಲ್ಲಾಧಿಕಾರಿ ಅನುಮತಿ ಇಲ್ಲದೆ ಅನ್ಯ ಉದ್ದೇಶಗಳಿಗೆ ಬಳಸಿದರೆ ಅಥವಾ ಸುಳ್ಳು, ತಪ್ಪು ಪ್ರಮಾಣಪತ್ರ ಸಲ್ಲಿಸಿ ಭೂ ಪರಿವರ್ತನೆ ಮಾಡಿಸಿಕೊಂಡಿದ್ದರೆ ವಿಧಿಸಲಾಗುವ ದಂಡದ ಮೊತ್ತವನ್ನು ₹ 1 ಸಾವಿರದಿಂದ ₹ 1 ಲಕ್ಷಕ್ಕೆ ಹೆಚ್ಚಿಸಲಾಗುವುದು.

ಅಲ್ಲದೆ, ಈ ಕಾನೂನು ಉಲ್ಲಂಘನೆ ಮುಂದುವರಿದರೆ ದಿನವೊಂದಕ್ಕೆ ವಿಧಿಸುವ ₹ 25 ದಂಡ ಮೊತ್ತವನ್ನು ₹ 2,500ಕ್ಕೆ ಹೆಚ್ಚಿಸಲಾಗುವುದು.

ಆನ್‌ಲೈನ್ ಅರ್ಜಿ

ಭೂ ಪರಿವರ್ತನೆಗೆ ಅರ್ಜಿದಾರರು ನಾಡಕಚೇರಿ, ತಾಲ್ಲೂಕು ಕಚೇರಿ, ಜಿಲ್ಲಾಧಿಕಾರಿ ಕಚೇರಿಯಲ್ಲಿ ಆನ್‌ಲೈನ್ ಮೂಲಕ ಡಿ.ಸಿಗೆ ಎನ್‌ಒಸಿ ಇಲ್ಲದೆ, ಕನಿಷ್ಠ ದಾಖಲೆಗಳೊಂದಿಗೆ ಅರ್ಜಿ ಸಲಿಸಬಹುದು. ತಕ್ಷಣ ಇತರೆ ಇಲಾಖೆಗಳು, ಪ್ರಾಧಿಕಾರಗಳ ಅಭಿಪ್ರಾಯಕ್ಕೆ ಅರ್ಜಿಯನ್ನು ಆನ್‌ಲೈನ್ ಮೂಲಕ ಏಕಕಾಲಕ್ಕೆ ಕಳಿಸಲಾಗುತ್ತದೆ. ಅರ್ಜಿದಾರರು ಪ್ರಸಕ್ತ ವರ್ಷದ ಪಹಣಿ, ಹಕ್ಕು ಬದಲಾವಣೆ ದಾಖಲಾತಿ ಪ್ರತಿ, 11-ಇ ನಕ್ಷೆ (ಒಂದು ಸರ್ವೆ ನಂಬರಿನಲ್ಲಿ ಭಾಗಶಃ ಭೂ ಪರಿವರ್ತನೆಗೆ ಮನವಿ ಮಾಡಿದಾಗ ಮಾತ್ರ 11-ಇ ನಕ್ಷೆ ಹಾಜರುಪಡಿಸಬೇಕು), ಪ್ರಮಾಣಪತ್ರ ಸಲ್ಲಿಸಬೇಕು. ಆನ್‌ಲೈನ್ ಮೂಲಕ ಅಭಿಪ್ರಾಯಕ್ಕಾಗಿ ಇತರೆ ಇಲಾಖೆ, ಪ್ರಾಧಿಕಾರಗಳಿಗೆ ಕಳಿಸಿದ ತಕ್ಷಣ ಅಭಿಪ್ರಾಯ, ವರದಿ ಬಾರದಿದ್ದರೆ ಭೂ ಪರಿವರ್ತನೆಗೆ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ಕ್ರಮ ವಹಿಸಲು ಅವಕಾಶ ಕಲ್ಪಿಸಲಾಗಿದೆ.

ಪ್ರಜಾವಾಣಿ ವಿಶೇಷ

ಚಂಡೀಗಡ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯರು ಭಾನುವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಆಕ್ಷೇಪಾರ್ಹ ವಿಡಿಯೊ ಬಯಲು ವದಂತಿ

ಚಂಡೀಗಡ ವಿ.ವಿ: ಪ್ರತಿಭಟನೆ

ಚಂಡೀಗಡ (ಪಿಟಿಐ): ಹಲವು ವಿದ್ಯಾರ್ಥಿನಿಯರ ಆಕ್ಷೇಪಾರ್ಹ ವಿಡಿಯೊಗಳನ್ನು ವಿದ್ಯಾರ್ಥಿನಿಯೊಬ್ಬರು ಚಿತ್ರೀಕರಿಸಿದ್ದಾರೆ ಎಂಬ ವದಂತಿಯ ಬಳಿಕ ಪಂಜಾಬ್‌ನ ಮೊಹಾಲಿಯ ಚಂಡೀಗಡ ವಿಶ್ವವಿದ್ಯಾಲಯವೊಂದರಲ್ಲಿ ಭಾರಿ ಪ್ರತಿಭಟನೆ ಶನಿವಾರ ರಾತ್ರಿ ನಡೆದಿದೆ. ಈ ಕುರಿತು ತನಿಖೆ ನಡೆಸಲು ಮುಖ್ಯಮಂತ್ರಿ ಭಗವಂತ ಮಾನ್ ಆದೇಶ ನೀಡಿದ್ದಾರೆ.

ಪ್ರಾಥಮಿಕ ತನಿಖೆಯ ಬಳಿಕ ಒಬ್ಬ ಆರೋಪಿ ವಿದ್ಯಾರ್ಥಿನಿಯನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಯ ಗೆಳೆಯ ಎಂದು ಹೇಳಲಾದ ಯುವಕನೊಬ್ಬನನ್ನು ಹಿಮಾಚಲ ಪ್ರದೇಶದಲ್ಲಿ ಬಂಧಿಸಲಾಗಿದೆ.

ಪಂಜಾಬ್‌ನ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕಿ ಗುರ್‌ಪ್ರೀತ್ ಕೌರ್ ಅವರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಒಬ್ಬ ವಿದ್ಯಾರ್ಥಿನಿಯು ತನ್ನ ವಿಡಿಯೊವನ್ನು ಯುವಕನೊಬ್ಬನ ಜೊತೆ ಹಂಚಿಕೊಂಡಂತೆ ಕಾಣಿಸುತ್ತಿದೆ. ಇತರ ಯಾವುದೇ ವಿದ್ಯಾರ್ಥಿನಿಯ ಆಕ್ಷೇಪಾರ್ಹವಾದ ವಿಡಿಯೊ ಸಿಕ್ಕಿಲ್ಲ ಎಂದು ಅವರು ಹೇಳಿದ್ದಾರೆ.

ಹಾಸ್ಟೆಲ್‌ನಲ್ಲಿ ಇರುವ ಹಲವು ವಿದ್ಯಾರ್ಥಿನಿಯರ ವಿಡಿಯೊ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಲಾಗಿದೆ ಎಂಬುದು ಸುಳ್ಳು ಮತ್ತು ಆಧಾರರಹಿತ. ವಿದ್ಯಾರ್ಥಿನಿಯರು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂಬುದೂ ಸುಳ್ಳು ಎಂದು ವಿಶ್ವವಿದ್ಯಾಲಯ ಹೇಳಿದೆ.

ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳು ಭಾನುವಾರ ಸಂಜೆಯೂ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರತಿಭಟನೆ ನಡೆಸಿದ್ದಾರೆ. ವಿಶ್ವವಿದ್ಯಾಲಯದ ಆಡಳಿತವು ಘಟನೆಯನ್ನು ಮುಚ್ಚಿಡಲು ಯತ್ನಿಸುತ್ತಿದೆ ಎಂದು ಕೆಲವರು ಆರೋಪಿಸಿದ್ದಾರೆ.

ಬಂಧಿಸಲಾಗಿರುವ ವಿದ್ಯಾರ್ಥಿನಿಯ ಮೊಬೈಲನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅದನ್ನು ವಿಧಿ ವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಮೊಹಾಲಿಯ ಎಸ್‌ಪಿ ವಿವೇಕ್ ಶೀಲ್ ಸೋನಿ ಹೇಳಿದ್ದಾರೆ.

ಹಾಸ್ಟೆಲ್‌ನಲ್ಲಿ 4,000ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಇದ್ದಾರೆ.

ರಾಜಕೀಯ ಪಕ್ಷಗಳ ಆಘಾತ: ರಾಜಕೀಯ ಪಕ್ಷಗಳು, ಕೇಂದ್ರ ಮತ್ತು ರಾಜ್ಯ ಮಹಿಳಾ ಆಯೋಗಗಳು ಘಟನೆಯ ಕುರಿತು ಆಘಾತ ವ್ಯಕ್ತಪಡಿಸಿವೆ. 'ಚಂಡೀಗಡ ವಿಶ್ವವಿದ್ಯಾಲಯದಲ್ಲಿ ಆಗಿರುವುದು ದುರದೃಷ್ಟಕರ. ಹೆಣ್ಣು ಮಕ್ಕಳು ನಮ್ಮ ಗೌರವ. ಘಟನೆಯ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ' ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಹೇಳಿದ್ದಾರೆ.

ಪಂಜಾಬ್ ಮಹಿಳಾ ಆಯೋಗದ ಅಧ್ಯಕ್ಷೆ ಮನೀಷಾ ಗುಲಾಟಿ ಅವರು ವಿಶ್ವವಿದ್ಯಾಲಯಕ್ಕೆ ಭೇಟಿ ಕೊಟ್ಟಿದ್ದಾರೆ.

ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಅವರು ಪಂಜಾಬ್ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. ತಕ್ಷಣವೇ ಎಫ್‌ಐಆರ್ ದಾಖಲಿಸಿ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ ಅಮರಿಂದರ್ ಸಿಂಗ್ ರಾಜಾ ವಾರಿಂಗ್, ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್, ಶಿರೋಮಣಿ ಅಕಾಲಿದಳ ನಾಯಕಿ ಹರ್‌ಸಿಮ್ರತ್ ಕೌರ್ ಬಾದಲ್ ಮತ್ತು ಇತರರು ಮುಕ್ತ ಮತ್ತು ನ್ಯಾಯಸಮ್ಮತ ತನಿಖೆಗೆ ಆಗ್ರಹಿಸಿದ್ದಾರೆ.

ಘಟನೆಯ ಸ್ಪಷ್ಟ ಚಿತ್ರಣ ಇಲ್ಲ

ಹಾಸ್ಟೆಲ್‌ನಲ್ಲಿ ಏನು ನಡೆದಿದೆ ಎಂಬುದರ ಬಗ್ಗೆ ಸ್ಪಷ್ಟ ಚಿತ್ರಣ ಸಿಕ್ಕಿಲ್ಲ.

ಆರೋಪಿ ವಿದ್ಯಾರ್ಥಿನಿಯು ಹಾಸ್ಟೆಲ್‌ನ ಶೌಚಾಲಯದಲ್ಲಿ ಮೊಬೈಲ್ ಬಳಸಿ ಫೋಟೊ ತೆಗೆಯುವುದನ್ನು ಮೂರ್ನಾಲ್ಕು ವಿದ್ಯಾರ್ಥಿನಿಯರು ಗಮನಿಸಿದ್ದಾರೆ. ಆರೋಪಿಯು ಶೌಚಾಲಯದ ಬಾಗಿಲಿನ ಕೆಳಗಿನಿಂದ ಚಿತ್ರೀಕರಿಸಿದ್ದಾರೆ ಎಂದು ಈ ಮೂರ್ನಾಲ್ಕು ವಿದ್ಯಾರ್ಥಿನಿಯರು ಭಾವಿಸಿದ್ದಾರೆ. ಬಳಿಕ, ಅವರು ಹಾಸ್ಟೆಲ್ ವಾರ್ಡನ್‌ಗೆ ವಿಷಯ ತಿಳಿಸಿದ್ದಾರೆ. ನಂತರ ಪೊಲೀಸರಿಗೆ ಮಾಹಿತಿ ನೀಡಲಾಗಿದೆ ಎಂದು ಗುರ್‌ಪ್ರೀತ್ ಹೇಳಿದ್ದಾರೆ.

'ವಿದ್ಯಾರ್ಥಿನಿಯರ ಕಳವಳವನ್ನು ಪರಿಹರಿಸಲಾಗಿದೆ. ಇತರ ವಿದ್ಯಾರ್ಥಿನಿಯರ ವಿಡಿಯೊಗಳು ಆರೋಪಿಯ ಮೊಬೈಲ್‌ನಲ್ಲಿ ಇವೆಯೇ ಎಂಬುದು ಅವರ ಕಳವಳವಾಗಿತ್ತು. ಆದರೆ, ಬೇರೆ ವಿದ್ಯಾರ್ಥಿನಿಯರ ವಿಡಿಯೊ ಆರೋಪಿಯ ಮೊಬೈಲ್‌ನಲ್ಲಿ ಸಿಕ್ಕಿಲ್ಲ' ಎಂದು ಗುರ್‌ಪ್ರೀತ್ ತಿಳಿಸಿದ್ದಾರೆ.

ವಿದ್ಯಾರ್ಥಿನಿಯರು ಆರೋಪಿಯನ್ನು ತರಾಟೆಗೆ ತೆಗೆದುಕೊಳ್ಳುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ವಿಡಿಯೊ ಬಗ್ಗೆ ಸತ್ಯ ಹೇಳುವಂತೆ ವಿದ್ಯಾರ್ಥಿನಿಯರು ಆರೋಪಿಯ ಮೇಲೆ ಒತ್ತಡ ಹೇರಿರುವುದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ವಿಡಿಯೊದಲ್ಲಿ ಇದೆ.

ಹತ್ತಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಆಘಾತಗೊಂಡಿದ್ದಾರೆ ಎಂದು ವಿದ್ಯಾರ್ಥಿನಿಯೊಬ್ಬರು ಹೇಳಿದ್ದಾರೆ.

'ವಿಡಿಯೊ ಚಿತ್ರೀಕರಣ ಮಾಡಿದ್ದು ಏಕೆ? ನಿನ್ನನ್ನು ಅಮಾನತು ಮಾಡುತ್ತೇನೆ' ಎಂದು ಹಾಸ್ಟೆಲ್‌ನ ವಾರ್ಡನ್ ಹೇಳಿದ್ದಾರೆ ಎನ್ನಲಾದ ವಿಡಿಯೊ ಕೂಡ ಸಾಮಾಜಿಕ ಜಾಲತಾಣದಲ್ಲಿ ಇದೆ.

ಲೇಖಕಿಯರ ಸಂಘ: ಪುಷ್ಪಾ ಅಧ್ಯಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆಯಾಗಿ ಕವಯತ್ರಿ ಎಚ್.ಎಲ್.ಪುಷ್ಪಾ ಆಯ್ಕೆ ಆಗಿದ್ದಾರೆ.

ಎಚ್.ಎಲ್. ಪುಷ್ಪಾ

ಬೆಂಗಳೂರಿನ ಎನ್.ಆರ್.ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಭಾನುವಾರ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಹಾಲಿ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್ ಹಾಗೂ ಪುಷ್ಪಾ ಅವರ ನಡುವೆ ನೇರ ಸ್ಪರ್ಧೆ ಏರ್ಪಟ್ಟಿತ್ತು. ಅಂತಿಮವಾಗಿ 62 ಮತಗಳ ಅಂತರದಿಂದ ಪುಷ್ಪಾ ವಿಜೇತರಾಗಿ ಹೊರಹೊಮ್ಮಿದರು. ಎಚ್.ಎಲ್.ಪುಷ್ಪಾ 342, ವನಮಾಲಾ ಸಂಪನ್ನಕುಮಾರ್ 280 ಹಾಗೂ ಶೈಲಜಾ ಸುರೇಶ್ 33 ಮತ ಪಡೆದಿದ್ದಾರೆ.

8ನೇ ಪುಟ ನೋಡಿ

ಕೇರಳದ ಬೇಡಿಕೆ ತಿರಸ್ಕಾರ

ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಕಾಮಗಾರಿ ಸಾಧ್ಯವಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿನ ಪರಿಸರ ಸೂಕ್ಷ್ಮ ಪ್ರದೇಶಗಳು, ವನ್ಯಜೀವಿ ಧಾಮಗಳಲ್ಲಿ ಯಾವುದೇ ಕಾಮಗಾರಿ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಕಾಞಂಗಾಡ್- ಕಾಣಿಯೂರು ರೈಲು ಮಾರ್ಗ ಸೇರಿ ವಿವಿಧ ರೈಲ್ವೆ ಮತ್ತು ಹೆದ್ದಾರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೇರಳ ಸರ್ಕಾರದ ಬೇಡಿಕೆಗಳನ್ನು ತಿರಸ್ಕರಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಇತ್ತೀಚೆಗೆ ನಡೆದ ದಕ್ಷಿಣ ವಲಯ ಪರಿಷತ್ತಿನ ಸಭೆಯಲ್ಲಿ ತೀರ್ಮಾನಿಸಿದಂತೆ ದ್ವಿಪಕ್ಷೀಯ ಮಾತುಕತೆ ನಡೆಸಲು ಬಂದಿದ್ದ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಜತೆ ಭಾನುವಾರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಚರ್ಚೆ ನಡೆಸಿದ ಬಳಿಕ ಬೊಮ್ಮಾಯಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಬಸವರಾಜ ಬೊಮ್ಮಾಯಿ ಅವರು ಸನ್ಮಾನಿಸಿದರು

'ಉದ್ದೇಶಿತ ಕಾಞಂಗಾಡ್ – ಕಾಣಿಯೂರು ರೈಲು ಮಾರ್ಗ ಕೇರಳದಲ್ಲಿ 40 ಕಿ.ಮೀ., ಕರ್ನಾಟಕದಲ್ಲಿ 31 ಕಿ.ಮೀ. ಮಾರ್ಗ ಹೊಂದಿದೆ. ಇದರಿಂದ ಕರ್ನಾಟಕಕ್ಕೆ ಹೆಚ್ಚಿನ ಅನುಕೂಲಗಳಿಲ್ಲ. ಪಶ್ಚಿಮ ಘಟ್ಟದ ಸೂಕ್ಷ್ಮ ಪ್ರದೇಶದಲ್ಲಿ ಈ ಮಾರ್ಗ ಹಾದುಹೋಗಲಿದ್ದು, ಒಪ್ಪಿಗೆ ನೀಡಲಾಗದು ಎಂದು ಸ್ಪಷ್ಟಪಡಿಸಲಾಗಿದೆ' ಎಂದರು.

'ಹಳೆಯ ಯೋಜನೆಯಾದ ತಲಚೇರಿ- ಮೈಸೂರು ರೈಲು ಯೋಜನೆ ಕೂಡಾ ಬಂಡೀಪುರ-ನಾಗರಹೊಳೆ ರಾಷ್ಟ್ರೀಯ ಉದ್ಯಾನದ ನಡುವೆ ಹಾದು ಹೋಗಲಿದೆ. ಅಲ್ಲಿನ ವನ್ಯಜೀವಿ ಸಂಪತ್ತು ಹಾಗೂ ಅರಣ್ಯ ಸಂಪತ್ತಿಗೆ ಹಾನಿಯಾಗಲಿದೆ. ಹೀಗಾಗಿ, ಇದಕ್ಕೂ ಒಪ್ಪಿಗೆ ನೀಡಲು ಸಾಧ್ಯವಿಲ್ಲ ಎಂದು ತಿಳಿಸಲಾಗಿದೆ. ಆಗ ಭೂಗತ ರೈಲು ಮಾರ್ಗ ನಿರ್ಮಿಸುವ ಕುರಿತು ಕೇರಳ ಸಿ.ಎಂ ಪ್ರಸ್ತಾಪಿಸಿದರು. ಆದರೆ, ಇದರಿಂದಲೂ ಪರಿಸರಕ್ಕೆ ಹಾನಿಯಾಗಲಿದೆ. ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಲಾಗಿದೆ' ಎಂದರು.

'ಬಂಡೀಪುರ ರಾಷ್ಟ್ರೀಯ ಉದ್ಯಾನದ ಮೂಲಕ ಕೇರಳಕ್ಕೆ ರಾತ್ರಿ ವೇಳೆ ಎರಡು ಬಸ್‌ಗಳು ಸಂಚರಿಸುತ್ತಿವೆ. ಇನ್ನೂ ಎರಡು ಬಸ್‌ಗಳ ಸಂಚಾರಕ್ಕೆ ಅನುಮತಿ ನೀಡುವಂತೆ ಕೇರಳ ಕೋರಿಕೆ ಸಲ್ಲಿಸಿದೆ. ಅದಕ್ಕೂ ಸರ್ಕಾರ ಒಪ್ಪಿಗೆ ನೀಡಿಲ್ಲ' ಎಂದರು.

ಹೈಕೋರ್ಟ್ ಆದೇಶ ಪ್ರಶ್ನಿಸಿ ಬಿಎಸ್‌ವೈ 'ಸುಪ್ರೀಂ'ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮ್ಮ ವಿರುದ್ಧದ ಭ್ರಷ್ಟಾಚಾರ ಆರೋಪದ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯಪಾಲರ ಪೂರ್ವಾನುಮತಿ ಇಲ್ಲದಿದ್ದರೂ ತನಿಖೆ ನಡೆಸುವಂತೆ ಕರ್ನಾಟಕ ಹೈಕೋರ್ಟ್ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಹಿಮಾ ಕೊಹ್ಲಿ ಅವರಿರುವ ನ್ಯಾಯಪೀಠವು ಸೋಮವಾರ ಈ ಅರ್ಜಿಯ ವಿಚಾರಣೆ ನಡೆಸಲಿದೆ.

ಯಡಿಯೂರಪ್ಪ ಸೇರಿದಂತೆ ಒಂಬತ್ತು ಮಂದಿ ವಿರುದ್ಧದ ಭ್ರಷ್ಟಾಚಾರ ಆರೋಪಗಳ ಕುರಿತು ತನಿಖೆಗೆ ಆದೇಶಿಸುವಂತೆ ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು.

ಅಕ್ಕಿ ಬೆಲೆ ಇಳಿಕೆ ಸಾಧ್ಯತೆ ಕಡಿಮೆ

ನವದೆಹಲಿ (ಪಿಟಿಐ): ಭತ್ತ ಬಿತ್ತನೆಯ ಪ್ರದೇಶ ಕಡಿಮೆ ಆಗಿರುವ ಕಾರಣದಿಂದಾಗಿ ಅಕ್ಕಿ ಉತ್ಪಾದನೆಯು ಗರಿಷ್ಠ 70 ಲಕ್ಷ ಟನ್‌ನಷ್ಟು ಕಡಿಮೆ ಆಗಲಿದ್ದು, ಅಕ್ಕಿಯ ಬೆಲೆಯು ಅಧಿಕ ಮಟ್ಟದಲ್ಲಿಯೇ ಉಳಿಯುವ ಸಾಧ್ಯತೆ ಇದೆ. ಇದು ಹಣದುಬ್ಬರವನ್ನು ಹೆಚ್ಚಿನ ಮಟ್ಟದಲ್ಲಿ ಇರಿಸಬಹುದು ಎಂದು ಅಂದಾಜಿಸಲಾಗಿದೆ.

ಆಹಾರ ವಸ್ತುಗಳ ಬೆಲೆ ಏರಿಕೆ ಪರಿಣಾಮವಾಗಿ ಆಗಸ್ಟ್‌ನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 7ಕ್ಕೆ ಏರಿಕೆ ಆಗಿದೆ.

ಜೂನ್‌ಗೆ ಕೊನೆಗೊಂಡ 2021–22ನೇ ಬೆಳೆ ವರ್ಷದಲ್ಲಿ ದೇಶದಲ್ಲಿ ಅಕ್ಕಿಯ ಉತ್ಪಾದನೆಯು ದಾಖಲೆಯ 13.02 ಕೋಟಿ ಟನ್ ಆಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಅಕ್ಕಿ ಉತ್ಪಾದನೆ 12.43 ಟನ್ ಮಾತ್ರ ಆಗಿತ್ತು. ಕೇಂದ್ರ ಆಹಾರ ಸಚಿವಾಲಯದ ಅಂದಾಜಿನ ಪ್ರಕಾರ, ಈ ಬಾರಿಯ ಮುಂಗಾರು ಹಂಗಾಮಿನಲ್ಲಿ ಅಕ್ಕಿಯ ಉತ್ಪಾದನೆಯು 60 ಲಕ್ಷ ಟನ್‌ನಿಂದ 70 ಲಕ್ಷ ಟನ್‌ವರೆಗೆ ಕಡಿಮೆ ಆಗಬಹುದು. ದೇಶದ ಒಟ್ಟು ಅಕ್ಕಿ ಉತ್ಪಾದನೆಯಲ್ಲಿ ಶೇಕಡ 85ರಷ್ಟು ಮುಂಗಾರು ಹಂಗಾಮಿನಲ್ಲಿ ಆಗುತ್ತದೆ.

ಈಗಿನ ಹಂತದಲ್ಲಿ ಆತಂಕಕ್ಕೆ ಒಳಗಾಗುವ ಅಗತ್ಯ ಇಲ್ಲ. ದೇಶದಲ್ಲಿ ಇರುವ ಅಕ್ಕಿಯ ಹೆಚ್ಚುವರಿ ದಾಸ್ತಾನು ಸಾರ್ವಜನಿಕ ಪಡಿತರ ವ್ಯವಸ್ಥೆಯ (ಪಿಡಿಎಸ್) ಅಡಿ ಪೂರೈಕೆಗೆ ಸಾಕಾಗುವಷ್ಟಿದೆ ಎಂಬುದು ಕೆಲವರ ಅಭಿಪ್ರಾಯ. ನುಚ್ಚಕ್ಕಿ ರಫ್ತು ನಿಷೇಧ ಹಾಗೂ ಇತರ ಅಕ್ಕಿ ರಫ್ತಿಗೆ (ಬಾಸ್ಮತಿ ಹೊರತುಪಡಿಸಿ) ಶೇಕಡ 20ರಷ್ಟು ತೆರಿಗೆ ವಿಧಿಸಿರುವ ಪರಿಣಾಮವಾಗಿ ಬೆಲೆ ನಿಯಂತ್ರಣದಲ್ಲಿ ಇರುತ್ತದೆ ಎಂಬ ಅಭಿಪ್ರಾಯವಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ನೀಡಿರುವ ಅಂಕಿ–ಅಂಶಗಳ ಅನ್ವಯ ಅಕ್ಕಿಯ ಸಗಟು ಬೆಲೆಯು ಒಂದು ವರ್ಷದಲ್ಲಿ ಶೇ 10.7ರಷ್ಟು ಹೆಚ್ಚಾಗಿದೆ. ಚಿಲ್ಲರೆ ಮಾರಾಟ ಬೆಲೆಯು ಕೆ.ಜಿ.ಗೆ ಶೇ 9.47ರಷ್ಟು ಜಾಸ್ತಿ ಆಗಿದೆ.

ಪರಿಸ್ಥಿತಿ ನಿಭಾಯಿಸಲು ಸಾಧ್ಯವಾಗುವ ರೀತಿಯಲ್ಲಿ ಈಚೆಗೆ ಕೆಲವು ಕ್ರಮ ಕೈಗೊಂಡಿರುವ ಕಾರಣ ಭಯಪಡುವ ಅಗತ್ಯವಿಲ್ಲ ಎಂದು ಸರ್ಕಾರದ ಅಧಿಕಾರಿಗಳು ಹೇಳಿದ್ದಾರೆ. 'ದೇಶಿ ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆ ಭಾರಿ ಪ್ರಮಾಣದಲ್ಲಿ ಏರುವಂತೆ ಕಾಣುತ್ತಿಲ್ಲ. ಕನಿಷ್ಠ ಬೆಂಬಲ ಬೆಲೆ ಹೆಚ್ಚಳ ಹಾಗೂ ರಸಗೊಬ್ಬರ, ಇಂಧನ ಬೆಲೆ ಏರಿಕೆಯ ಕಾರಣದಿಂದಾಗಿ ಅಕ್ಕಿ ಬೆಲೆ ಒಂದಿಷ್ಟು ಹೆಚ್ಚಾಗಿದೆ. ಇತರ ಎಲ್ಲ ಸರಕುಗಳ ಬೆಲೆ ಹೆಚ್ಚಾಗುತ್ತಿರುವಾಗ ಇದರ ಬೆಲೆಯೂ ಒಂದಿಷ್ಟು ಹೆಚ್ಚಾಗುತ್ತದೆ' ಎಂದು ನೀತಿ ಆಯೋಗದ ಸದಸ್ಯ ರಮೇಶ್ ಚಂದ್ ಹೇಳಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅಂಕಿ–ಅಂಶ

10.7%
ಒಂದು ವರ್ಷದಲ್ಲಿ ಅಕ್ಕಿಯ ಸಗಟು ಬೆಲೆ ಏರಿಕೆ

9.47%
ಒಂದು ವರ್ಷದಲ್ಲಿ ಅಕ್ಕಿಯ ಚಿಲ್ಲರೆ ಮಾರಾಟ ಬೆಲೆ ಹೆಚ್ಚಳ

6.94%
ಆಗಸ್ಟ್‌ನಲ್ಲಿ ಅಕ್ಕಿಯ ಹಣದುಬ್ಬರ ಪ್ರಮಾಣ

70 ಲಕ್ಷ ಟನ್
ಮುಂಗಾರು ಹಂಗಾಮಿನಲ್ಲಿ ಅಕ್ಕಿ ಉತ್ಪಾದನೆ ಕುಸಿತದ ಅಂದಾಜು

9ನೇ ಪುಟ ನೋಡಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

Research Associates

XIME, Bangalore needs a number of Research Associates / Assistants for its growing Research efforts:

Qualification: 1st class / high 2nd class Master's in Economics / Statistics / Commerce / Business / English.

Apply immediately to: secretary@xime.org

XIME
Electronics City, Bangalore
Tel: +91 80-28528597/98
Mob: 9845280734
Website: www.xime.org

Part-Time Jobs

MNC CO, Great Opportunity Work from Home, Earn Unlimited, Part/ Full. Time Job: 7019215243/ 9886641282

Teachers/ Professors

Sri Rakum High School
421/I, Sri Krishna Temple Road, Indiranagar 1st stage, Bengaluru-560038
Tel: 080 - 25215705
Email: rakumarakum@yahoo.com
Wanted
Science, Maths, English and Social science Teacher, for Primary & High School Students
Female Teacher - Rs.15000- 20000

Multiple Vacancy

REQUIRED, TEAMLEADER, & FieldExecutive For BankLoan collection. direct recruitment to company. Contact: 9620206756, 9620200756.

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

To place your ad in Deccan Herald & Prajavani Classifieds

DH Classifieds
More value, more impact

For details contact:

Vishal	: 9845114560
Jerry	: 9731810277
Tanveer	: 9886213331
Ravichandra	: 9901641752

E-mail: dhclassifieds@deccanherald.co.in

EDUCATION CORNER

2nd PU Failed?

Don't be left behind!

A golden opportunity to study degree under Bangalore University this academic year and save one precious year of your life.

BBA B.Com BCA BA

Limited seats. For admissions call:

2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:

7846000222

BUSINESS

Business Offers

Finance

URGENT LOAN Avail @ 3.5% per Annum Personal, Business Projects takeover all types loan. Maa Sherawali Finance Call & whatsApp: 8826494700.

NRI'S INVESTMENT
And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

TIRED OF trading with different platforms. Experience completely new form of trading and secure gurantee income on your investment. We will give you best services and new way of trading. For more details visit- www.globalshippingandtrading.com Contact:9699500429/ 9324124538

PERSONAL

Change of Name

I, GEETHA K., W/o Yogananda B, residing at No. 54 Ground floor SBM Road KSRTC Layout, Subramanyapura, Bangalore 560061 have changed my son's name from HARIYUKTH M.K. to SHREEHARI Y.G. vide affidavit dated 05.09.2022 before Notary B.S. Padmaprasad, Bangalore. Henceforth he shall be called SHREEHARI Y.G. only

I MIR MOHAMMED BAKER S/O MIR HAMZA HUSSAIN residence at alipur Gauribidanur taluk chikkaballapur district Karnataka have changed my name to MIR MOHAMMED BAKHER my correct date of birth is 19.05.1974 vide affidavit dated 15.09.2022 before notary MS ANANDA Gauribidanur

I,SANDEEP KUMAR BAID changed my name to SANDEEP KUMAR JAIN Dated:-16-09-2022. Sworn before notary HS.SAKALESH ARADHYA,Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಹಿಂದುಳಿದ ವರ್ಗಗಳ ಮಹಾ ಒಕ್ಕೂಟದ ರಾಜ್ಯಮಟ್ಟದ ಅಧಿವೇಶನ

‘ಒಕ್ಕಲಿಗ ಮೀಸಲಾತಿಗೆ ಅಂಬೇಡ್ಕರ್ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಿಂಗಾಯತರು, ಒಕ್ಕಲಿಗರಿಗೆ ಮೀಸಲಾತಿ ಸಿಕ್ಕಿದ್ದರೆ ಅದಕ್ಕೆ ಬಿ.ಆರ್. ಅಂಬೇಡ್ಕರ್ ಕಾರಣ’ ಎಂದು ಹಿಂದುಳಿದ ದಲಿತ(ಹಿಂದ) ಒಕ್ಕೂಟದ ಅಧ್ಯಕ್ಷ ಕೆ.ಮುಕಡಪ್ಪ ಹೇಳಿದರು.

ಕರ್ನಾಟಕ ಪ್ರದೇಶ ಹಿಂದುಳಿದ ವರ್ಗಗಳ ಮಹಾ ಒಕ್ಕೂಟ ಆಯೋಜಿಸಿದ್ದ ಹಿಂದುಳಿದ ವರ್ಗಗಳ ರಾಜ್ಯಮಟ್ಟದ ಅಧಿವೇಶನದಲ್ಲಿ ಅವರು ಮಾತನಾಡಿದರು.

‘ಭಾರತದಲ್ಲಿ ಮೀಸಲಾತಿ ಪರಿಕಲ್ಪನೆಯೇ ಇರಲಿಲ್ಲ. 1902ರಲ್ಲಿ ಭಾರತದಲ್ಲೇ ಮೊದಲ ಬಾರಿಗೆ ಮೀಸಲಾತಿ ಪದ್ಧತಿಯನ್ನು ಶಾಹು ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಜಾರಿಗೆ ತಂದರು. ದಲಿತರಿಂದ ಹೋಟೆಲ್ ತೆರೆಸಿ ಅಲ್ಲಿ ಊಟ, ಉಪಾಹಾರ ಸೇವಿಸುವವರಿಗೆ ಅರಮನೆಯಲ್ಲಿ ಕೆಲಸ ಕೊಡುತ್ತೇನೆ ಎಂದು ಘೋಷಣೆ ಮಾಡಿದವರು ಇದೇ ಶಾಹು ಮಹಾರಾಜರು’ ಎಂದು ಬಣ್ಣಿಸಿದರು.

‘ಶಾಹು ಮಹಾರಾಜರು ಮೈಸೂರಿಗೆ ಭೇಟಿ ನೀಡಿದಾಗ ಅವರಿಂದ ಪ್ರೇರಿತರಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದಲ್ಲೂ ಮೀಸಲಾತಿ ಪದ್ಧತಿಯನ್ನು 1921ರಲ್ಲಿ ಜಾರಿಗೆ ತಂದರು. ಸರ್ ಎಂ.ವಿಶ್ವೇಶ್ವರಯ್ಯ ಅವರಿಂದ ಸ್ವಲ್ಪಮಟ್ಟಿನ ಆಕ್ಷೇಪ ವ್ಯಕ್ತವಾದರೂ ನಾಲ್ವಡಿ ಕೃಷ್ಣರಾಜ ಒಡೆಯರು ಶೇ 75ರಷ್ಟು ಮೀಸಲಾತಿ ನೀಡಿದರು. ಅದಾದ ಬಳಿಕ ಕರ್ನಾಟಕದಲ್ಲಿ ಲಿಂಗಾಯತ, ಒಕ್ಕಲಿಗ ಸೇರಿ ಸಣ್ಣಪುಟ್ಟ ಜಾತಿಯವರೂ ಶಿಕ್ಷಣ ಪಡೆಯಲು ಅವಕಾಶ ಆಯಿತು’ ಎಂದು ವಿವರಿಸಿದರು.

‘ಸ್ವಾತಂತ್ರ್ಯಾನಂತರ ಸಂವಿಧಾನದಲ್ಲಿ ಮೀಸಲಾತಿಯನ್ನು ಅಂಬೇಡ್ಕರ್ ಅವರು ಸೇರ್ಪಡೆ ಮಾಡಿದರು. ಅದನ್ನು ಪ್ರಶ್ನಿಸಿ ಮದ್ರಾಸ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಯಿತು. ಮೀಸಲಾತಿ ನೀಡುವುದು ಸಂವಿಧಾನಬಾಹಿರ ಎಂಬ ಆದೇಶ ಹೊರಬಿತ್ತು. ಸುಪ್ರೀಂ ಕೋರ್ಟ್ ಕೂಡ ಇದೇ ಆದೇಶವನ್ನು ಎತ್ತಿ ಹಿಡಿಯಿತು. ಆಗ ಸಂವಿಧಾನಕ್ಕೆ ಮೊದಲ ತಿದ್ದುಪಡಿಯನ್ನು ಅಂಬೇಡ್ಕರ್ ಅವರೇ ತಂದರು. ಈ ತಿದ್ದುಪಡಿಯಾಗಿದ್ದರಿಂದ ಮೀಸಲಾತಿ ಕಾನೂನುಬದ್ಧವಾಯಿತು. ಅಂಬೇಡ್ಕರ್ ಕೇವಲ ದಲಿತ ನಾಯಕರಲ್ಲ, ಎಲ್ಲಾ ವರ್ಗದ ನಾಯಕ’ ಎಂದು ಹೇಳಿದರು.

‘ಡಿ.ದೇವರಾಜ ಅರಸು ಅವರು ಹಾವನೂರು ಆಯೋಗದ ಮೂಲಕ ವರದಿ ಪಡೆದು ಮೀಸಲಾತಿ ಪ್ರಮಾಣವನ್ನು ಶೇ 50ಕ್ಕೆ ಹೆಚ್ಚಳ ಮಾಡಿದರು. ಭೂಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದರು. ಅವರ ಯೋಜನೆಗಳು ಇಡೀ ಭಾರತಕ್ಕೆ ಮಾದರಿಯಾದವು’ ಎಂದು ಹೇಳಿದರು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸೈದಪ್ಪ ಕೆ.ಗುತ್ತೇದಾರ, ‘ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿ ಆಗಿದ್ದಾಗ ಹಿಂದುಳಿದ ವರ್ಗದ 90ಕ್ಕೂ ಹೆಚ್ಚು ಮಂದಿ ಶಾಸಕರಿದ್ದರು. ಮುಂದಿನ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳಿಗೆ ಹೆಚ್ಚಿನ ಅವಕಾಶಗಳನ್ನು ಎಲ್ಲಾ ಪಕ್ಷಗಳು ನೀಡಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಇರುವಂತೆ ಮೀಸಲು ಕ್ಷೇತ್ರ ಪಡೆದುಕೊಳ್ಳಲು ಹೋರಾಟ ಮಾಡಬೇಕಾಗಿದೆ’ ಎಂದರು.

ಡಿ.ದೇವರಾಜ್ ಅರಸು ಭಾವಚಿತ್ರಕ್ಕೆ ಕೆ. ಮುಕಡಪ್ಪ ಪುಷ್ಪಾರ್ಚನೆ ಮಾಡಿದರು. ಅಖಿಲ ಭಾರತ ಉಪ್ಪಾರರ ಮಹಾಸಭಾ ಅಧ್ಯಕ್ಷ ಹೊನ್ನಪ್ಪ ಬಂಡಿ, ದೇವರಾಜ್ ಅರಸು ದತ್ತು ಪುತ್ರ ಜಿ.ಎಂ.ಬಾಬು, ಕರ್ನಾಟಕ ತಿಗಳ ಕ್ಷತ್ರಿಯ ಮಹಾಸಭಾದ ಅಧ್ಯಕ್ಷ ಎಚ್ ಸುಬ್ಬಣ್ಣ ಇದ್ದರು —ಪ್ರಜಾವಾಣಿ ಚಿತ್ರ

ಲಲಿತಾ, ಚಂದ್ರಶೇಖರ್ ಆಲೂರುಗೆ ‘ಪ್ರೊ.ಸಣ್ಣಗುಡ್ಡಯ್ಯ ಸಾಹಿತ್ಯ ಪ್ರಶಸ್ತಿ’

ಬೆಂಗಳೂರು: ಪ್ರೊ.ಎಚ್.ಜಿ. ಸಣ್ಣಗುಡ್ಡಯ್ಯ ಪ್ರತಿಷ್ಠಾನ ನೀಡುವ ‘ಪ್ರೊ. ಸಣ್ಣಗುಡ್ಡಯ್ಯ ಸಾಹಿತ್ಯ ಪ್ರಶಸ್ತಿ’ಗೆ ಲಲಿತಾ ಸಿದ್ದಬಸವಯ್ಯ ಹಾಗೂ ಚಂದ್ರಶೇಖರ್ ಆಲೂರು ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿ ತಲಾ ₹ 10 ಸಾವಿರ ನಗದು ಒಳಗೊಂಡಿದೆ. ಕಾವ್ಯ ಮತ್ತು ಲಲಿತ ಪ್ರಬಂಧ ಪ್ರಕಾರದಲ್ಲಿ ಸಾಹಿತ್ಯ ಸೃಷ್ಟಿಸಿದವರಿಗೆ ಈ ಬಾರಿ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ಇದೇ 21 ರಂದು ತುಮಕೂರಿನಲ್ಲಿ ನಡೆಯಲಿದೆ. ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಗೌರವಾಧ್ಯಕ್ಷ ಬರಗೂರು ರಾಮಚಂದ್ರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ನೇಹಿತೆಯ ಮನೆಯಲ್ಲೇ ಚಿನ್ನಾಭರಣ ಕಳವು

ಬೆಂಗಳೂರು: ವಿದ್ಯಾರಣ್ಯಪುರದ ಗುರುದರ್ಶನ ಬಡಾವಣೆಯಲ್ಲಿ ಚಿನ್ನಾಭರಣದ ಡಿಸೈನ್ ನೋಡಲು ಬಂದ ಸ್ನೇಹಿತೆಯೇ ಚಿನ್ನ ಹಾಗೂ ಬೆಳ್ಳಿ ಸಾಮಗ್ರಿ ಕಳವು ಮಾಡಿದ್ದು, ಆರೋಪಿ ಕೆಂಗೇರಿಯ ನಿವಾಸಿ ಪಿ.ಜಿ.ಗೀತಾ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

‘ಲಕ್ಷ್ಮಿ ಎಂಬುವರು ಹೊಸದಾಗಿ ಚಿನ್ನಾಭರಣ ಖರೀದಿಸಿದ್ದರು. ಅದನ್ನು ನೋಡಲು ಗೀತಾ ಬಂದಿದ್ದಳು. ಅಂದು ಅವರ ಮನೆಯಲ್ಲೇ ವಾಸ್ತವ್ಯ ಮಾಡಿದ್ದ ಆಕೆ ರಾತ್ರಿ 10 ಗ್ರಾಂ ಆಭರಣ ಕಳವು ಮಾಡಿ ಪರಾರಿ ಆಗಿದ್ದಳು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗೀತಾ

‘ಬಂಧಿತ ಆರೋಪಿಯಿಂದ ₹ 9.84 ಲಕ್ಷ ಮೌಲ್ಯದ 216 ಗ್ರಾಂ ಚಿನ್ನಾಭರಣ, 230 ಗ್ರಾಂ ಬೆಳ್ಳಿಯ ಕಾಲ್ಗೆಜ್ಜೆ ವಶಕ್ಕೆ ಪಡೆಯಲಾಗಿದೆ’ ಎಂದು ಹೇಳಿವೆ.

ನಕಲಿ ವೆಬ್‌ಸೈಟ್ ವಂಚನೆ: ಬಿಹಾರದ ಮೂವರ ಬಂಧನ

ಮುಕೇಶ್

ವಿಜಯ್

ಬ್ರಹ್ಮದೇವ್

ಬೆಂಗಳೂರು: ವಿ ಆರ್ ಎಲ್ ಮೂವರ್ಸ್ ಅಂಡ್ ಪ್ಯಾಕರ್ಸ್ ಹೆಸರಿನಲ್ಲಿ ನಕಲಿ ವೆಬ್‌ಸೈಟ್ ತೆರೆದು ಸಾರ್ವಜನಿಕರಿಗೆ ವಂಚಿಸುತ್ತಿದ್ದ ಬಿಹಾರದ ಮೂವರು ಆರೋಪಿಗಳನ್ನು ಈಶಾನ್ಯ ವಿಭಾಗದ ಸಿಇಎನ್ ಪೊಲೀಸರು ಬಂಧಿಸಿದ್ದಾರೆ.

ಯಶವಂತಪುರದಲ್ಲಿ ನೆಲೆಸಿದ್ದ ಬ್ರಹ್ಮದೇವ್ ಯಾದವ್ (25), ಮುಕೇಶ್ ಕುಮಾರ್ ಯಾದವ್, ವಿಜಯ್ ಕುಮಾರ್ ಯಾದವ್ (22) ಬಂಧಿತರು.

‘ನಗರದಿಂದ ವಿವಿಧೆಡೆಗೆ ದ್ವಿಚಕ್ರ ವಾಹನ ಕಳುಹಿಸಲು ಗೂಗಲ್‌ಗೆ ಹೋಗಿ ಪ್ಯಾಕರ್ಸ್ ಅಂಡ್ ಮೂವರ್ಸ್ ಎಂದು ನಮೂದಿಸಿದರೆ ವಿಆರ್‌ಎಲ್ ಮೂವರ್ಸ್ ಅಂಡ್ ಪ್ಯಾಕರ್ಸ್ ಎಂಬ ಹೆಸರಿನಲ್ಲಿ ನಕಲಿ ವೆಬ್‌ಸೈಟ್ ತೆರೆದುಕೊಳ್ಳುತ್ತಿತ್ತು. ಇದನ್ನೇ ನಂಬಿದ ಗ್ರಾಹಕರೊಬ್ಬರು ಕರೆ ಮಾಡಿ ವಿಚಾರಿಸಿದಾಗ, ಖಾತೆಗೆ ₹ 1 ಸಾವಿರ ಹಾಕಲು ಆರೋಪಿಗಳು ಹೇಳಿದ್ದರು. ಮರುದಿನ ಇಬ್ಬರೂ ಬಂದು ದ್ವಿಚಕ್ರ ವಾಹನವನ್ನು ಪ್ಯಾಕ್ ಮಾಡಿ, ಕೊಂಡೊಯ್ದಿದ್ದರು. ಅದಾದ ಮೇಲೆ ₹ 8 ಸಾವಿರ ನೀಡಿದರೆ ಬೈಕ್ ನೀಡುವುದಾಗಿ ಬೆದರಿಕೆ ಒಡ್ಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬೇರೆ ಬೇರೆ ಹೆಸರಿನಲ್ಲಿ ನಕಲಿ ವೆಬ್‌ಸೈಟ್ ತೆರೆದು ಮೂವರೂ ವಂಚಿಸುತ್ತಿದ್ದರು. ಮೊದಲು ಕಡಿಮೆ ಹಣ ಪಡೆದು, ವಾಹನ ಸಿಕ್ಕಿದ ಮೇಲೆ ಹೆಚ್ಚಿನ ಹಣ ಸುಲಿಗೆ ಮಾಡುತ್ತಿದ್ದರು. ಒಂದು ಬೈಕ್, ನಾಲ್ಕು ಮೊಬೈಲ್ ವಶಕ್ಕೆ ಪಡೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಜನನ: 14–03–1961 | ಮರಣ: 06–09–2022

ದಿ|| ಶ್ರೀ ಉಮೇಶ ವಿಶ್ವನಾಥ ಕತ್ತಿ

ಅರಣ್ಯ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವರು, ಕರ್ನಾಟಕ ಸರ್ಕಾರ

ಕೃತಜ್ಞತೆಗಳು

ನಮ್ಮ ಕುಟುಂಬದ ಹಿರಿಯರು ಹಾಗೂ ಕರ್ನಾಟಕ ಸರ್ಕಾರದ ಅರಣ್ಯ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವರಾಗಿದ್ದ **ಶ್ರೀ ಉಮೇಶ ವಿಶ್ವನಾಥ ಕತ್ತಿ** (61) ಇವರು ಮಂಗಳವಾರ, ದಿನಾಂಕ: 06/09/2022 ರಂದು ಅಕಾಲಿಕ ನಿಧನರಾಗಿರುವುದು ನಮಗೆಲ್ಲ ಅತೀವ ದು:ಖ ಮತ್ತು ಆಘಾತವಾಗಿದೆ.

ದಿನಾಂಕ: 07/09/2022 ರಂದು ಜರುಗಿದ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ, ನಮ್ಮ ದು:ಖ ಸಾಗರದಲ್ಲಿ ಸಮಭಾಗಿಗಳಾಗಿ, ಈ ಕಠಿಣ ಗಳಿಗೆಯಲ್ಲಿ ಸಾಂತ್ವನ ಹೇಳಿ, ಅಂತ:ಕರಣ ತೋರಿಸಿ, ಆತ್ಮಸ್ಥೈರ್ಯ ತುಂಬಿದ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ, ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸಚಿವರುಗಳಿಗೆ, ಲೋಕಸಭಾ ಮತ್ತು ರಾಜ್ಯಸಭೆಯ ಹಾಲಿ ಮತ್ತು ಮಾಜಿ ಸದಸ್ಯರುಗಳಿಗೆ, ಕರ್ನಾಟಕ ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತಿನ ಹಾಲಿ ಮತ್ತು ಮಾಜಿ ಶಾಸಕರುಗಳಿಗೆ, ಮಹಾರಾಷ್ಟ್ರ ರಾಜ್ಯದ ಮಾಜಿ, ಹಾಲಿ ಲೋಕಸಭಾ, ರಾಜ್ಯಸಭಾ ಸದಸ್ಯರುಗಳಿಗೆ ಹಾಗೂ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಹಾಲಿ ಹಾಗೂ ಮಾಜಿ ಶಾಸಕರಿಗೆ, ಗಣ್ಯಮಾನ್ಯರಿಗೆ, ರಾಜ್ಯ ಸರ್ಕಾರದ ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ, ಬೆಳಗಾವಿ ಜಿಲ್ಲಾಡಳಿತದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ, ತಾಲೂಕಾಡಳಿತದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ, ಜಿಲ್ಲೆಯ ಹಿರಿಯ ಮತ್ತು ಕಿರಿಯ ಸಹಕಾರಿ ಧುರೀಣರಿಗೆ, ಜಿಲ್ಲೆಯ ಹಿರಿಯ ಮತ್ತು ಕಿರಿಯ ಪಕ್ಷಾತೀತ ಧುರಿಣರು ಮತ್ತು ಕಾರ್ಯಕರ್ತರುಗಳಿಗೆ, ಎಲ್ಲಾ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ, ಪತ್ರಿಕಾ ಸಂಪಾದಕರಿಗೆ, ಪತ್ರಕರ್ತರಿಗೆ ಹಾಗೂ ಟಿ.ವಿ. ಮಾಧ್ಯಮದವರಿಗೆ, ಸಮಸ್ತ ರೈತಬಾಂಧವರಿಗೆ, ಕಾರ್ಮಿಕ ಬಂದು–ಮಿತ್ರರಿಗೆ ಹಾಗೂ ಜನತೆಗೆ ಅನಂತ ನಮನಗಳು.

ಈ ಕಠಿಣ ಗಳಿಗೆಯಲ್ಲಿ ಪತ್ರಗಳ ಮೂಲಕ ಸಂತಾಪ ಸೂಚಿಸಿ, ನಮ್ಮ ಕುಟುಂಬಕ್ಕೆ ಆತ್ಮಸ್ಥೈರ್ಯ ತುಂಬಿರುವ ಭಾರತ ಸರ್ಕಾರದ ಮಾನ್ಯ ಪ್ರಧಾನ ಮಂತ್ರಿಗಳು, ಕರ್ನಾಟಕ ರಾಜ್ಯದ ಗೌರವಾನ್ವಿತ ರಾಜ್ಯಪಾಲರು, ಕೇಂದ್ರ ಸರ್ಕಾರದ ಸಂಪುಟ ಸಚಿವರುಗಳು, ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು, ಪದಾಧಿಕಾರಿಗಳು, ಸಂಘ ಪರಿವಾರದ ಪದಾಧಿಕಾರಿಗಳು ಹಾಗೂ ಇನ್ನಿತರ ಗಣ್ಯಮಾನ್ಯರುಗಳಿಗೆ ಅನಂತ ಕೃತಜ್ಞತೆಗಳು.

ದುಃಖತಪ್ತರು

ಶ್ರೀಮತಿ ಶೀಲಾ ಉಮೇಶ ಕತ್ತಿ

ಶ್ರೀ ಪವನ ರಮೇಶ ಕತ್ತಿ,
ಅಧ್ಯಕ್ಷರು,
ಬೆಲ್ಲದ ಬಾಗೇವಾಡಿ ಅರ್ಬನ್ ಸಹಕಾರಿ ಬ್ಯಾಂಕ ನಿ.,
ಬೆಲ್ಲದ ಬಾಗೇವಾಡಿ ಹಾಗೂ
ಬೆಳಗಾವಿ ಜಿಲ್ಲಾ ಪಂಚಾಯತ ಮಾಜಿ ಸದಸ್ಯರು

ಶ್ರೀ ಪೃಥ್ವಿ ರಮೇಶ ಕತ್ತಿ,
ನಿರ್ದೇಶಕರು,
ಹುಕ್ಕೇರಿ ಗ್ರಾಮೀಣ ವಿದ್ಯುತ್
ಸಹಕಾರಿ ಸಂಘ ನಿ., ಹುಕ್ಕೇರಿ

ಶ್ರೀ ನಿಖಿಲ ಉಮೇಶ ಕತ್ತಿ,
ಅಧ್ಯಕ್ಷರು,
ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರಖಾನೆ ನಿ.,
ಸಂಕೇಶ್ವರ ಹಾಗೂ
ಬೆಳಗಾವಿ ಜಿಲ್ಲಾ ಪಂಚಾಯತ ಮಾಜಿ ಸದಸ್ಯರು

ಶ್ರೀ ರಮೇಶ ವಿಶ್ವನಾಥ ಕತ್ತಿ,
ಅಧ್ಯಕ್ಷರು,
ಬೆಳಗಾವಿ ಡಿ.ಸಿ.ಸಿ. ಬ್ಯಾಂಕ್ ನಿ., ಬೆಳಗಾವಿ
ಹಾಗೂ ಮಾಜಿ ಸಂಸದರು ಚಿಕ್ಕೋಡಿ

ಕತ್ತಿ ಪರಿವಾರ ಬೆಲ್ಲದ–ಬಾಗೇವಾಡಿ

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಗಾಂಧಿನಗರದ ಕೆಂಪೇಗೌಡ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಮರ ಬಿದ್ದಿರುವುದು.

‘ಪಾದಚಾರಿ ಮಾರ್ಗದಲ್ಲಿರುವ ಮರ ತೆರವುಗೊಳಿಸಿ’

ಗಾಂಧಿನಗರದ ಕೆಂಪೇಗೌಡ ಮುಖ್ಯ ರಸ್ತೆಯ 2ನೇ ಅಡ್ಡರಸ್ತೆಯ ಇಂಡಿಯನ್ ಬ್ಯಾಂಕ್ ಪಕ್ಕದಲ್ಲಿರುವ ಪಾದಚಾರಿ ಮಾರ್ಗದಲ್ಲಿ ಮರವೊಂದು ಧರೆಗೆ ಉರುಳಿ ಬಿದ್ದಿತ್ತು. ಪಾಲಿಕೆ ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಸುಗಮ ಸಂಚಾರದ ಅನುಕೂಲಕ್ಕೆ ಮರವನ್ನು ಕತ್ತರಿಸಿ ಪಕ್ಕದ ಪಾದಚಾರಿ ಮಾರ್ಗದಲ್ಲಿ ಬಿಸಾಡಿ ಹೋಗಿದ್ದರು. ಇದರಿಂದ ಪಾದಚಾರಿ ಮಾರ್ಗವೆಲ್ಲಾ ಕಸದ ತೊಟ್ಟಿಯಾಗಿ ಮಾರ್ಪಟ್ಟಿದೆ. ಸ್ಥಳೀಯರು ತ್ಯಾಜ್ಯವನ್ನು ಅಲ್ಲಿಯೇ ಹಾಕುವುದರಿಂದ ರಸ್ತೆಯೆಲ್ಲ ಗಬ್ಬೆದ್ದು ನಾರುತ್ತಿದೆ. ಪಾಲಿಕೆ ಸಿಬ್ಬಂದಿ ಈ ತ್ಯಾಜ್ಯವನ್ನು ತೆರವುಗೊಳಿಸಿ ಸ್ವಚ್ಛತೆ ಕಾಪಾಡಬೇಕು.

ಶಿವಪ್ರಸಾದ್, ಸ್ಥಳೀಯ ನಿವಾಸಿ

‘ರಸ್ತೆಬದಿ ಕಸ ತೆಗೆಸಿ’

ಎಂ.ಸಿ. ಬಡಾವಣೆಯಲ್ಲಿನ ಅಲ್ಪಸಂಖ್ಯಾತ ಬಾಲಕಿಯರ ವಿದ್ಯಾರ್ಥಿನಿಲಯದ ಎದುರಿನ ಹಾಗೂ ಗೀತಾಂಜಲಿ ಸಮುಚ್ಚಯದ ಪಕ್ಕದ ರಸ್ತೆ ಬದಿಯಲ್ಲಿ ಒಂದು ತಿಂಗಳಿಂದ ಕಸ ಸಂಗ್ರಹವಾಗಿದೆ. ಕಸಕಡ್ಡಿ, ಪ್ಲಾಸ್ಟಿಕ್, ದಿನ ಬಳಕೆಯ ವಸ್ತುಗಳು ಚರಂಡಿಗೆ ಬಿದ್ದು ಕಟ್ಟಿಕೊಂಡು ನೀರು ಸರಾಗವಾಗಿ ಹರಿಯದೆ ಕೊಳೆತು ನಾರುತ್ತಿದೆ. ಇದರಿಂದ ಸೊಳ್ಳೆಗಳು ಹೆಚ್ಚಾಗಿ ರೋಗ-ರುಜಿನಗಳು ಕಾಣಿಸಿಕೊಳ್ಳುತ್ತವೆ. ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಶುರುವಾಗಿದೆ. ಪಾಲಿಕೆ ಸಿಬ್ಬಂದಿ ಕಸವನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.

ಕೆ.ಎಸ್. ಕುಮಾರಸ್ವಾಮಿ, ಎಂ.ಸಿ. ಬಡಾವಣೆ, ಬೆಂಗಳೂರು.

‘ರಸ್ತೆ ದುರಸ್ತಿ ಮಾಡಿ’

ಹೆಬ್ಬಾಳ ಮೇಲ್ಸೇತುವೆ ಕೆಳಭಾಗದಲ್ಲಿರುವ ಹೆಬ್ಬಾಳ ಬಸ್ ನಿಲ್ದಾಣದ ಬಳಿ ಇತ್ತೀಚಿಗೆ ಸುರಿದ ಮಳೆಯಿಂದ ರಸ್ತೆ ಸಂಪೂರ್ಣ ಹಾಳಾಗಿದೆ. ಮಳೆಗಾಲದಲ್ಲಿ ರಸ್ತೆಯೆಲ್ಲ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಬೇಸಿಗೆ ಕಾಲದಲ್ಲಿ ದೂಳಿನ ಮಜ್ಜನವಾಗುತ್ತದೆ. ಈ ರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರರು ಸಂಚರಿಸಲು ಪರದಾಡುವ ಪರಿಸ್ಥಿತಿ ಎದುರಾಗಿದೆ. ಮಕ್ಕಳು ಮತ್ತು ವೃದ್ಧರು ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ. ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ರಮೇಶ್, ಸ್ಥಳೀಯ ನಿವಾಸಿ

ಹೆಬ್ಬಾಳದ ಕೆಳ ಸೇತುವೆ ರಸ್ತೆ ಕೆಸರುಮಯ

‘ರಸ್ತೆ ಗುಂಡಿಗಳನ್ನು ಮುಚ್ಚಿ’

ಕೊತ್ತನೂರು ದಿನ್ನೆ ಜೆ.ಪಿ. ನಗರದ ಸಾಯಿ ಎನ್‌ಕ್ಲೇವ್‌ನ 8ನೇ ಹಂತದ ರಸ್ತೆ ಗುಂಡಿಮಯವಾಗಿದೆ. ಮ್ಯಾನ್‌ಹೋಲ್‌ಗಳನ್ನು ಸರಿಯಾಗಿ ನಿರ್ವಹಣೆ ಮಾಡದ ಕಾರಣ ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತಿದೆ. ರಸ್ತೆಯ ಗುಂಡಿಗಳಲ್ಲಿ ನೀರು ನಿಲ್ಲುವುದರಿಂದ ರಸ್ತೆಯಲ್ಲಿ ಸಂಚರಿಸುವುದು ಕಷ್ಟವಾಗಿದೆ. ಈ ಕುರಿತು ಸ್ಥಳೀಯ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಸಂಬಂಧ ಪಟ್ಟ ಅಧಿಕಾರಿಗಳು ಮ್ಯಾನ್‌ಹೋಲ್ ದುರಸ್ತಿಗೊಳಿಸಿ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಪುಷ್ಪ ಡಿ.ಬಿ. ಸ್ಥಳೀಯ ನಿವಾಸಿ

ಜೆ.ಪಿ. ನಗರದ 8ನೇ ಹಂತದ ಸಾಯಿ ಎನ್‌ಕ್ಲೇವ್ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದು.

ವಿಷ್ಣುವರ್ಧನ್ ಜನ್ಮದಿನ

ಪೂರ್ಣಪ್ರಜ್ಞಾ ಲೇಔಟ್‌ನ ಡಾ.ವಿಷ್ಣು ಕಟ್ಟೆ ಗೆಳೆಯರ ಬಳಗದ ಕೆ. ನಾರಾಯಣ ಅವರ ನೇತೃತ್ವದಲ್ಲಿ ಭಾನುವಾರ ದಿವಂಗತ ನಟ ವಿಷ್ಣುವರ್ಧನ್ ಅವರ 72ನೇ ಜನ್ಮದಿನ ಆಚರಿಸಲಾಯಿತು.

8 ಚಿರತೆಗಳನ್ನು ಭಾರತಕ್ಕೆ ತರಲಾಯಿತು!

ಸರ್ಕಾರಿ ನೌಕರರ ವಿಮೆ: ಪ್ರತಿ ₹1 ಸಾವಿರಕ್ಕೆ ₹85 ಲಾಭಾಂಶ

ಬೆಂಗಳೂರಿಗೆ: ರಾಜ್ಯ ಸರ್ಕಾರಿ ನೌಕರರ ಎಲ್ಲ ಪಾಲಿಸಿಗಳ ವಿಮೆ ಮೊತ್ತದ ಪ್ರತಿ ₹ 1 ಸಾವಿರಕ್ಕೆ ವಾರ್ಷಿಕ ₹ 85ರಂತೆ ಲಾಭಾಂಶ (ಬೋನಸ್) ಮಂಜೂರಾತಿ ಮಾಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ.

ಸರ್ಕಾರಿ ವಿಮಾ ಇಲಾಖೆಯಲ್ಲಿ ನಿರ್ವಹಿಸಲಾಗುತ್ತಿರುವ ಕಡ್ಡಾಯ ಜೀವ ವಿಮಾ ಯೋಜನೆಗೆ ಸಂಬಂಧಿಸಿದಂತೆ 2016ರ ಏಪ್ರಿಲ್ 1ರಿಂದ 2018ರ ಮಾರ್ಚ್ 31ಕ್ಕೆ ಅಂತ್ಯಗೊಂಡ ದ್ವೈವಾರ್ಷಿಕ ಅವಧಿಗೆ ವಿಮಾ ಮೌಲ್ಯಮಾಪನ ವರದಿ ಆಧರಿಸಿ, ಜೀವ ವಿಮಾ ಪಾಲಿಸಿಗಳ ಸ್ಥಿರಪಡಿಸಿದ ಮೊತ್ತದ ಮೇಲೆ ಬೋನಸ್ ನೀಡಿ ಸರ್ಕಾರ ಮಂಜೂರಾತಿ ನೀಡಿದೆ.

2016ರಿಂದ 2018ರ ಅವಧಿಯಲ್ಲಿ ಚಾಲ್ತಿಯಲ್ಲಿದ್ದ ಎಲ್ಲ 11,09,591 ಪಾಲಿಸಿಗಳಿಗೆ ವಿಮಾ ಮೊತ್ತದ ಮೇಲೆ ಪ್ರತಿ ಸಾವಿರ ರೂಪಾಯಿಗಳಿಗೆ ಪ್ರತಿ ವರ್ಷಕ್ಕೆ ₹ 85ರಂತೆ ಲಾಭಾಂಶ ನೀಡಿ ಆದೇಶಿಸಲಾಗಿದೆ.

ಅಲ್ಲದೆ, 2018ರ ಏಪ್ರಿಲ್ 1ರಿಂದ ರಿಂದ 31-03-2020ರ ಮಾರ್ಚ್ 31ರ ಅವಧಿಯಲ್ಲಿ ಅವಧಿ ಪೂರ್ಣ, ಮರಣಜನ್ಯ ಹಾಗೂ ವಿಮಾ ತ್ಯಾಗ ಮೌಲ್ಯಗಳಿಂದ ಹೊರ ಹೋಗಿರುವ ವಿಮಾ ಪಾಲಿಸಿಗಳಿಗೂ ಪ್ರತಿ ₹ 1 ಸಾವಿರಕ್ಕೆ ವಾರ್ಷಿಕ ₹ 85ರಂತೆ ಮಧ್ಯಂತರ ಲಾಭಾಂಶ ನೀಡಲಾಗಿದೆ.

ಸಾಹಿತ್ಯ ಸಂಭ್ರಮದಲ್ಲಿ ಮಿಂದ ಪೊಲೀಸರು

ಪೊಲೀಸರಿಂದಲೂ ಸೃಜನಶೀಲ ಸಾಹಿತ್ಯ ರಚನೆ: ನಾಗತಿಹಳ್ಳಿ ಚಂದ್ರಶೇಖರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆ, ಬುಕ್ ಬ್ರಹ್ಮ ಹಾಗೂ 'ಆರಕ್ಷಕ ಲಹರಿ' ಮಾಸಪತ್ರಿಕೆ ಆಶ್ರಯದಲ್ಲಿ ನಗರದಲ್ಲಿ ಭಾನುವಾರ ನಡೆದ ಪೊಲೀಸ್ ಸಾಹಿತ್ಯ ಸಂಭ್ರಮದಲ್ಲಿ ಇಲಾಖೆ ಸಿಬ್ಬಂದಿ ಮಿಂದರು.

ಬರವಣಿಗೆ ಕ್ಷೇತ್ರದಲ್ಲಿ ತೊಡಗಿರುವ ಕರ್ತವ್ಯನಿರತ ಪೊಲೀಸರು ತಮ್ಮ ಪ್ರತಿಭೆ ಅನಾವರಣ ಮಾಡಿದರು. ನಗರದ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್ ದಿನವಿಡೀ ವಿಚಾರ ವಿನಿಮಯಕ್ಕೆ ವೇದಿಕೆ ಕಲ್ಪಿಸಿತು. ‘ಪೊಲೀಸ್ ಸಾಹಿತ್ಯ ಒಂದು ಹಿನ್ನೋಟ’, ‘ಪೊಲೀಸ್ ಮಹಿಳೆಯರು ಮತ್ತು ಸಾಹಿತ್ಯ’ ಹಾಗೂ ಕವಿಗೋಷ್ಠಿಗಳು... ನಡೆದವು.

ಸಂಭ್ರಮಕ್ಕೆ ಚಾಲನೆ ನೀಡಿದ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಮಾತನಾಡಿ, ‘ಪೊಲೀಸರ ಮೇಲಿರುವ ಅನಗತ್ಯ ಭಯ ಹಾಗೂ ಗಾಬರಿ ದೂರ ಆಗಬೇಕು. ಎಲ್ಲರನ್ನೂ ಒಳಗೊಳ್ಳುವಿಕೆ ಮುಖ್ಯ’ ಎಂದು ಪ್ರತಿಪಾದಿಸಿದರು.

ರಾಜ್ಯ ಪೊಲೀಸ್ ಇಲಾಖೆ ಆಯೋಜಿಸಿದ್ದ ಪೊಲೀಸ್ ಸಾಹಿತ್ಯ ಸಂಭ್ರಮದಲ್ಲಿ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಸಾಹಿತಿ ಹಂ.ಪ. ನಾಗರಾಜಯ್ಯ, ಪೊಲೀಸ್ ಆಯುಕ್ತ ಸಿ.ಎಚ್. ಪ್ರತಾಪ್ ರೆಡ್ಡಿ, ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ವಿನಯಕುಮಾರ್ ಹಾಜರಿದ್ದರು – ಪ್ರಜಾವಾಣಿ ಚಿತ್ರ

‘ಪೊಲೀಸರಲ್ಲೂ ಸೃಜನಶೀಲತೆ ಹಾಗೂ ಸೃಷ್ಟಿಶೀಲತೆಯಿದೆ. ಸಾಹಿತ್ಯ ಸಂವೇದನೆ ಇದೆ. ಅಂತಹ ಪ್ರತಿಭೆಗಳಿಗೆ ಅವಕಾಶ ನೀಡಬೇಕು’ ಎಂದು ಸಲಹೆ ನೀಡಿದರು.

‘ಜನರು ಸುರಕ್ಷಿತವಾಗಿ ಜೀವಿಸಬೇಕಾದರೆ ಪೊಲೀಸ್ ವ್ಯವಸ್ಥೆ ಬಹಳ ಮುಖ್ಯ. ವಿದೇಶದಲ್ಲಿ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಕರ್ತವ್ಯಗಳ ಬಗ್ಗೆ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ. ನಮ್ಮಲ್ಲೂ ಅಂತಹ ವ್ಯವಸ್ಥೆ ಬರಬೇಕು’ ಎಂದು ಸಲಹೆ ನೀಡಿದರು.

‘ಪೊಲೀಸರು ಒಳಗಿನ ಶತ್ರುಗಳನ್ನು ಸದೆಬಡಿಯಲು ನಿತ್ಯವೂ ಯುದ್ಧ ಮಾಡುತ್ತಲೇ ಇರುತ್ತಾರೆ. ಆಂತರಿಕ ಭದ್ರತೆ, ರಕ್ಷಣೆ, ಅಪರಾಧ ನಿಯಂತ್ರಣಕ್ಕೆ ಶ್ರಮಿಸುತ್ತಿದ್ದಾರೆ. ಅವರ ಮೇಲೆ ಸದಾ ಒತ್ತಡವಿದೆ’ ಎಂದರು.

‘ಪೊಲೀಸರೂ ಮನುಷ್ಯರೇ. ಆದರೆ, ಚಲನಚಿತ್ರಗಳಲ್ಲಿ ದೇವಮಾನವನಂತೆ ಹಾಗೂ ಅತ್ಯಂತ ಭ್ರಷ್ಟ ಅಧಿಕಾರಿ ಎಂಬಂತೆ ಚಿತ್ರಿಸಲಾಗುತ್ತಿದೆ. ಇದು ಬದಲಾಗಬೇಕು’ ಎಂದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಮಾತನಾಡಿ, ‘ಪೊಲೀಸರು ಸಾಹಿತ್ಯ ರಚಿಸಬಾರದು ಎಂಬ ಯಾವ ನಿರ್ಬಂಧವೂ ಇಲ್ಲ. ಬರವಣಿಗೆ ಮಾಡಬಹುದು. ಆದರೆ, ಕಾರ್ಯಾಚರಣೆ ಕುರಿತ ಬರವಣಿಗೆಗೆ ನಿರ್ಬಂಧವಿದೆ. ಹಲವರು ನಿವೃತ್ತರಾದ ಮೇಲೆ ತಮ್ಮ ಕಾರ್ಯಾಚರಣೆಗಳ ಬಗ್ಗೆ ಬರೆದಿದ್ದಾರೆ’ ಎಂದರು.

ಸಾಹಿತಿ ಹಂ.ಪ. ನಾಗರಾಜಯ್ಯ ಮಾತನಾಡಿ, ‘ಪೊಲೀಸರ ಬಗ್ಗೆ ಭಯ ಮಿಶ್ರಿತ ಗೌರವ ಇದೆ‘ ಎಂದು ಹೇಳಿದರು.

‘ಸಾಹಿತ್ಯ ಲೋಕಕ್ಕೆ ಪೊಲೀಸ್ ಅನುಭವ ತೆಗೆದುಕೊಳ್ಳಬೇಕು. ಮಹನೀಯರು ಸೆರೆಮನೆಯಲ್ಲಿದ್ದ ಅವಧಿಯಲ್ಲಿ ರಚಿಸಿದ್ದ ಸಾಹಿತ್ಯವು ಶ್ರೇಷ್ಠ ಎನಿಸಿದೆ ಎಂದ ಅವರು, ಪೊಲೀಸರಿಗೆ ಎಲ್ಲರೂ ಧನ್ಯವಾದ ಹೇಳಬೇಕು ಎಂದರು.

ನಿವೃತ್ತ ಡಿಐಜಿಪಿ ಡಾ.ಡಿ.ಸಿ.ರಾಜಪ್ಪ ಮಾತನಾಡಿ, ‘ಪೊಲೀಸ್ ಸಾಹಿತ್ಯ ಸಂಭ್ರಮವನ್ನು 2004ರಲ್ಲಿ ಮೊದಲಿಗೆ ಶಿವಮೊಗ್ಗದಲ್ಲಿ ಆರಂಭಿಸಲಾಯಿತು’ ಎಂದು ಹೇಳಿದರು.

ಸಾಹಿತ್ಯ ಸಮ್ಮೇಳನವೊಂದರಲ್ಲಿ ಪೊಲೀಸರಿಗೆ ಕವಿತೆ ವಾಚನಕ್ಕೆ ಅವಕಾಶ ನೀಡುವಂತೆ ಮನವಿ ಸಲ್ಲಿಸಿದ್ದರೂ ನೀಡಿರಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಗರ ಪೊಲೀಸ್ ಆಯುಕ್ತ ಸಿ.ಎಚ್. ಪ್ರತಾಪ ರೆಡ್ಡಿ ಮಾತನಾಡಿದರು.

‘ಖಾಸಗಿ ಆಸ್ಪತ್ರೆಯಲ್ಲಿ ಸಿಸೇರಿಯನ್ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2015-16ರ ಪ್ರಕಾರ ರಾಜ್ಯದ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆ ಪ್ರಮಾಣ ಶೇ 40.3 ರಷ್ಟಿತ್ತು. 2019-20ರ ಸಮೀಕ್ಷೆಯಲ್ಲಿ ಈ ಪ್ರಮಾಣ ಶೇ 52.5ಕ್ಕೆ ಏರಿಕೆಯಾಗಿದೆ ಎಂದು ವೈದ್ಯಕೀಯ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಆಸ್ತ್ರಿಕಾ ಫೌಂಡೇಷನ್ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ‘ಭಾರತದಲ್ಲಿ ಏರುತ್ತಿರುವ ಸಿವಿಭಾಗದ ದರಗಳು ಮತ್ತು ಸಂಭಾವ್ಯ ಪರಿಹಾರಗಳು’ ವಿಷಯದ ಬಗ್ಗೆ ತಜ್ಞರು ಚರ್ಚಿಸಿದರು.

‘ಇತ್ತೀಚಿನ ದಿನಗಳಲ್ಲಿ ಸಿಸೇರಿಯನ್ ಪ್ರಮಾಣ ಹೆಚ್ಚಿದೆ ಎನ್ನುವುದು ನಿಜ. ಇದರಲ್ಲಿ ವೈದ್ಯರ ಹಾಗೂ ಆಸ್ಪತ್ರೆಗಳ ಪಾತ್ರವೇನು, ತಾಯಿ ಹಾಗೂ ಅವಳ ಕುಟುಂಬದವರ ಆಸಕ್ತಿ ಎಷ್ಟು ಎನ್ನುವುದನ್ನು ಪ್ರತ್ಯೇಕವಾಗಿ ನೋಡಬೇಕಾಗುತ್ತದೆ. ಸಿಸೇರಿಯನ್ ತೊಡಕುಗಳ ಬಗ್ಗೆ ಗರ್ಭಿಣಿ ಮತ್ತು ಅವರ ಕುಟುಂಬಕ್ಕೆ ಮಾಹಿತಿ ಹಾಗೂ ಜ್ಞಾನವನ್ನು ನೀಡಬೇಕು ಎಂದು ತಜ್ಞರು ಅಭಿಮತ ವ್ಯಕ್ತಪಡಿಸಿದರು.

ಫೌಂಡೇಷನ್ ಸಂಸ್ಥಾಪಕಿ ಜಾನ್ವವಿ ನಿಲೇಕಣಿ ಮಾತನಾಡಿದರು.

ಪ್ರಸೂತಿ ತಜ್ಞೆ ಡಾ. ಪಲ್ಲವಿ ಚಂದ್ರ, ಡಾ. ನಚಿಕೇತ್ ಮೋರ್ ಅಭಿಮತ ವ್ಯಕ್ತಪಡಿಸಿದರು.



ತೆಪ್ಪ ಮಗುಚಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಮ್ಮಿಗೆಪುರ ಕೆರೆಯಲ್ಲಿ ತೆಪ್ಪ ಮಗುಚಿ ಗೊಲ್ಲಹಳ್ಳಿಯ ನಿವಾಸಿ ಶಂಕರ (35) ಹಾಗೂ ಹೆಮ್ಮಿಗೆಪುರದ ನಿವಾಸಿ ಶಿವ (25) ಎಂಬುವರು ಮೃತಪಟ್ಟಿದ್ದಾರೆ. ಚಿರಂಜೀವಿ ಎಂಬಾತ ಈಜಿ ದಡ ಸೇರಿದ್ದು, ಅಪಾಯದಿಂದ ಪಾರಾಗಿದ್ದಾರೆ.

ಜಯನಗರದ ಜೈನ್ ಪಬ್ಲಿಕ್ ಶಾಲೆಯಲ್ಲಿ ಚಾಲಕರಾಗಿ ಕೆಲಸ ಮಾಡುತ್ತಿದ್ದ ಆರು ಮಂದಿ ಶನಿವಾರ ಸಂಜೆ ಪಾರ್ಟಿ ಮಾಡಲು ಹೆಮ್ಮಿಗೆಪುರ ಕೆರೆಯ ಬಳಿಗೆ ತೆರಳಿದ್ದರು. ಶಂಕರ್ ಎಂಬುವರ ಮನೆಯಲ್ಲಿ ಮಾಡಿದ್ದ ಮಾಂಸಾಹಾರಿ ಖಾದ್ಯವನ್ನು ತಂದಿದ್ದರು. ಕೆರೆಯ ಬಳಿಯೇ ಎಲ್ಲರೂ ಮದ್ಯ ಸೇವಿಸಿದ್ದರು. ಮದ್ಯದ ಅಮಲಿನಲ್ಲಿ ಮೂವರು ತೆಪ್ಪದ ಮೇಲೆ ಕೆರೆಯ ಮಧ್ಯಭಾಗಕ್ಕೆ ತೆರಳುತ್ತಿದ್ದರು. ಮೀನುಗಾರರು ಹಾಕಿದ್ದ ಬಲೆಗೆ ತೆಪ್ಪ ಸಿಲುಕಿ ಮಗುಚಿ ಬಿದ್ದ ಪರಿಣಾಮ ಇಬ್ಬರು ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

₹ 11 ಲಕ್ಷ ಸುಲಿಗೆ: ಐವರ ಬಂಧನ

ಬೆಂಗಳೂರು: ಇಬ್ಬರು ರಿಯಲ್ ಎಸ್ಟೇಟ್ ಮಧ್ಯವರ್ತಿಗಳನ್ನು ಅಪಹರಿಸಿ ₹ 11 ಲಕ್ಷ ಸುಲಿಗೆ ಮಾಡಿದ್ದ ಆರೋಪಿಗಳನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

ಹೈದರಾಬಾದ್‌ನ ಪ್ರಸಾದ್, ಸತ್ಯ ನಾರಾಯಣ, ಮಹಾರಾಷ್ಟ್ರದ ಶ್ರೀಧರ್, ಕಿರಣ್ ಮೋರೆ ಹಾಗೂ ನಾಗೋರಾವ್ ಬಂಧಿತರು. ಹರೀಶ್ ಹಾಗೂ ವರ್ಮ ಎಂಬುವರು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿನಾಯಕ ಲೇಔಟ್ ವಸಂತಾ, ಅವರ ಸಂಬಂಧಿ ಶಿವಾರೆಡ್ಡಿ ಎಂಬುವರನ್ನು ಆರೋಪಿಗಳು ಅಪಹರಿಸಿದ್ದರು. ಬಳಿಕ ₹ 11 ಲಕ್ಷ ಸುಲಿಗೆ ಮಾಡಿದ್ದರು.

'ಜಮೀನು ವಿಚಾರವಾಗಿ ಮಾತನಾಡಬೇಕು' ಎಂದು ಹೇಳಿ ಇಬ್ಬರನ್ನೂ ಮೈಸೂರು ರಸ್ತೆಯ ಸ್ಯಾಟಲೈಟ್ ನಿಲ್ದಾಣಕ್ಕೆ ಕರೆಸಿಕೊಂಡಿದ್ದರು. ಹೋಟೆಲ್‌ನಲ್ಲಿ ಮಾತನಾಡೋಣ ಎಂದು ಹೇಳಿ ಅಲ್ಲಿಂದ ಹೈದರಾಬಾದ್‌ಗೆ ಕರೆದೊಯ್ದು ರೂಂನಲ್ಲಿ ಕೂಡಿ ಹಾಕಿದ್ದರು. ಬಳಿಕ, ₹ 50 ಲಕ್ಷಕ್ಕೆ ಬೇಡಿಕೆ ಸಲ್ಲಿಸಿದ್ದರು. ಬೆಂಗಳೂರಿಗೆ ಬಂದ ವಸಂತಾ ₹ 11 ಲಕ್ಷ ಕೊಂಡೊಯ್ದು ಶಿವಾರೆಡ್ಡಿ ಅವರನ್ನು ಬಿಡಿಸಿಕೊಂಡು ಬಂದಿದ್ದರು ಎಂದು ಮೂಲಗಳು ಹೇಳಿವೆ.

ನಗರದಲ್ಲಿ ಇಂದು

ಸೋಲಾರ್ ಪಿ.ವಿ. ರೂಫ್ ಟಾಪ್ ಸಿಸ್ಟಮ್ ಉದ್ಘಾಟನೆ: ಅತಿಥಿಗಳು: ಗಿರೀಶ್ ಕೌಸ್ಗಿ, ಅಧ್ಯಕ್ಷತೆ: ಕೆ.ಜಿ. ರಾಘವನ್, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಮಧ್ಯಾಹ್ನ 12

ಉತ್ತಮ ಸಹಕಾರಿ ಸಂಸ್ಥೆಗಳು, ಶ್ರೇಷ್ಠ ಸಹಕಾರಿಗಳಿಗೆ ಮತ್ತು ಸಹಕಾರ ಕ್ಷೇತ್ರದ ಸಾಧಕರಿಗೆ ಸನ್ಮಾನ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಬಿ. ನಂಜನಗೌಡ, ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಅರಗ ಜ್ಞಾನೇಂದ್ರ, ಉಮಾಶಂಕರ್, ರಾಜೇಂದ್ರ ಕೆ., ಆಯೋಜನೆ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸ್ಥಳ: ಕಿಂಗ್ಸ್ ಕೋರ್ಟ್, ಅರಮನೆ ಆವರಣ, ಗೇಟ್ ಸಂಖ್ಯೆ 5, ಬಳ್ಳಾರಿ ರಸ್ತೆ, ಮಧ್ಯಾಹ್ನ 12.30

ಭಜನಾ ಕಾರ್ಯಕ್ರಮ: ಪ್ರಸ್ತುತಿ: ರಾಜಾಜಿನಗರದ ವಾಸವಿ ಮಹಿಳಾ ಮಂಡಳಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಗೀತಾ ಮಂದಿರ, ಶ್ರೀರಾಮಪುರ, ಸಂಜೆ 6

ದಕ್ಷಿಣ ವಲಯ: ಪ್ರತಿಷ್ಠಿತ ಪ್ರದೇಶಗಳಲ್ಲಿ ಚರಂಡಿಯಾಗಿರುವ ರಾಜಕಾಲುವೆ

ಬಡಾವಣೆಗಳಲ್ಲಿ ಮೋರಿಯಾಯ್ತು ಕಾಲುವೆ

• ಆರ್. ಮಂಜುನಾಥ್

ಬೆಂಗಳೂರು: ನಗರದ ಪ್ರತಿಷ್ಠಿತ ಬಡಾವಣೆಗಳನ್ನು ಒಳಗೊಂಡಿರುವ ದಕ್ಷಿಣ ವಲಯದಲ್ಲಿ ಬಿಬಿಎಂಪಿ ರಾಜಕಾಲುವೆಗಳ ಒತ್ತುವರಿಯನ್ನು ಹೆಚ್ಚಾಗಿ ಗುರುತಿಸಿಲ್ಲ. ಸಂಪೂರ್ಣ ಮುಚ್ಚಿಹೋಗಿರುವುದನ್ನು ಹೆಚ್ಚಾಗಿ ತೋರಿಸಿಯೂ ಇಲ್ಲ. ಹೀಗಾಗಿ ರಾಜಕಾಲುವೆಗಳು ಬಡಾವಣೆಗಳ ಮಧ್ಯದಲ್ಲೇ ಅಂತ್ಯಗೊಳ್ಳುತ್ತವೆ. ಅಲ್ಲಿಂದ ಸಣ್ಣ ಮೋರಿಗಳಾಗಿವೆ. ಹೀಗಾಗಿ ದಕ್ಷಿಣ ವಲಯದಲ್ಲಿ 'ರಾಜ ಕಾಲುವೆ' ಎಂಬುದನ್ನು ಹು ಡು ಕು ವು ದು ಕಷ್ಟಸಾಧ್ಯ. ಏಕೆಂದರೆ ಅವು ವಿಸ್ತೀರ್ಣವನ್ನು ಬಹುತೇಕ ಕಳೆದುಕೊಂಡಿವೆ.

ಕೆಂಪೇಗೌಡರು ಕಟ್ಟಿಸಿದ ಕೆಂಪಾಂಬುಧಿ ಕೆರೆ ತನ್ನ ಒಡಲಲ್ಲಿ ಸಾಕಷ್ಟು ಒತ್ತುವರಿಯನ್ನೂ ಕಂಡಿದೆ. ಜೊತೆಗೆ ಸುತ್ತಮುತ್ತಲಿನ ರಾಜಕಾಲುವೆಗಳ ಒತ್ತುವರಿ ಅತಿ ಹೆಚ್ಚಾಗಿಯೇ ಇದೆ. ಮೈಸೂರು ರಸ್ತೆ, ಹೊರ ವರ್ತುಲ ರಸ್ತೆ, ನೈಸ್ ರಸ್ತೆಗಳು ಈ ವಲಯದಲ್ಲಿ ಹಾದುಹೋಗುತ್ತವೆ. ಸಾಕಷ್ಟು ಕಡೆ ಈ ರಸ್ತೆಗಳ ಬಳಿಯೇ ರಾಜಕಾಲುವೆ ಅಂತ್ಯಗೊಂಡು ರಸ್ತೆಗೆ ನೀರುಹರಿಯುತ್ತದೆ. ನಂತರ ಮೋರಿಗಳಲ್ಲಿ ಸಾಗಲು ಒಂದಷ್ಟು ಸಮಯ ತೆಗೆದುಕೊಳ್ಳುತ್ತದೆ. ಪಶ್ಚಿಮ ಕಾರ್ಡ್ ರಸ್ತೆ ಹಾಗೂ ಮಾಗಡಿ ರಸ್ತೆ ಸಂಪರ್ಕಿಸುವ ಹೊಸಹಳ್ಳಿ ಭಾಗದಲ್ಲಿ ರಾಜಕಾಲುವೆ ಬಹುತೇಕ ಒತ್ತುವರಿಯಾಗಿದೆ.

ಹೊಸೂರು ರಸ್ತೆ, ಲಾಲ್‌ಬಾಗ್ ರಸ್ತೆ, ಬನ್ನೇರುಘಟ್ಟ ರಸ್ತೆ, ಬೈರಸಂದ್ರಗಳಲ್ಲಿ ರಾಜಕಾಲುವೆ ಒತ್ತುವರಿಯಾಗಿರುವ ಜೊತೆಗೆ ಇದೆ ಎಂದು ನಕಾಶೆಯಲ್ಲಿ ಹಸಿರುಬಣ್ಣ ತೋರಲಾಗಿರುವ ರಾಜಕಾಲುವೆಯೂ ಅರ್ಧಕ್ಕಿಂತ ಕಡಿಮೆ ಅಳತೆಗೆ ಕುಗ್ಗಿದೆ. ಪ್ರತಿಷ್ಠಿತ ಜಯನಗರದಲ್ಲಿ ರಾಜಕಾಲುವೆಗಳ ಒತ್ತುವರಿ ಅತಿ ಹೆಚ್ಚಾಗಿಯೇ ಇದೆ. ಜೊತೆಗೆ ರಾಜಕಾಲುವೆಗಳನ್ನು ಮೋರಿಯಂತೆ ಮಾಡಿ, ಮನೆ, ಕಾಂಪೌಂಡ್ ನಿರ್ಮಿಸಲಾಗಿದೆ. ಹೀಗಾಗಿ ಹೆಚ್ಚು ಮಳೆಯಾದಾಗ ಈ ಪ್ರದೇಶಗಳಲ್ಲಿ ನೀರು ಮನೆಗಳಿಗೆ ನುಗ್ಗುತ್ತದೆ.

ಹೊರ ವರ್ತುಲ ರಸ್ತೆ ಹಾಗೂ ನೈಸ್ ರಸ್ತೆ ಭಾಗದಲ್ಲಿ ವೃಷಭಾವತಿ ಸೇರುವ ರಾಜಕಾಲುವೆಗಳು ಮುಚ್ಚಿಹೋಗಿವೆ. ಚಿಕ್ಕಲಸಂದ್ರ ಕೆರೆಯನ್ನೇ ಮುಚ್ಚಿ ಬಡಾವಣೆ ಮಾಡಲಾಗಿದ್ದು, ರಾಜಕಾಲುವೆಗಳ ಮೇಲೂ ಎಲ್ಲ ರೀತಿಯ ಕಟ್ಟಡಗಳಿವೆ. ಹೀಗಾಗಿ ಈ ಭಾಗದಲ್ಲೂ ಮಳೆ ಬಂದಾಗ ಬಡವರು, ಶ್ರೀಮಂತರು ಅಧಿಕಾರಿಗಳನ್ನು ಬೈಯ್ಯುವುದು ಸಾಮಾನ್ಯ. ಆದರೆ, ಜನಪ್ರತಿನಿಧಿಗಳು ಒತ್ತುವರಿ ಬಗ್ಗೆ ಮಾತಾಡುವುದಿಲ್ಲ, ತೆರವಿಗೆ ಬಂದ ಅಧಿಕಾರಿಗಳನ್ನು ವಾಪಸ್ ಕಳಿಸುವುದನ್ನು ಮರೆಯುವುದಿಲ್ಲ ಎಂಬುದು ಸ್ಥಳೀಯರ ಆರೋಪ.

ದಕ್ಷಿಣ ವಲಯ

2,871.84 ಚದರ ಮೀಟರ್ ಬಸವನಗುಡಿ ವಿಧಾನಸಭೆ ಕ್ಷೇತ್ರ

30 ಒಟ್ಟು ಒತ್ತುವರಿ ಸ್ಥಳ | **7** ತೆರವು | **23** ಬಾಕಿ ಒತ್ತುವರಿ





ಜಯನಗರ 5ನೇ ಬ್ಲಾಕ್ 9ನೇ 'ಎ' ಮುಖ್ಯರಸ್ತೆ 40ನೇ ಅಡ್ಡರಸ್ತೆಯಲ್ಲಿರುವ ರಾಜಕಾಲುವೆ

ಒತ್ತುವರಿಗೆ ಬಿಬಿಎಂಪಿ ನೆರವು...

ಜಯನಗರ 5ನೇ ಬ್ಲಾಕ್ 9ನೇ 'ಎ' ಮುಖ್ಯರಸ್ತೆ 40ನೇ ಅಡ್ಡರಸ್ತೆಯಲ್ಲಿ ರಾಜಕಾಲುವೆ ಮೇಲೆ ಮನೆ ಕಟ್ಟಿಕೊಂಡು ಒತ್ತುವರಿ ಮಾಡಿಕೊಂಡಿದ್ದಾರೆ. ರಾಜಕಾಲುವೆ ಅಭಿವೃದ್ಧಿ ಕಾಮಗಾರಿ ಮಾಡಿದ ಬಿಬಿಎಂಪಿ ಸಿಬ್ಬಂದಿಯೇ ಇದಕ್ಕೆ ನೆರವಾಗಿದ್ದಾರೆ. ರಾಜಕಾಲುವೆಯ ಅಳತೆಯನ್ನು ಕಡಿಮೆ ಮಾಡಿ ಒತ್ತುವರಿದಾರರಿಗೆ ಎಂಜಿನಿಯರ್‌ಗಳು ಅನುಕೂಲ ಮಾಡಿಕೊಟ್ಟಿದ್ದಾರೆ. ರಾಜಕಾಲುವೆಯನ್ನು ಮೂಲ ವಿಸ್ತೀರ್ಣದಂತೆ ನಿರ್ಮಿಸಬೇಕು. ಅಳತೆ ಕಡಿಮೆ ಮಾಡಿರುವುದರಿಂದ ಮಳೆ ನೀರು ಹರಿದುಹೋಗುತ್ತಿಲ್ಲ. ಹೀಗಾಗಿ, ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಸಂಸದರು, ಜನಪ್ರತಿನಿಧಿಗಳಿಗೆ ದೂರು ನೀಡಿದರೂ ಸಮಸ್ಯೆ ಪರಿಹಾರವಾಗಿಲ್ಲ.

ಆನಂದ್, ಜಯನಗರ 5ನೇ ಬ್ಲಾಕ್

ತಜ್ಞರ ಸಮಿತಿ ರಚಿಸಲಿ

ನಮ್ಮ ಬೆಂಗಳೂರು ಫೌಂಡೇಷನ್ ವತಿಯಿಂದ ರಾಜಕಾಲುವೆಗಳ ಒತ್ತುವರಿ ಬಗ್ಗೆ ಬಿಬಿಎಂಪಿಯಿಂದ ಮಾಹಿತಿ ಕೇಳಲಾಗಿತ್ತು. ಆರ್‌ಟಿಐನಲ್ಲಿ ಕೇಳಿದರೂ ಎಲ್ಲ ವಲಯಗಳ ಮಾಹಿತಿ ನೀಡಿಲ್ಲ. ರಾಜಕಾಲುವೆಗಳ ಮಾರ್ಗ ಹಾಗೂ ಒತ್ತುವರಿಯ ಮಾಹಿತಿಯನ್ನು ಬಿಬಿಎಂಪಿ ಹೊಂದಿಲ್ಲ. ಹೀಗಾಗಿ, ಇದರ ಬಗ್ಗೆ ಎಲ್ಲ ರೀತಿಯ ಲೆಕ್ಕಾಚಾರ ಹಾಗೂ ಒತ್ತುವರಿ ತೆರವು ವಿವರವನ್ನು ಬಹಿರಂಗಗೊಳಿಸಬೇಕು. ಎಲ್ಲ ರೀತಿಯ ಒತ್ತುವರಿ ತೆರವು ಮಾಡಿ, ರಾಜಕಾಲುವೆಗಳನ್ನು ಅವುಗಳ ಮೂಲ ವಿಸ್ತೀರ್ಣಕ್ಕೆ ನಿರ್ಮಿಸಬೇಕು. ಹೀಗಾದರೆ ಮಳೆನೀರು ಸರಾಗವಾಗಿ ಹರಿಯುತ್ತದೆ. ಈ ಮಳೆನೀರುಗಾಲುವೆ ನಿರ್ವಹಣೆಗೆ ತಜ್ಞರ ಸಮಿತಿ ರಚಿಸಬೇಕು ಎಂದು ನಮ್ಮ ಬೆಂಗಳೂರು ಪ್ರತಿಷ್ಠಾನದ ಪ್ರಧಾನ ವ್ಯವಸ್ಥಾಪಕ ವಿನೋದ್ ಜಾಕಬ್ ಅಭಿಪ್ರಾಯಪಟ್ಟರು.

ರಕ್ತನಾಳ ಕಡಿದರೆ ಹೇಗೆ...?

ಮನುಷ್ಯನ ದೇಹಕ್ಕೆ ರಕ್ತ ನಾಳಗಳಿದ್ದಂತೆ ಕೆರೆಗಳಿಗೆ ರಾಜಕಾಲುವೆಗಳು. ಆದ್ದರಿಂದ ಅವುಗಳನ್ನು ಬಫರ್ ಜೋನ್‌ಗಳ ಜೊತೆ ಸೇರಿಸಿ ರಕ್ಷಿಸಿದರೆ ಯಾವ ಪ್ರವಾಹವೂ ಬರುವುದಿಲ್ಲ. ಒಂದು ಕಡೆ ಕೆರೆಗಳನ್ನು ಒತ್ತುವರಿ ಮಾಡಿರುವುದು, ಮತ್ತೊಂದೆಡೆ ನೀರುಗಾಲುವೆಗಳನ್ನು ಮುಚ್ಚಿರುವುದರಿಂದ ಬಡಾವಣೆಗಳು ಜಲಾವೃತವಾಗಲು ಕಾರಣ. ಅದು ಐಟಿ ಕಾರಿಡಾರ್ ಆಗಲಿ ಅಥವಾ ನಾಗರಿಕರ ಬಡಾವಣೆಯಾಗಲಿ ಸರ್ಕಾರದ ಇಲಖೆಗಳು ಅಥವಾ ಬಿಲ್ಡರ್‌ಗಳು ಬಡಾವಣೆಗಳನ್ನು ರಚನೆ ಮಾಡುವಾಗ ನೀರಿನ ನೆಲೆಗಳಿಗೆ ಮತ್ತು ನೀರು ಹರಿದುಹೋಗುವ ಹಾದಿಗಳಿಗೆ ಜಾಗ ನಿಗದಿಮಾಡುವುದಿಲ್ಲ. ರಾಜಕಾಲುವೆಗಳು ಪರಸ್ಪರ ಸಂಪರ್ಕ ಹೊಂದಿರುತ್ತವೆ. ಅವುಗಳನ್ನು ಮಧ್ಯದಲ್ಲಿ ತಡೆದರೆ ರಕ್ತನಾಳವನ್ನು ಕಡಿದಂತೆ. ಮಳೆಯಿಂದ ನೀರು ಬಡಾವಣೆಗಳಿಗೆ ಹರಿದರೆ ಎಲ್ಲರನ್ನೂ ಒಂದೇ ರೀತಿ ಕಾಣಬೇಕು. ಐಟಿ–ಬಿಟಿಯವರ ಗೋಳು ಮಾತ್ರ ನೋಡಬಾರದು. ಮಧ್ಯಮ ಹಾಗೂ ಬಡವರ ಕುಟುಂಬಗಳನ್ನು ಮೊದಲು ನೋಡಬೇಕು ಎನ್ನುತ್ತಾರೆ ಎನ್ವಿರಾನ್ಮೆಂಟ್ ಸಪೋರ್ಟ್ ಗ್ರೂಪ್‌ನ ಎಂ. ಈಶ್ವರಪ್ಪ.

ಸುದ್ದಿ 2 ನಿಮಿಷ

ಪಿಎಸ್‌ಐ ನೇಮಕಾತಿ ಮರುಪರೀಕ್ಷೆ: ಶೀಘ್ರವೇ ದಿನಾಂಕ ಪ್ರಕಟ– ಡಿಜಿಪಿ

ಬೆಂಗಳೂರು: 'ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿಯ ಮರುಪರೀಕ್ಷೆ ದಿನಾಂಕವನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದು' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ತಿಳಿಸಿದರು.

'ಪರೀಕ್ಷೆಯಲ್ಲಿ ನಡೆದಿದ್ದ ಅಕ್ರಮದ ಕಾರಣಕ್ಕೆ ಸರ್ಕಾರವು ನೇಮಕಾತಿ ಪ್ರಕ್ರಿಯೆ ರದ್ದು ಪಡಿಸಿತ್ತು. 545 ಹುದ್ದೆಗಳಿಗೆ ಮರು ಪರೀಕ್ಷೆ ನಡೆಸಲು ಇಲಾಖೆ ಬದ್ಧವಾಗಿದೆ' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ಕೆಲವು ಅಭ್ಯರ್ಥಿಗಳು ಸರ್ಕಾರದ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಪ್ರಕರಣದಲ್ಲಿ ಭಾಗಿಯಾದ ಎಲ್ಲರ ಆರೋಪ ಪಟ್ಟಿ ನ್ಯಾಯಾಲಯಕ್ಕೆ ಶೀಘ್ರದಲ್ಲೇ ಸಲ್ಲಿಕೆ ಆಗಲಿದೆ. ಆರೋಪಿ ಅಭ್ಯರ್ಥಿಗಳಿಗೆ ಮುಂದೆ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆ ಅವಕಾಶ ಸಿಗದಂತೆ ಕ್ರಮ ಕೈಗೊಳ್ಳಬೇಕಿದೆ' ಎಂದು ಹೇಳಿದರು.

ಲವ್ ಜಿಹಾದ್: 5 ವರ್ಷ ಜೈಲು

ಲಖನೌ: ಲವ್ ಜಿಹಾದ್ ನಿಯಂತ್ರಣ ಕಾನೂನಿನಡಿ ಉತ್ತರ ಪ್ರದೇಶದಲ್ಲಿ ಇದೇ ಮೊದಲ ಬಾರಿಗೆ ಶಿಕ್ಷೆಯಾಗಿದೆ. ಮೊಹಮ್ಮದ್ ಅಫ್ಜಲ್ ಎಂಬಾತನಿಗೆ ಅಮರೋಹ ಜಿಲ್ಲೆಯ ನ್ಯಾಯಾಲಯವು 5 ವರ್ಷ ಜೈಲು ಶಿಕ್ಷೆ ಹಾಗೂ ₹40 ಸಾವಿರ ದಂಡ ವಿಧಿಸಿದೆ.

ಸಂಭಾಲ್ ಜಿಲ್ಲೆಯ ಅಫ್ಜಲ್, ಹಿಂದೂ ಸಮುದಾಯದ ಯುವತಿಯನ್ನು ಮದುವೆಯಾಗಲು ಯತ್ನಿಸಿದ್ದ. ಹುಸಿ ಭರವಸೆಗಳನ್ನು ನೀಡಿದ್ದ ಆತ, ತಾನು ಹಿಂದೂ ಧರ್ಮಕ್ಕೆ ಸೇರಿದವನು ಎಂದು ಯುವತಿಯನ್ನು ನಂಬಿಸಿದ್ದ.

ತನ್ನ ಹೆಸರು ಅರ್ಮಾನ್ ಕೊಹ್ಲಿ ಎಂದು ಹೇಳಿ ಯುವತಿಯನ್ನು ಪರಿಚಯ ಮಾಡಿಕೊಂಡಿದ್ದ ಯುವಕ, ಆಕೆಯನ್ನು ಕರೆದೊಯ್ದಿದ್ದ .ಕಳೆದ ವರ್ಷದ ಏಪ್ರಿಲ್‌ನಲ್ಲಿ ಆರೋಪಿಯನ್ನು ದೆಹಲಿಯಲ್ಲಿ ಬಂಧಿಸಲಾಗಿತ್ತು. ಆತನ ವಿರುದ್ಧ ಲವ್ ಜಿಹಾದ್ ನಿಯಂತ್ರಣ ಹಾಗೂ ಪೋಕ್ಸೊ ಕಾಯ್ದೆಗಳಡಿ ಪ್ರಕರಣ ದಾಖಲಿಸಲಾಗಿತ್ತು. ಶನಿವಾರ ಇದರ ವಿಚಾರಣೆ ನಡೆಸಿದ್ದ ಪೋಕ್ಸೊ ವಿಶೇಷ ನ್ಯಾಯಾಲಯವು ತೀರ್ಪು ಪ್ರಕಟಿಸಿದೆ.

ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಪುರಸ್ಕರಿಸಲಾಯಿತು. ಶಾಸಕರಾದ ಅಖಂಡ ಶ್ರೀನಿವಾಸಮೂರ್ತಿ, ಎಸ್‌.ರಘು, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, ಭೋವಿಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಇದ್ದರು

ಭೋವಿ ಸಮುದಾಯಕ್ಕೆ ಅಗತ್ಯ ಭೂಮಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೋವಿ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಭೂಮಿ ನೀಡಬೇಕೆಂಬ ಬೇಡಿಕೆ ಪರಿಗಣಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕರ್ನಾಟಕ ಭೋವಿ ಕ್ಷೇಮಾಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ಸುವರ್ಣ ಮಹೋತ್ಸವ ಉದ್ಘಾಟನೆ ಹಾಗೂ 43ನೇ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು.

'ಭೂಮಿ ಒದಗಿಸಲು ಕಂದಾಯ ಸಚಿವರೂ ಒಪ್ಪಿಗೆ ಸೂಚಿಸಿದ್ದಾರೆ. ಇಂತಹ ಸಂಘಗಳಿಗೆ ಸಹಕಾರ ನೀಡಲು ಸರ್ಕಾರ ಸದಾ ಸಿದ್ಧವಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಹೆಸರಿನಲ್ಲಿ 100 ಹೊಸ ವಸತಿ ನಿಲಯ ನಿರ್ಮಾಣವಾಗುತ್ತಿವೆ. ಸಾವಿರ ಮಕ್ಕಳು ನೆಲೆಸಲು ಸಾಧ್ಯವಾಗುವ ರೀತಿಯ ಐದು ಮೆಗಾ ವಸತಿ ನಿಲಯ ಕೂಡ ನಿರ್ಮಾಣ ಆಗುತ್ತಿವೆ' ಎಂದು ಹೇಳಿದರು.

'ಭೋವಿ ಸಮಾಜದ ಏಳಿಗೆ ಎಂದರೆ ಈ ರಾಜ್ಯದ ಏಳಿಗೆ. ನಮ್ಮ ಯೋಜನೆಗಳು ದುಡಿಯುವ ವರ್ಗಕ್ಕೆ ಮೀಸಲಾಗಿವೆ. ದುಡಿಮೆಯೇ ಭೋವಿ ಸಮಾಜದ ಕುಲ ಕಸಬು, ಕುಲ ದೇವರು' ಎಂದು ಹೇಳಿದರು.

ಕಾಲ ಬದಲಾಗಿದ್ದು, ಎಲ್ಲರೂ ಕುಲ ಕಸುಬನ್ನೇ ಮಾಡಬೇಕೆಂದಿಲ್ಲ. ಈ ಸಮಾಜದ ಮಕ್ಕಳಲ್ಲಿ ಬುದ್ಧಿವಂತಿಕೆ, ಜ್ಞಾನದ ಭಂಡಾರವಿದೆ. ಅವರಿಗೆ ಅವಕಾಶ ಕೊಟ್ಟರೆ ಮುಂದೆ ಬರುತ್ತಾರೆ. ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು ಎಂದರು.

'ಪರಿಶಿಷ್ಟ ಜಾತಿ ಮತ್ತು ಪಂಗಡದ ಬಡ ಕುಟುಂಬಗಳಿಗೆ ಉಚಿತವಾಗಿ 75 ಯುನಿಟ್ ವಿದ್ಯುತ್ ನೀಡುವ ಯೋಜನೆ ಹಿಂಪಡೆಯುವ ಪ್ರಶ್ನೆ ಇಲ್ಲ. ಯೋಜನೆಯನ್ನು ಇನ್ನಷ್ಟು ಸರಳಗೊಳಿಸಿ ಇದೇ ತಿಂಗಳಲ್ಲಿ ಹಣ ಒದಗಿಸಲಾಗುವುದು' ಎಂದು ಹೇಳಿದರು.

ಕೊಂಕಣಿ ಸಾಧಕರಿಗೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕುಮುದಾ ಗಡಕರ್, ರಮೇಶ್ ಕಾಮತ್ ಮತ್ತು ಎಚ್.ಎಂ. ಪೆರ್ನಾಲ್ ಅವರಿಗೆ 'ಗೌರವ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಅಕಾಡೆಮಿ ಅಧ್ಯಕ್ಷ ಕೆ. ಜಗದೀಶ್ ಪೈ, ಕೊಂಕಣಿ ಸಾಹಿತಿ ಜಯಶ್ರೀ ಶಾನುಭಾಗ್, ಉದ್ಯಮಿ ಹಾಗೂ ಶಿಕ್ಷಣ ತಜ್ಞ ಪಿ. ದಯಾನಂದ್ ಪೈ, ಡಿ.ವಿ. ಸದಾನಂದ ಗೌಡ, ಡಾ.ಸಿ.ಎನ್. ಅಶ್ವತ್ಥನಾರಾಯಣ ಹಾಗೂ ವಿಧಾನ ಪರಿಷತ್ ಸದಸ್ಯ ಕೆ. ಪ್ರತಾಪ್ ಸಿಂಹ ನಾಯಕ್ ಇದ್ದಾರೆ

ಬೆಂಗಳೂರು: 'ಇಂಗ್ಲಿಷ್ ಭಾಷೆ ಎಲ್ಲ ಕಡೆ ಆಕ್ರಮಣ ನಡೆಸುತ್ತಿರುವ ಈಗಿನ ಸನ್ನಿವೇಶದಲ್ಲಿ ಭಾಷೆ–ಸಂಸ್ಕೃತಿ, ಆಚಾರ–ವಿಚಾರ ಉಳಿಸಿಕೊಳ್ಳುವ ಸವಾಲು ಹೆಚ್ಚೇ ಇದೆ. ಭಾಷೆಯ ಬಗ್ಗೆ ಕಾಳಜಿ, ಬದ್ಧತೆ ಇದ್ದರಷ್ಟೇ ಅದನ್ನು ಉಳಿಸಬಹುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕೊಂಕಣಿ ಸಾಹಿತ್ಯ ಕ್ಷೇತ್ರದ ಕೊಡುಗೆಗಾಗಿ ಎಚ್.ಎಂ. ಪೆರ್ನಾಲ್, ಕಲಾ ಕ್ಷೇತ್ರದ ಸಾಧನೆಗಾಗಿ ರಮೇಶ್ ಕಾಮತ್, ಜಾನಪದ ಕ್ಷೇತ್ರದ ಕೊಡುಗೆಗಾಗಿ ಕುಮುದಾ ಗಡಕರ್ ಅವರಿಗೆ 'ಗೌರವ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿ ತಲಾ ₹ 50 ಸಾವಿರ ನಗದು ಒಳಗೊಂಡಿದೆ.

'ಪ್ರಸ್ತುತ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸ್ಥಳೀಯ ಭಾಷೆಗೆ ಅವಕಾಶ ಮಾಡಿಕೊಡಲಾಗಿದೆ. ಭಾಷೆಯನ್ನು ಉಳಿಸಲು ಒತ್ತು ನೀಡಲಾಗುತ್ತಿದೆ. ಎಲ್ಲ ಧರ್ಮ, ಪಂಗಡಗಳಲ್ಲಿ ಕೊಂಕಣಿ ಭಾಷಿಕರಿದ್ದಾರೆ. ಕರ್ನಾಟಕಕ್ಕೆ ಕೊಂಕಣಿ ಭಾಷಿಕರ ಕೊಡುಗೆ ಅಪಾರ' ಎಂದು ಅಶ್ವತ್ಥನಾರಾಯಣ ಅವರು ಹೇಳಿದರು.

ಪ್ರಶಸ್ತಿ ಪ್ರದಾನ ಮಾಡಿದ ಸಂಸದ ಡಿ.ವಿ.ಸದಾನಂದ ಗೌಡ, 'ಸಣ್ಣ ಮೀನುಗಳನ್ನು ದೊಡ್ಡ ಮೀನು ತಿಂದು ಹಾಕುವಂತೆ ಇಂಗ್ಲಿಷ್ ಎದುರು ಸಣ್ಣ ಭಾಷೆಗಳು ನಶಿಸಿಹೋಗುತ್ತಿವೆ. ನಮ್ಮ ದೇಶದಲ್ಲಿದ್ದ 2,800 ಭಾಷೆಗಳ ಪೈಕಿ ಒಂದೂವರೆ ಸಾವಿರ ಭಾಷೆಗಳು ಕಣ್ಮರೆಯಾಗಿವೆ' ಎಂದು ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಕೆ. ಜಗದೀಶ್ ಪೈ ಅವರು, '1 ರಿಂದ 4ನೇ ತರಗತಿವರೆಗೆ ಕೊಂಕಣಿ ಭಾಷೆಯಲ್ಲೂ ಪಾಠ ಮಾಡಲು ಅವಕಾಶ ಕಲ್ಪಿಸಬೇಕೆಂದು ಈ ಹಿಂದೆ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಕೊಂಕಣಿಗರ ಕೆಲ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಮುತುವರ್ಜಿ ವಹಿಸಬೇಕು' ಎಂದು ಹೇಳಿದರು.

ಚಿತ್ತಾಪಹಾರಿ ನೃತ್ಯ...

'ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ' (ಎಫ್‌ಕೆಸಿಸಿಐ) ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಮಂಥನ್-2022 ಬ್ಯುಸಿನೆಸ್ ಪ್ಲ್ಯಾನ್ ಪ್ರೆಸೆಂಟೇಷನ್ ಸ್ಪರ್ಧೆ' ಕಾರ್ಯಕ್ರಮದಲ್ಲಿ 'ಅಭಿನವ ಡಾನ್ಸ್ ಕಂಪನಿ' ವಿದ್ಯಾರ್ಥಿಗಳು ಸಾಂಸ್ಕೃತಿಕ ವೈಭವದ ನೃತ್ಯ ಪ್ರದರ್ಶಿಸಿದರು -ಪ್ರಜಾವಾಣಿ ಚಿತ್ರ

ದು. ಸರಸ್ವತಿ ಬೇಸರ ● 'ಅಧಿಕಾರ ಮತ್ತು ಅಧೀನತೆ' ಪುಸ್ತಕ ಬಿಡುಗಡೆ

'ಹೆಣ್ಣು ಈಗಲೂ ಅಸ್ತ್ರ, ವಸ್ತುವಾಗಿ ಬಳಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಣ್ಣು ಈಗಲೂ ಅಸ್ತ್ರ, ವಸ್ತುವಾಗಿ ಬಳಕೆಯಾಗುತ್ತಿದ್ದಾಳೆ. ಪುರುಷ ಪ್ರಧಾನ ಸಮಾಜವು ಆಕೆಯ ನೋವು, ಯಾತನೆಯನ್ನು ಅರಿತುಕೊಳ್ಳುವ ಪ್ರಯತ್ನ ಮಾಡಿಲ್ಲ' ಎಂದು ಸಾಮಾಜಿಕ ಕಾರ್ಯಕರ್ತೆ ದು. ಸರಸ್ವತಿ ಬೇಸರ ವ್ಯಕ್ತಪಡಿಸಿದರು.

ಆಕಾರ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಎಚ್.ಎಸ್. ಶ್ರೀಮತಿ ಅವರು ಅನುವಾದಿಸಿದ 'ಅಧಿಕಾರ ಮತ್ತು ಅಧೀನತೆ' ಪುಸ್ತಕ ಬಿಡುಗಡೆಯಾಯಿತು. ಈ ಪುಸ್ತಕ ಕೇಟ್ ಮಿಲೇಟ್ ವಿಚಾರಗಳನ್ನು ಆಧರಿಸಿದೆ.

'ಹೆಣ್ಣು–ಗಂಡು ನಡುವಿನ ಅಂತರ ಸಮಾಜದಲ್ಲಿನ ಸಮಸ್ಯೆಗಳಿಗೆ ಮೂಲ. ಪರಸ್ಪರ ಮುಕ್ತ ಮಾತುಕತೆ ನಡೆಯದಿದ್ದರಿಂದ ಮಹಿಳೆಯರು ಮನೆಯೊಳಗೆ ಅನುಭವಿಸುವ ವೇದನೆಯೂ ಪುರುಷರ ಅರಿವಿಗೆ ಬರುತ್ತಿಲ್ಲ. ಮುಟ್ಟಿನ ಸಂದರ್ಭದಲ್ಲಿ ಹೆಣ್ಣು ಹಲವು ಸಮಸ್ಯೆಗಳನ್ನು ಎದುರಿಸುತ್ತಾಳೆ. ಈ ಬಗ್ಗೆ ಬಹುತೇಕ ಪುರುಷರಿಗೆ ತಿಳಿದಿಲ್ಲ. ಈ ಸಮಾಜದಲ್ಲಿ ಚಿಕ್ಕ ವಯಸ್ಸಿನಿಂದ ಗಂಡು–ಹೆಣ್ಣಿನ ಒಡನಾಟ ಇಲ್ಲವಾದ್ದರಿಂದ 40 ವರ್ಷದ ಹಿಂದಿನ ಪ್ರಶ್ನೆಗಳು ಈಗಲೂ ಹಾಗೆಯೇ ಇವೆ' ಎಂದು ಹೇಳಿದರು.

'ಜಾಗತೀಕರಣದಲ್ಲಿ ತಾಯ್ತನ, ಬಸುರು ಎಲ್ಲವೂ ಮಾರಾಟದ ಸರಕಾಗಿ ಪರಿಣಮಿಸುತ್ತಿವೆ. ದೇಹ ರಾಜಕಾರಣವನ್ನೂ ಇಲ್ಲಿ ನೋಡಬಹುದಾಗಿದೆ. ರಕ್ಷಣೆ ನೀಡಬೇಕಾದ ಪೊಲೀಸ್ ಠಾಣೆಗಳಲ್ಲಿಯೂ ಅತ್ಯಾಚಾರಗಳು ನಡೆದಿವೆ. ಪಿತೃಪ್ರಧಾನ ಎನ್ನುವುದು ಗಂಡಸರು ಮನುಷ್ಯರಾಗಿ ಉಳಿಯಲು ಬಿಟ್ಟಿಲ್ಲ' ಎಂದು ತಿಳಿಸಿದರು.



ಆಕಾರ ಪ್ರಕಾಶನ ಆಯೋಜಿಸಿದ ಕಾರ್ಯಕ್ರಮದಲ್ಲಿ ಎಚ್.ಎಸ್. ಶ್ರೀಮತಿ (ಎಡದಿಂದ ಎರಡನೆಯವರು) ಅವರ 'ಅಧಿಕಾರ ಮತ್ತು ಅಧೀನತೆ' ಪುಸ್ತಕವನ್ನು ವಿಮರ್ಶಕ ಬಸವರಾಜ ಕಲ್ಗುಡಿ ಬಿಡುಗಡೆ ಮಾಡಿದರು. ದು. ಸರಸ್ವತಿ, ಆರ್. ತಾರಿಣಿ ಶುಭದಾಯಿನಿ ಮತ್ತು ಪ್ರಕಾಶಕ ಸುಭಾಷ್ ರಾಜಮಾನೆ ಇದ್ದಾರೆ. –ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಪುಸ್ತಕ: 'ಅಧಿಕಾರ ಮತ್ತು ಅಧೀನತೆ'
ಲೇಖಕರು: ಎಚ್.ಎಸ್. ಶ್ರೀಮತಿ
ಬೆಲೆ: ₹ 650
ಪುಟಗಳು: 592
ಪ್ರಕಾಶನ: ಆಕಾರ ಪ್ರಕಾಶನ

ಪುಸ್ತಕದ ಬಗ್ಗೆ ಮಾತನಾಡಿದ ಆರ್. ತಾರಿಣಿ ಶುಭದಾಯಿನಿ, 'ಪ್ರತಿಯೊಂದು ಶಾಸ್ತ್ರಗಳು ಪುರುಷ ಕೇಂದ್ರಿತ ಆಲೋಚನೆ ಹೊಂದಿವೆ. ಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನೂ ಲಿಂಗದ ದೃಷ್ಟಿಕೋನದಲ್ಲಿ ಓದಲಾಗುತ್ತಿದೆ. ಈ ಬಗ್ಗೆ ಕೇಟ್ ಮಿಲೇಟ್ ವಿಶಾಲ ದೃಷ್ಟಿಕೋನದಲ್ಲಿ ಅವಲೋಕಿಸಿದ್ದಾರೆ. ಇದು ಅಧ್ಯಯನಕ್ಕೆ ಯೋಗ್ಯವಾದ ಕೃತಿಯಾಗಿದೆ' ಎಂದು ಹೇಳಿದರು.

ಲೇಖಕಿ ಎಚ್.ಎಸ್. ಶ್ರೀಮತಿ, 'ಪ್ರಮುಖ ಸ್ತ್ರೀವಾದಿ ಚಿಂತನೆಗಳನ್ನು ಕನ್ನಡಕ್ಕೆ ತರಬೇಕಾದ ಅಗತ್ಯವಿದೆ. ಇದರಲ್ಲಿ ದೇಶಿ, ವಿದೇಶಿ ಎಂಬ ಕಾರಣಗಳು ಅಡ್ಡಿಯಾಗಬಾರದು' ಎಂದು ತಿಳಿಸಿದರು.

'ಪಾವತಿ ಪಾರ್ಕಿಂಗ್' ಶೀಘ್ರ ಅನುಷ್ಠಾನ

ಬೆಂಗಳೂರು: ಬಿಬಿಎಂಪಿ ತನ್ನ ಎಂಟು ವಲಯಗಳಲ್ಲಿ 'ಪಾವತಿ ಪಾರ್ಕಿಂಗ್' ಅಳವಡಿಸಲು ಮುಂದಾಗಿದ್ದು, ವಾರ್ಷಿಕವಾಗಿ ₹188 ಕೋಟಿ ಆದಾಯವನ್ನು ನಿರೀಕ್ಷಿಸಿದೆ. ಇದಕ್ಕಾಗಿ ಇನ್ನೆರಡು ದಿನಗಳಲ್ಲಿ ಟೆಂಡರ್ ಕರೆಯುವ ಸಾಧ್ಯತೆ ಇದೆ.

ರಾಜ್ಯ ಸರ್ಕಾರ ಪಾರ್ಕಿಂಗ್ ನೀತಿಗೆ 2021ರ ಫೆಬ್ರುವರಿ 2ರಂದು ಅನುಮತಿ ನೀಡಿತ್ತು. ನಗರ ಭೂ ಸಾರಿಗೆ ನಿರ್ದೇಶನಾಲಯ ವಲಯವಾರು ಪಾರ್ಕಿಂಗ್ ಯೋಜನೆಯನ್ನು ಸಿದ್ಧಪಡಿಸಿದೆ. ಬೆಂಗಳೂರು ನಗರ ಪೊಲೀಸರು ಹಾಗೂ ಬಿಬಿಎಂಪಿಯೊಂದಿಗೆ ಜೊತೆಗೂಡಿ ಕಾರು, ಬೈಕು, ಸೈಕಲ್ ಎಂಬ ವರ್ಗಗಳೊಂದಿಗೆ ಸಮೀಕ್ಷೆ ನಡೆಸಿದ ನಂತರ ಈ ಯೋಜನೆ ಸಿದ್ಧವಾಗಿದೆ.

'ಪಾವತಿ ಪಾರ್ಕಿಂಗ್ ಯೋಜನೆ ಅನುಷ್ಠಾನಕ್ಕೆ ಟೆಂಡರ್ ಕರೆಯಲು ಪಾಲಿಕೆ ಸಿದ್ಧತೆ ನಡೆಸಿದೆ. ಎಂಟು ವಲಯಗಳಲ್ಲಿ ರಸ್ತೆಗಳನ್ನು ಮೂರು ವರ್ಗಗಳಾಗಿ ಗುರುತಿಸಿ, ಶುಲ್ಕ ನಿಗದಿಪಡಿಸಲಾಗಿದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರು ತಿಳಿಸಿದರು.

'ರಸ್ತೆಗಳನ್ನು ಎ,ಬಿ, ಸಿ, ಎಂದು ಗುರುತಿಸಲಾಗಿದೆ. ಬೆಳಿಗ್ಗೆ 7ರಿಂದ ರಾತ್ರಿ 10ರ ವರೆಗೆ ಶುಲ್ಕ ನಿಗದಿಪಡಿಸಲಾಗುತ್ತದೆ. 'ಎ' ವರ್ಗದಲ್ಲಿ ದ್ವಿಚಕ್ರ ವಾಹನಗಳಿಗೆ ಪ್ರತಿ ಗಂಟೆಗೆ ₹15, ಕಾರುಗಳಿಗೆ ₹30 ಶುಲ್ಕವಿರುತ್ತದೆ. 'ಬಿ' ವರ್ಗದಲ್ಲಿ ಇದು ಕ್ರಮವಾಗಿ ₹10 ಹಾಗೂ ₹20, 'ಸಿ' ವರ್ಗದಲ್ಲಿ ಪ್ರತಿ ಗಂಟೆಗೆ ₹5 ಹಾಗೂ ₹10 ಇರಲಿದೆ ಎಂದು ಬಿಬಿಎಂಪಿ ಟ್ರಾಫಿಕ್ ಎಂಜಿನಿಯರಿಂಗ್ ಕೋಶದ (ಟಿಇಸಿ) ಕಾರ್ಯಪಾಲಕ ಎಂಜಿನಿಯರ್ ಎಚ್.ಎನ್. ಜಯಸಿಂಹ ಅವರು ಮಾಹಿತಿ ನೀಡಿದರು.

ಯಲಹಂಕ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ ಮತ್ತು ದಾಸರಹಳ್ಳಿ ವಲಯದ ಬಹುತೇಕ ರಸ್ತೆಗಳು 'ಎ' ವರ್ಗದಲ್ಲಿಲ್ಲ. ಹೀಗಾಗಿ ಈ ಭಾಗದಲ್ಲಿ ಪಾರ್ಕಿಂಗ್ ಶುಲ್ಕ ಕಡಿಮೆ ಇರಲಿದೆ. ಇತರೆ ವಲಯಗಳಲ್ಲಿ 'ಎ' ವರ್ಗದ ರಸ್ತೆಗಳೇ ಹೆಚ್ಚಿರುವುದರಿಂದ ಅಲ್ಲಿ ಶುಲ್ಕ ಹೆಚ್ಚಾಗಲಿದೆ. ಪೂರ್ವ ವಲಯದಲ್ಲಿ ₹62 ಕೋಟಿ, ದಕ್ಷಿಣದಲ್ಲಿ ₹50 ಕೋಟಿ, ಪಶ್ಚಿಮದಲ್ಲಿ ₹20 ಕೋಟಿ ವಾರ್ಷಿಕ ಆದಾಯ ನಿರೀಕ್ಷಿಸಲಾಗಿದೆ. ಆರ್.ಆರ್. ನಗರದಲ್ಲಿ ₹5 ಕೋಟಿ ಅಂದಾಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿತ್ರಾವಳಿ

ವಿಶ್ವ ರೋಗಿಗಳ ಸುರಕ್ಷತಾ ದಿನದ ಪ್ರಯುಕ್ತ ನಗರದ ಆರ್ಕಿಡ್ಸ್ ಅಂತರರಾಷ್ಟ್ರೀಯ ಶಾಲೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವೈದ್ಯರು ವಿದ್ಯಾರ್ಥಿಗಳಿಗೆ ತುರ್ತು ಚಿಕಿತ್ಸೆಯ ಪ್ರಾತ್ಯಕ್ಷಿಕೆ ನೀಡಿದರು.

ಪೀಣ್ಯದಾಸರಹಳ್ಳಿ ಸಮೀಪದ ಬಾಗಲಗುಂಟೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಪ್ರಯುಕ್ತ ದಾಸರಹಳ್ಳಿ ಬಿಜೆಪಿ ಘಟಕ ಆಯೋಜಿಸಿದ್ದ ಶಿಬಿರದಲ್ಲಿ ರಕ್ತದಾನ ಮಾಡಿದವರಿಗೆ ಮಾಜಿ ಶಾಸಕ ಎಸ್. ಮುನಿರಾಜು ಅವರು ಪ್ರಶಂಸನಾ ಪತ್ರ ನೀಡಿದರು. ದಾಸರಹಳ್ಳಿ ಮಂಡಲ ಅಧ್ಯಕ್ಷ ಎನ್. ಲೋಕೇಶ್, ಬಿಜೆಪಿ ಮುಖಂಡರಾದ ಟಿ.ಎಸ್.ಗಂಗರಾಜು, ಕೃಷ್ಣಮೂರ್ತಿ, ಶೆಟ್ಟಿಹಳ್ಳಿ ಸುರೇಶ್, ಟಿ. ಶಿವಕುಮಾರ್, ಪಿ.ಎಚ್. ರಾಜು ಹಾಜರಿದ್ದರು

ಬೆಂಗಳೂರು, ಮೈಸೂರಿಗೆ ಬೆಣ್ಣೆ; ಉಳಿದ ನಗರಗಳಿಗೆ ಸುಣ್ಣ • ವಿವಿಧ ಉದ್ಯಮಗಳಿಗೆ ಹೊಡೆತ ಬೀಳುವ ಆತಂಕ

ದಶಪಥ: ಆದಾಯಕ್ಕಿಂತ ಆತಂಕವೇ ಹೆಚ್ಚು!

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರು– ಮೈಸೂರು ನಡುವಿನ ಪ್ರಯಾಣದ ಅವಧಿ ತಗ್ಗುತ್ತದೆ ಎಂಬ ಒಂದು ಅಂಶವನ್ನು ಹೊರತುಪಡಿಸಿದರೆ ದಶಪಥ ಹೆದ್ದಾರಿಯುದ್ದಕ್ಕೂ ಪ್ರವಾಸೋದ್ಯಮ, ಹೋಟೆಲ್ ಉದ್ಯಮ ಸೇರಿದಂತೆ ವಿವಿಧ ವಲಯಗಳಿಗೆ ಹೊಡೆತ ಬೀಳುವ ಆತಂಕ ದಟ್ಟವಾಗಿದೆ.

ರಸ್ತೆಗಳು ಸಂಪರ್ಕ ಕಲ್ಪಿಸುವ ಜೊತೆಗೆ ಆ ಪ್ರದೇಶದ ಪ್ರಗತಿಗೂ ಪೂರಕವಾಗಿರಬೇಕೆಂಬ ಆಶಯ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ವಿಷಯದಲ್ಲಿ ಸ್ವಲ್ಪ ಮಾತ್ರ ಅನ್ವಯವಾಗುತ್ತದೆ.

ಹೆದ್ದಾರಿ ಯೋಜನೆ ಬೆಂಗಳೂರಿನಿಂದ ಮೈಸೂರಿಗೆ ಕಡಿಮೆ ಅವಧಿಯಲ್ಲಿ ಸಂಪರ್ಕ ಕಲ್ಪಿಸುವ ಉದ್ದೇಶವನ್ನಷ್ಟೆ ಹೊಂದಿದೆ. ಪಥ ಪೂರ್ಣಗೊಂಡರೆ 90 ನಿಮಿಷದಲ್ಲಿ ತಲುಪಬಹುದು ಎನ್ನಲಾಗುತ್ತಿದೆ.

ನೇರವಾಗಿ ಬೆಂಗಳೂರು ಅಥವಾ ಮೈಸೂರು ತಲುಪುವವರಿಗಷ್ಟೇ ಈ ಹೆದ್ದಾರಿ ಅನುಕೂಲವಾಗಲಿದೆ. ಹೆದ್ದಾರಿ ಮಧ್ಯದ ನಗರ–ಪಟ್ಟಣಗಳು ನಡುಗಡ್ಡೆಗಳಾಗಬಹುದಷ್ಟೇ. ಪ್ರಯಾಣಿಕರು ಹೋಟೆಲ್‌ಗೆ ಅಥವಾ ಖರೀದಿಗೆ ನಿಲ್ಲಲು ಅವಕಾಶವಿಲ್ಲದಿರುವುದರಿಂದ ವಹಿವಾಟಿಗೆ ಹೊಡೆತ ಬೀಳುತ್ತದೆ ಎಂಬುದು ಹೋಟೆಲ್ ಉದ್ಯಮಿಗಳು, ವಿವಿಧ ವಹಿವಾಟು ನಡೆಸುವ ವರ್ತಕರ ಆತಂಕವಾಗಿದೆ.

‘ಪಥ’ ನಂಬಿದ್ದವರಿಗೆ ನಷ್ಟ: 52 ಕಿ.ಮೀ. ಉದ್ದ ಬೈಪಾಸ್ ನಿರ್ಮಾಣವಾಗುವುದರಿಂದ ಪ್ರಯಾಣಿಕರು ಬಿಡದಿ, ರಾಮನಗರ, ಚನ್ನಪಟ್ಟಣ, ಮಂಡ್ಯ, ಶ್ರೀರಂಗಪಟ್ಟಣದ ಒಳಗೆ ಪ್ರವೇಶಿಸದೆ ಹೊರವಲಯದ ಮೂಲಕ ಹಾದು ಹೋಗಲಿದ್ದಾರೆ. ಮದ್ದೂರಿಗೆ ಪ್ರವೇಶವಿದ್ದರೂ ಫ್ಲೈಓವರ್ ಮೇಲೆಯೇ ಪ್ರಯಾಣ ಮುಂದುವರಿಯಲಿದೆ. ‘ಪಥ’ವನ್ನೇ ನಂಬಿದ್ದ ಸಾಂಪ್ರದಾಯಿಕ ಆರ್ಥಿಕ ಚಟುವಟಿಕೆಗಳಿಗೆ ಇದರಿಂದ ಬಲವಾದ ಹೊಡೆತ ಬೀಳಲಿದೆ.

ಗ್ರಾಹಕರಿಲ್ಲದೆ ಬಿಕೋ ಎನ್ನುತ್ತಿರುವ ಬಿಡದಿಯ ತಟ್ಟೆ ಇಡ್ಲಿ ಹೋಟೆಲ್

> **ಮೈಸೂರು–ಬೆಂಗಳೂರು ಮಾರ್ಗದಲ್ಲಿ ಸಂಚರಿಸುವ ಶ್ರೀಮಂತರಿಗಷ್ಟೇ ಅನುಕೂಲವಾಗಲಿದೆ. ಬಡವರಿಗೆ, ನಮ್ಮಂತಹ ಸಣ್ಣ ಅಂಗಡಿಗಳವರಿಗೆ ಅನನುಕೂಲವೇ ಜಾಸ್ತಿ. ಹಳೆಯ ಹೆದ್ದಾರಿಯಲ್ಲಿ ಜನ ಸಂಚಾರ ಕಡಿಮೆಯಾಗಲಿದೆ**
>
> **ವಿಜೇಂದ್ರ,** ಚಹಾ ಅಂಗಡಿ ಮಾಲೀಕ, ನಗುವನಹಳ್ಳಿ ಗೇಟ್

> **ನನ್ನ ಟೀ ಪಾರ್ಲರ್ 24X7 ತೆರೆದಿರುತ್ತಿತ್ತು. ರಾಜ್ಯ, ಹೊರರಾಜ್ಯಗಳ ಗ್ರಾಹಕರಿದ್ದರು. ಜಸ್ಟ್ ಡಯಲ್‌ನಲ್ಲಿ ಅಂಗಡಿ ಮಾಹಿತಿ ಇತ್ತು. ದಶಪಥ ಕಾಮಗಾರಿ ನಂತರ ಅಂಗಡಿ ಮುಚ್ಚಿದ್ದು ಜೀವನ ಅತಂತ್ರವಾಗಿದೆ.**
>
> **ಎಸ್.ಕೆ.ನಂದೀಶ್,** ಸಿದ್ದಯ್ಯನಕೊಪ್ಪಲು ಗೇಟ್, ಮಂಡ್ಯ ತಾಲ್ಲೂಕು

ಸಂಚಾರಕ್ಕೆ ಮುಕ್ತವಾಗಿರುವ ಬಿಡದಿ, ರಾಮನಗರ, ಚನ್ನಪಟ್ಟಣ ಬೈಪಾಸ್‌ಗಳ ಸ್ಥಿತಿ ಗಮನಿಸಿದರೆ, ಆ ನಗರಗಳ ಒಳಗಿನ ಹಳೆಯ ಹೆದ್ದಾರಿ ಬಿಕೋ ಎನ್ನುತ್ತಿದೆ. ತಟ್ಟೆ ಇಡ್ಲಿಗೆ ಹೆಸರುವಾಸಿಯಾಗಿರುವ ಬಿಡದಿ ಹೆದ್ದಾರಿ ಬದಿ 30ಕ್ಕೂ ಹೆಚ್ಚು ಇಡ್ಲಿ ಹೋಟೆಲ್‌ಗಳಿದ್ದು, ಅವುಗಳ ವಹಿವಾಟು ಕುಸಿದಿದೆ. ಅನೇಕ ಹೋಟೆಲ್‌ಗಳು ಮುಚ್ಚುವ ಹಂತದಲ್ಲಿವೆ. ರಾಮನಗರ- ಚನ್ನಪಟ್ಟಣದ ಹೆದ್ದಾರಿ ಬದಿಯ ಹೋಟೆಲ್‌ಗಳಿಗೂ ಬಿಸಿ ತಟ್ಟುತ್ತಿದೆ. ಚನ್ನಪಟ್ಟಣದ ಮುದಗೆರೆ ಬಳಿ ವೈಶಾಲಿ, ಶಿವಳ್ಳಿ, ಕದಂಬ ಹೋಟೆಲ್‌ಗಳಿಗೆ ವ್ಯವಹಾರ ಕುಸಿಯುವ ಆತಂಕವಿದೆ. ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳ ಹೋಟೆಲ್ ಮಾಲೀಕರಲ್ಲೂ ಇದೇ ರೀತಿಯ ಆತಂಕ ತುಂಬಿದೆ.

ಬೈಪಾಸ್ ರಸ್ತೆ ಮುಕ್ತವಾದ ಬಳಿಕ ರಾಮನಗರದ ಜಾನಪದ ಲೋಕದ ಆದಾಯ ಅರ್ಧದಷ್ಟು ಕುಸಿದಿದೆ. ಸಿಬ್ಬಂದಿಯ ಸಂಬಳಕ್ಕೂ ತೊಂದರೆಯಾಗಿದೆ. ಹೆದ್ದಾರಿ ಪ್ರಯಾಣಿಕರು–ಪ್ರವಾಸಿಗರ ಭೇಟಿಯೇ ಜಾನಪದ ಲೋಕದ ಮುಖ್ಯ ಆದಾಯವಾಗಿತ್ತು.

> **ಹೆದ್ದಾರಿ ಅಕ್ಕಪಕ್ಕ ರಿಯಲ್ ಎಸ್ಟೇಟ್ ಚಿಗುರಬಹುದು. ಆದರೆ, ಮಂಡ್ಯ–ಮೈಸೂರು ಭಾಗದಲ್ಲಿ ಭೂ ಹಿಡುವಳಿಯೇ ಕಡಿಮೆ ಇರುವುದರಿಂದ ಅದೂ ಕಷ್ಟ. ಜೊತೆಗೆ ಎಲ್ಲವೂ ಹಸಿರು ಬೆಲ್ಟ್ ಪ್ರದೇಶವಾಗಿದ್ದು ರಿಯಲ್ ಎಸ್ಟೇಟ್ ಬೆಳೆಯದು –**
>
> **ಎಂ.ಬಿ.ನಾಗಣ್ಣಗೌಡ,** ಮಂಡ್ಯ

> **ಪ್ರಯಾಣಿಕರು, ಪ್ರವಾಸಿಗರು ಮಂಡ್ಯದಲ್ಲಿ ನಿಂತು ಹೋಗುತ್ತಿದ್ದರು. ಈಗ ಹೆದ್ದಾರಿಗೆ ಮಂಡ್ಯ ಸಂಪರ್ಕವೇ ಇಲ್ಲದ್ದರಿಂದ ಹೋಟೆಲ್ ಉದ್ಯಮಕ್ಕೆ ತೀವ್ರ ಪೆಟ್ಟು ಬೀಳಲಿದೆ**
>
> **ರಮೇಶ್,** ಹೋಟೆಲ್ ಮಾಲೀಕ, ಮಂಡ್ಯ

ಎಕನಾಮಿಕ್ ಕಾರಿಡಾರ್: ರಿಯಲ್ ಎಸ್ಟೇಟ್‌ಗೆ ಶುಕ್ರದೆಸೆ

ಈ ಹೆದ್ದಾರಿಯ ಸರ್ವಿಸ್ ರಸ್ತೆ ಸಮೀಪದಲ್ಲಿ ಹೊಸದಾಗಿ ಹೋಟೆಲ್‌ಗಳ ಆರಂಭಕ್ಕೆ ಹಾಗೂ ಬಡಾವಣೆಗಳ ನಿರ್ಮಾಣಕ್ಕೆ ಉದ್ಯಮಿಗಳು ಯೋಜಿಸುವ ಸಾಧ್ಯತೆ ಇದೆ ಎನ್ನುತ್ತದೆ ರಿಯಲ್ ಎಸ್ಟೇಟ್ ವಲಯ.

ಚನ್ನಪಟ್ಟಣ ತಾಲ್ಲೂಕಿನ ಕನ್ನಮಂಗಲ ಬಳಿ 30 ಎಕರೆಗೂ ಹೆಚ್ಚಿನ ಪ್ರದೇಶದಲ್ಲಿ ಕೆಫೆಟೇರಿಯಾಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯೋಜಿಸಿದೆ. ಜೊತೆಗೆ ಇತರ ಮೂರು ಕಡೆಗಳಲ್ಲೂ ಕೆಫೆಟೇರಿಯಾ ನಿರ್ಮಾಣಕ್ಕೆ ಯೋಜಿಸಲಾಗಿದೆ. ಇದರಿಂದ, ಆ ಭಾಗದಲ್ಲಿ ರಿಯಲ್ ಎಸ್ಟೇಟ್ ಬೆಳೆಯುವ ಮತ್ತು ಸರ್ವಿಸ್ ರಸ್ತೆಗೆ ಹೊಂದಿಕೊಂಡಂತೆ ಹೊಸದಾಗಿ ನಗರೀಕರಣದ ಚಟುವಟಿಕೆಗಳು ಹೆಚ್ಚುವ ಸಾಧ್ಯತೆ ಇವೆ.

ಬೆಂಗಳೂರು–ಮೈಸೂರಿನ ಅಂತರ ಕಡಿಮೆ ಆಗುವುದರಿಂದ ಬೆಂಗಳೂರು ಹೊರತುಪಡಿಸಿ ಕೈಗಾರಿಕೆಗೆ ಯೋಜಿಸುತ್ತಿರುವವರು ಮೈಸೂರಿನತ್ತ ಬರಲು ಒಲವು ತೋರುವ ಸಾಧ್ಯತೆ ಇದೆ. ಇದರಿಂದ ಈ ಹೆದ್ದಾರಿಯು ‘ಎಕನಾಮಿಕ್ ಕಾರಿಡಾರ್’ ಆಗಿ ರೂಪಗೊಳ್ಳುವ ಮತ್ತು ಉದ್ಯೋಗದ ಅವಕಾಶ ಸೃಷ್ಟಿಸುವ ಸಾಧ್ಯತೆಯೂ ಕಂಡುಬರುತ್ತಿದೆ. ರಿಯಲ್ ಎಸ್ಟೇಟ್ ಜೊತೆಗೆ ಕೈಗಾರಿಕೆ ಬೆಳವಣಿಗೆಗೂ ಅನುಕೂಲವಾಗಲಿದೆ ಎನ್ನುತ್ತಾರೆ ಉದ್ಯಮಿಗಳು.

ಬೆಂಗಳೂರು ಹೊರವಲಯದ ಕುಂಬಳಗೋಡು, ಮೈಸೂರು ಹೊರವಲಯದ ಸಿದ್ದಲಿಂಗಪುರ, ಕಳಸ್ತವಾಡಿ, ನಾಗನಹಳ್ಳಿ ಭಾಗದಲ್ಲಿ ನಿವೇಶನಗಳಿಗೆ ಬೇಡಿಕೆ ಹೆಚ್ಚಿದೆ. ಮಂಡ್ಯದಲ್ಲಿ ಬೈಪಾಸ್‌ಗೆ ಹೊಂದಿಕೊಂಡಂತೆಯೇ ಅಮರಾವತಿ ಹೋಟೆಲ್ ಸಮೀಪದಲ್ಲಿ ಈಗಾಗಲೇ ಹೊಸದಾಗಿ ಬಡಾವಣೆ ಅಭಿವೃದ್ಧಿಪಡಿಸುವ ಕೆಲಸ ನಡೆದಿದೆ.

‘ಮೈಸೂರಿನಲ್ಲಿ ಹೊಸದಾಗಿ ಕೈಗಾರಿಕೆಗಳ ಆರಂಭಕ್ಕೆ ಹೆದ್ದಾರಿಯು ಕೆಂಪುಹಾಸು ಆಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ’ ಎನ್ನುತ್ತಾರೆ ಉದ್ಯಮಿ ಎಸ್.ಕೆ.ಜೈನ್.

> **ಹೆದ್ದಾರಿಯಿಂದ ಎರಡೂ ನಗರಗಳ ಕೈಗಾರಿಕೆಗೆ ಹಾಗೂ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಸರಕು ಸಾಗಣೆ ವೆಚ್ಚವೂ ತಗ್ಗಲಿದೆ. ಮಳೆಯಾದಾಗ ತೊಂದರೆಯಾಗದಂತೆ ನೋಡಿಕೊಳ್ಳಬೇಕು**
>
> **ಸುರೇಶ್‌ಕುಮಾರ್ ಜೈನ್,** ಪ್ರಧಾನ ಕಾರ್ಯದರ್ಶಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಪರಿಷತ್, ಮೈಸೂರು

ಗೊಂಬೆ ಮಾರಾಟಕ್ಕೆ ಹೊಡೆತ

ಆಟಿಕೆ ಗೊಂಬೆಗಳಿಗೆ ಹೆಸರುವಾಸಿಯಾಗಿರುವ ಚನ್ನಪಟ್ಟಣವೂ ಹೆದ್ದಾರಿಯ ಪ್ರಯಾಣಿಕರನ್ನೇ ನೆಚ್ಚಿಕೊಂಡಿದೆ. ಚನ್ನಪಟ್ಟಣದಿಂದ ಮದ್ದೂರುವರೆಗೆ ಹಳೆಯ ಹೆದ್ದಾರಿ ಬದಿಯಲ್ಲಿ ನೂರಾರು ಆಟಿಕೆ ಅಂಗಡಿಗಳಿವೆ. ಬೈಪಾಸ್ ರಸ್ತೆ ನಿರ್ಮಾಣದ ನಂತರ ಗೊಂಬೆಗಳ ಮಾರಾಟಕ್ಕೆ ಹೊಡೆತ ಬೀಳುತ್ತಿದೆ.

ಚನ್ನಪಟ್ಟಣದ ಬೈರಾಪಟ್ಟಣದಿಂದ ಮದ್ದೂರು ತಾಲ್ಲೂಕಿನವರೆಗೂ ಹಳೆ ಹೆದ್ದಾರಿಯೇ ಚಾಲ್ತಿಯಲ್ಲಿದ್ದರೂ ಎಕ್ಸ್‌ಪ್ರೆಸ್ ವೇ ಕಾರಣ ಪ್ರಯಾಣಿಕರು ಎಲ್ಲೆಂದರಲ್ಲಿ ವಾಹನ ನಿಲ್ಲಿಸಿ ಕೆಳಗಿಳಿಯಲು ಆಗದು. ಸರ್ವೀಸ್ ರಸ್ತೆಯಲ್ಲಿ ಪ್ರಯಾಣಿಸುವವರಷ್ಟೇ ಬೇಕಾದ ಕಡೆ ಹೋಟೆಲ್ ತಿಂಡಿ–ತಿನಿಸು ಸವಿಯಲು ಸಾಧ್ಯ. ಹೀಗಾಗಿ ಗೊಂಬೆ ಮತ್ತು ಹೋಟೆಲ್ ಉದ್ಯಮ ಎರಡಕ್ಕೂ ಗ್ರಾಹಕರ ಸಂಖ್ಯೆ ಕುಸಿಯುವ, ಒಟ್ಟು ಪ್ರವಾಸೋದ್ಯಮದ ಮೇಲೂ ಮಾರಕ ಪರಿಣಾಮ ಬೀರುವ ಕಳವಳ ಮೂಡಿದೆ.

ಶ್ರೀರಂಗಪಟ್ಟಣ ಹೊರವಲಯದಲ್ಲಿ ಹೆದ್ದಾರಿ ಸಾಗುವುದರಿಂದ ಐತಿಹಾಸಿಕ ಪಟ್ಟಣದ ಸಂಪರ್ಕವೂ ತಪ್ಪಲಿದೆ. ಮಾರ್ಗದ ನಡುವಿನ ಊರುಗಳ ಸಂಪರ್ಕ ರಸ್ತೆಗಳಿಗೂ ಅಡ್ಡಿಯಾಗಲಿದೆ. ಕೃಷಿ ಉತ್ಪನ್ನಗಳ ಸಾಗಣೆಗೆ ಸರ್ವಿಸ್ ರಸ್ತೆಯನ್ನೇ ಬಳಸಬೇಕಾಗುತ್ತದೆ.

ಮದ್ದೂರಿನಲ್ಲಿ ವಾಹನಗಳು ಮೇಲ್ಸೇತುವೆಯಲ್ಲಿ ಸಾಗುವುದರಿಂದ ಮದ್ದೂರು ವಡೆಯ ರುಚಿಯೂ ಪ್ರಯಾಣಿಕರಿಗೆ ಸಿಗಲಾರದು. ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಕೃಷಿಯಾಧಾರಿತ ಉದ್ಯಮಕ್ಕೂ ಪೆಟ್ಟು ಬೀಳಲಿದೆ. ಹೆದ್ದಾರಿ ಬದಿ ತಾಜಾ ತರಕಾರಿ, ಕಬ್ಬಿನ ರಸ, ಮಂಡ್ಯದ ಬೆಲ್ಲ, ಮದ್ದೂರು ಎಳನೀರು, ಗಂಜಾಂ ಸಪೋಟ, ಮಲ್ಲಿಗೆ ಹೂ ಮಾರಿ ಜೀವನ ಸಾಗಿಸುತ್ತಿದ್ದವರ ಬದುಕು ದುರ್ಬರವಾಗಲಿದೆ.

‘ಮಂಥನ್2022 ಬ್ಯುಸಿನೆಸ್ ಪ್ಲ್ಯಾನ್ ಪ್ರೆಜಂಟೇಷನ್ ಸ್ಪರ್ಧೆ’ಯಲ್ಲಿ ಹಾವೇರಿ ಜಿಲ್ಲೆಯ ಹನುಮನಮಟ್ಟಿಯ ಕೃಷಿ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದರು. (ಎಡದಿಂದ) ಎಫ್‌ಕೆಸಿಸಿಐ ನಿಕಟ ಪೂರ್ವ ಅಧ್ಯಕ್ಷ ಪೇರಿಕಲ್ ಎಂ. ಸುಂದರ್, ಹಿರಿಯ ಉಪಾಧ್ಯಕ್ಷ (ಚುನಾಯಿತ) ರಮೇಶ್ ಚಂದ್ರ ಲಹೋಟಿ, ಅಧ್ಯಕ್ಷ (ಚುನಾಯಿತ) ಗೋಪಲ್ ರೆಡ್ಡಿ, ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್.ಪ್ರಸಾದ್, ಸಂಸದ ತೇಜಸ್ವಿ ಸೂರ್ಯ, ವಿಟಿಯು ಕುಲಪತಿ ಕರಿಸಿದ್ದಪ್ಪ ಮತ್ತು 'ಸ್ಟಾರ್ಟ್ ಅಪ್ ವಿಷನ್ ಗ್ರೂಪ್'ನ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ಇದ್ದರು —ಪ್ರಜಾವಾಣಿ ಚಿತ್ರ

‘ಕ್ರೋರ್ ಕಾಬ್’ ಸಂಶೋಧನೆಗೆ ₹10 ಲಕ್ಷ ಬಹುಮಾನ

ಬೆಂಗಳೂರು: ಹಾವೇರಿ ಜಿಲ್ಲೆಯ ಹನುಮನಮಟ್ಟಿ ಕೃಷಿ ಕಾಲೇಜಿನ ವಿದ್ಯಾರ್ಥಿಗಳು ಸಂಶೋಧಿಸಿದ ‘ಕ್ರೋರ್ ಕಾಬ್’ (ಕೋಕೊ ಪೀಟ್ ಮಾದರಿಯ ಪ್ಲಾಂಟಿಂಗ್ ಮೀಡಿಯಾ) ಯೋಜನೆಗೆ ಪ್ರಥಮ ಸ್ಥಾನ ಸಂದಿತು. ಅದನ್ನು ರೂಪಿಸಿದ ವಿದ್ಯಾರ್ಥಿಗಳು ₹10 ಲಕ್ಷ ನಗದು ಮತ್ತು ಟ್ರೋಫಿ ಪಡೆದರು. ಕೋಕೊ ಪೀಟ್ ತಯಾರಿಸಲು ಬೇಕಾಗುವ ದೀರ್ಘಾವಧಿಯನ್ನು ಕಡಿಮೆ ಮಾಡುವಂತಹ ಸಂಶೋಧನೆ ಇದು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಭಾನುವಾರ ಹಮ್ಮಿಕೊಂಡಿದ್ದ ‘ಮಂಥನ್-2022 ಬ್ಯುಸಿನೆಸ್ ಪ್ಲ್ಯಾನ್ ಪ್ರೆಸೆಂಟೇಷನ್ ಸ್ಪರ್ಧೆ’ಯಲ್ಲಿ ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್. ಪ್ರಸಾದ್ ಪ್ರಶಸ್ತಿ ಪ್ರದಾನ ಮಾಡಿದರು.

ಸೇಲಂನ ಸೋನಾ ಕಾಲೇಜ್ ಆಫ್ ಟೆಕ್ನಾಲಜಿ ವಿದ್ಯಾರ್ಥಿಗಳು ಸಂಶೋಧಿಸಿದ ‘ಎಲೆಕ್ಟ್ರಿಕ್ ಸಿಲಿಂಡರ್ ಫಾರ್ ಜ್ಯಾಕ್ವಾರ್ಡ್ ಮಷಿನ್’ ಎರಡನೇ ಸ್ಥಾನ ಪಡೆಯಿತು. ₹5 ಲಕ್ಷ ನಗದು ಮತ್ತು ಟ್ರೋಫಿ ಬಹುಮಾನ ಸಂದಿತು.

ಧಾರವಾಡದ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಂಶೋಧನೆ ಮಾಡಿ ತಯಾರಿಸಿದ ‘ಪ್ಯೂಪ್‌ಬಿತೆ’ (ಕುಡು ಫೀಡ್) ಮೂರನೇ ಸ್ಥಾನ ಪಡೆಯಿತು. ₹4 ಲಕ್ಷ ನಗದು ಮತ್ತು ಟ್ರೋಫಿಯನ್ನು ತಂಡಕ್ಕೆ ಬಹುಮಾನವಾಗಿ ನೀಡಲಾಯಿತು. ರೇಷ್ಮೆ ಹುಳುಗಳನ್ನು ಕೋಳಿಗಳಿಗೆ ಪ್ರೋಟೀನ್‌ಯುಕ್ತ ಆಹಾರವನ್ನಾಗಿಸುವ ಸಂಶೋಧನೆ ಇದು.

ಸೋನಾ ಕಾಲೇಜ್ ಆಫ್ ಟೆಕ್ನಾಲಜಿ ವಿದ್ಯಾರ್ಥಿಗಳು ಸಂಶೋಧಿಸಿದ ‘ಪ್ರೊಡಕ್ಷನ್ ಆಫ್ ಎಕೋ ಫ್ರೆಂಡ್ಲಿ ವೆಗಾನ್ ಲೆದರ್ ಯೂಸಿಂಗ್ ಡಿಗ್ರೇಡಬಲ್ ಬಯೋ ವೇಸ್ಟ್’ಗೆ ನಾಲ್ಕನೆ ಸ್ಥಾನ ದೊರೆಯಿತು. ₹3 ಲಕ್ಷ ನಗದು ಸಂದಿತು. ಎಸ್‌ಡಿಎಂ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ವಿದ್ಯಾರ್ಥಿಗಳು ಸಂಶೋಧಿಸಿದ ‘ಡಿಸೈನ್ ಆ್ಯಂಡ್ ಫ್ಯಾಬ್ರಿಕೇಷನ್ ಆಫ್ ಎ ಸಿಸ್ಟಮ್ ಟು ಕ್ಯಾಪ್ಚರ್ ಅಂಬಿಯೆಂಟ್ CO_2’ಗೆ ಐದನೇ ಸ್ಥಾನ ಸಂದಿದ್ದು, ₹2 ಲಕ್ಷ ನಗದು ಬಹುಮಾನ ಲಭಿಸಿತು.

ಸರ್ಕಾರಿ ರಾಮನಾರಾಯಣ ಚೆಲ್ಲಾರಾಮ್ ಕಾಲೇಜ್ ಆಫ್ ಕಾಮರ್ಸ್ ಆ್ಯಂಡ್ ಮಾನೇಜ್‌ಮೆಂಟ್ ವಿದ್ಯಾರ್ಥಿಗಳು ಸಂಶೋಧಿಸಿದ ‘ಕ್ರಿಡ್ಜನ್’ಗೆ ಆರನೇ ಸ್ಥಾನ ಲಭಿಸಿದ್ದು, ₹1 ಲಕ್ಷ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು.

ಸಂಸದ ತೇಜಸ್ವಿ ಸೂರ್ಯ ಮುಖ್ಯ ಅತಿಥಿಯಾಗಿ ಮಾತನಾಡಿದರು.

‘ಸ್ಟಾರ್ಟ್‌ಅಪ್‌ಗಳು ಆತ್ಮ ನಿರ್ಭರ ಭಾರತಕ್ಕೆ ಬಲ’

‘ಮುಂದಿನ 25 ವರ್ಷಗಳಲ್ಲಿ ಭಾರತವೂ ವಿಶ್ವದ ಮೂರು ದೊಡ್ಡ ಆರ್ಥಿಕತೆಗಳಲ್ಲಿ ಒಂದಾಗಲಿದೆ’ ಎಂದು ಸಂಸದ ತೇಜಸ್ವಿ ಸೂರ್ಯ ಆಶಾವಾದ ವ್ಯಕ್ತಪಡಿಸಿದರು.

‘ಪ್ರಶಸ್ತಿ ಪಡೆದ ವಿದ್ಯಾರ್ಥಿಗಳು ಹಳ್ಳಿಗಳ ಸಮಸ್ಯೆಗಳಿಗೆ ಪರಿಹಾರ ಸೂಚಿಸುವಂತಹ ಸ್ಟಾರ್ಟ್‌ಅಪ್‌ಗಳನ್ನು ಅಭಿವೃದ್ಧಿ ಪಡಿಸಿದ್ದು, ಅದು ಆತ್ಮ ನಿರ್ಭರ ಭಾರತಕ್ಕೆ ಮತ್ತಷ್ಟು ಬಲ ನೀಡಲಿದೆ’ ಎಂದರು.

ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್. ಪ್ರಸಾದ್ ಮಾತನಾಡಿ, ‘ಎಫ್‌ಕೆಸಿಸಿಐನ ಮಂಥನ 14ನೇ ಆವೃತ್ತಿಯನ್ನು ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ ಆಯೋಜಿಸಲಾಗಿದೆ. ಈ ಕಾರ್ಯಕ್ರಮದ ಮೂಲಕ ರಾಷ್ಟ್ರ ನಿರ್ಮಾಣಕ್ಕಾಗಿ ಹೆಚ್ಚು ಯುವ ಉದ್ಯಮಿಗಳನ್ನು ಸೃಷ್ಟಿಸುವ ಗುರಿ ಇದೆ. ಪ್ರಧಾನಿ ನರೇಂದ್ರ ಮೋದಿ ಅವರ ಸ್ಟಾರ್ಟ್‌ಅಪ್ ಇಂಡಿಯಾ, ಯಂಗ್ ಇಂಡಿಯಾ ಉಪಕ್ರಮಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸಲಾಗುತ್ತಿದೆ’ ಎಂದು ಹೇಳಿದರು.

ಮಕ್ಕಳಿಗೆ ಪುರಸ್ಕಾರ

ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಕಿರುತೆರೆ ನಟ ಸಾಗರ್‌ಗೌಡ ಅವರು ಎಸ್ಸೆಸ್ಸೆಲ್ಸಿ ಹಾಗೂ ಪಿಯುನಲ್ಲಿ ಉತ್ತಮ ಅಂಕ ಪಡೆದ, ಸದಸ್ಯರ ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಿದರು. ಸಂಘದ ನಿರ್ದೇಶಕರಾದ ಶಿವಕುಮಾರ್ ಬೆಳ್ಳಿತಟ್ಟೆ, ಬಿ.ಎನ್.ಮೋಹನ್‌ಕುಮಾರ್, ಯತಿರಾಜು, ಉಪಾಧ್ಯಕ್ಷ ಶಿವಣ್ಣ, ಸಚ್ಚಿದಾನಂದ ಕುರಗುಂದ, ಖಜಾಂಚಿ ಮುಂಜಾನೆ ಸತ್ಯ, ಕಾರ್ಯದರ್ಶಿ ಎಸ್.ತೇಜಸ್ವಿನಿ, ಅಧ್ಯಕ್ಷ ರಾಘವೇಂದ್ರ ಕೆ.ತೊಗರ್ಸಿ, ನಿರ್ದೇಶಕರಾದ ಎಸ್. ಲಕ್ಷ್ಮಿನಾರಾಯಣ, ಎನ್.ವನಿತಾ, ಮಂಜುಶ್ರೀ ಎಂ. ಕಡಕೋಳ, ಕೆ.ಎಂ.ಪಂಕಜಾ ಇದ್ದರು

‘ಬಿಎಂಎಲ್‌ಟಿಎ’ ರಚನೆಗೆ ಮುಂದಾದ ಸರ್ಕಾರ • ಇದೇ ಅಧಿವೇಶನದಲ್ಲಿ ಮಂಡನೆ

ಸಂಚಾರ ಸುಧಾರಣೆಗೆ ಪ್ರತ್ಯೇಕ ಪ್ರಾಧಿಕಾರ

• ಆದಿತ್ಯ ಕೆ.ಎ.

ಬೆಂಗಳೂರು: ಬೆಂಗಳೂರಿನಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಸುಧಾರಣೆ ದೊಡ್ಡ ಸವಾಲಾಗಿ ಪರಿಣಮಿಸಿದ್ದು, ಈ ಸಮಸ್ಯೆಯ ಪರಿಹಾರಕ್ಕೆ ‘ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ’ (ಬಿಎಂಎಲ್‌ಟಿಎ) ರಚಿಸಲು ಸರ್ಕಾರ ಮುಂದಾಗಿದೆ.

ಇತ್ತೀಚೆಗಷ್ಟೇ ಪ್ರಾಧಿಕಾರ ರಚನೆಯ ವಿಷಯವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದರು. ಇದಕ್ಕೆ ಪೂರಕವಾಗಿ ಮಸೂದೆಯ ಕರಡು ಸಿದ್ಧಪಡಿಸಿದ್ದು, ಸೋಮವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ಪಡೆದು ಬಳಿಕ ವಿಧಾನಮಂಡಲದಲ್ಲಿ ಮಂಡಿಸಲಿದ್ದಾರೆ.

ಸಂಚಾರ ದಟ್ಟಣೆ ನಿರ್ವಹಣೆಗೆ ಪ್ರತ್ಯೇಕ ಪ್ರಾಧಿಕಾರವನ್ನು ಅಸ್ತಿತ್ವಕ್ಕೆ ತಂದು, ಅದರ ಮೂಲಕ ವೇಗವಾಗಿ ಬೆಳೆಯುತ್ತಿರುವ ನಗರದಲ್ಲಿ ಸಂಬಂಧಿತ ಕೆಲವು ಇಲಾಖೆಗಳ ಮಧ್ಯೆ ಸಮನ್ವಯದ ಮೂಲಕ ಸುಧಾರಣಾ ಕ್ರಮ ಕೈಗೊಳ್ಳಲು ಯೋಜನೆ ರೂಪಿಸಲಾಗಿದೆ.

ಬೆಂಗಳೂರಿನ ರಸ್ತೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ವಾಹನ ದಟ್ಟಣೆ – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಹಲವು ಇಲಾಖೆಗಳು ಶ್ರಮಿಸುತ್ತಿದ್ದರೂ ನಿರೀಕ್ಷಿತ ಫಲಿತಾಂಶ ದೊರೆಯುತ್ತಿಲ್ಲ. ಆದ್ದರಿಂದ, ಪ್ರತ್ಯೇಕವಾದ ಪ್ರಾಧಿಕಾರವನ್ನೇ ರಚಿಸಿ ‘ಏಕೀಕೃತ ವ್ಯವಸ್ಥೆ’ ಜಾರಿಗೆ ತರುವುದು ಪ್ರಾಧಿಕಾರದ ಮುಖ್ಯ ಉದ್ದೇಶ. ಪ್ರಾಧಿಕಾರ ರಚನೆಯ ಬಳಿಕ ಇಡೀ ನಗರದ ಅಭಿವೃದ್ಧಿ, ನಿರ್ವಹಣೆ, ಮೇಲ್ವಿಚಾರಣೆಯ ನಿಯಂತ್ರಣದ ಉಸ್ತುವಾರಿಯ ಹೊಣೆ ಪ್ರಾಧಿಕಾರಕ್ಕೆ ಸಿಗಲಿದೆ.

ಐಟಿ–ಬಿಟಿ ಖ್ಯಾತಿಯ ನಗರದಲ್ಲಿ ಬಡಾವಣೆಗಳ ವೈಜ್ಞಾನಿಕ ಬೆಳವಣಿಗೆಗೂ ಇದು ಸಹಕಾರಿ ಆಗಲಿದೆ. ಅಭಿವೃದ್ಧಿಗೆ ವೇಗ ದೊರೆಯಲಿದೆ. ಕೆಲವು ಬಡಾವಣೆಗಳು ಅವೈಜ್ಞಾನಿಕವಾಗಿ ಬೆಳೆಯುತ್ತಿವೆ ಎಂಬ ಆರೋಪವಿದೆ. ಈ ಎಲ್ಲ ಸಮಸ್ಯೆಗಳಿಗೆ ಇತಿಶ್ರೀ ದೊರೆಯಲಿದೆ ಎನ್ನುತ್ತಾರೆ ಅಧಿಕಾರಿಗಳು.

ಬಿಬಿಎಂಪಿ, ಹೆದ್ದಾರಿ ಪ್ರಾಧಿಕಾರ, ಸಂಚಾರ ಪೊಲೀಸ್, ಬಿಎಂಟಿಸಿ, ಬಿಎಂಆರ್‌ಸಿಎಲ್ ಮತ್ತು ಸಾರಿಗೆ ಇಲಾಖೆಯಂಥ ಅನೇಕ ಸಂಸ್ಥೆಗಳು, ಏಜೆನ್ಸಿಗಳು ನಗರದ ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿ, ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆಯ ಜವಾಬ್ದಾರಿ ಹೊಂದಿವೆ. ಪ್ರಾಧಿಕಾರ ಅಸ್ತಿತ್ವಕ್ಕೆ ಬಂದರೆ ಒಂದೇ ಸೂರಿನಡಿ ಎಲ್ಲ ವ್ಯವಸ್ಥೆ ತರುವ ಪ್ರಯತ್ನಕ್ಕೆ ಸರ್ಕಾರವು ಯೋಜನೆ ರೂಪಿಸಿದೆ.

ಮುಖ್ಯಮಂತ್ರಿ ಈ ಪ್ರಾಧಿಕಾರದ ಅಧ್ಯಕ್ಷರು. ನಗರಾಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಸಾರಿಗೆ ಸಚಿವ, ಮುಖ್ಯಕಾರ್ಯದರ್ಶಿ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳು ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾರೆ.

ನಗರದಲ್ಲಿ ಸುಸ್ಥಿರ ಸಾರಿಗೆ ವ್ಯವಸ್ಥೆ ಕಲ್ಪಿಸುವುದು, ಯೋಜನೆಗೆ ಭೂಮಿ ಬಳಕೆ, ರಸ್ತೆ, ಸಾರಿಗೆ ಯೋಜನೆ, ಟೋಲ್ ನಿರ್ಮಾಣಗಳ ಮೇಲೆ ಪ್ರಾಧಿಕಾರವು ನಿಗಾ ವಹಿಸಲಿದೆ. ಸಾರಿಗೆ ವ್ಯವಸ್ಥೆ ಸುಧಾರಣೆಗೆ ಹೂಡಿಕೆ ಅನುಮೋದಿಸುವ ಹಾಗೂ ವಿಮರ್ಶೆಗೆ ಒಳಪಡಿಸುವ ಅಧಿಕಾರವನ್ನು ಪ್ರಾಧಿಕಾರಕ್ಕೆ ನೀಡುವ ಆಲೋಚನೆಯೂ ಇದೆ. ಸಾರಿಗೆ ಪ್ರಯಾಣ ದರ ಹೆಚ್ಚಿಸುವ ನಿರ್ಧಾರವನ್ನೂ ಪ್ರಾಧಿಕಾರದ ವ್ಯಾಪ್ತಿಗೆ ತರಬೇಕೆಂದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ದಂಡ ವಿಧಿಸುವ ಅಧಿಕಾರ

‘ನಗರದಲ್ಲಿ ಕಾಲಮಿತಿಯಲ್ಲಿ ಕಾಮಗಾರಿಗಳು ನಡೆಯದಿರುವ ಕಾರಣಕ್ಕೆ ಸಂಚಾರ ವ್ಯವಸ್ಥೆಯಲ್ಲಿ ಸಮಸ್ಯೆಗಳು ಉದ್ಭವಿಸುತ್ತಿವೆ. ವಿಳಂಬ ಧೋರಣೆ, ಆದೇಶ ಪಾಲಿಸದ ವ್ಯಕ್ತಿಗಳಿಗೆ (ಗುತ್ತಿಗೆದಾರರು) ದಂಡ ವಿಧಿಸುವ ಅಧಿಕಾರವನ್ನು ಇನ್ನು ಮುಂದೆ ಪ್ರಾಧಿಕಾರಕ್ಕೆ ನೀಡಲಾಗುತ್ತಿದೆ.

‘ಮೊದಲ ಬಾರಿಯ ತಪ್ಪಿಗೆ ₹ 1 ಲಕ್ಷವರೆಗೆ ದಂಡ, ಮತ್ತೆ ಅದೇ ತಪ್ಪು ಮಾಡಿದರೆ ₹ 2 ಲಕ್ಷ ದಂಡ, ಮುಂದುವರಿದರೆ ಪ್ರತಿನಿತ್ಯ ₹ 5 ಸಾವಿರ ದಂಡ ವಿಧಿಸುವ ಅಂಶವನ್ನೂ ಮಸೂದೆಯಲ್ಲಿ ಸೇರಿಸಲಾಗಿದೆ.

ಸರ್ಕಾರಿ ಇಲಾಖೆ ಮುಖ್ಯಸ್ಥರು ಹಾಗೂ ಏಜೆನ್ಸಿಗಳ ಗಮನಕ್ಕೆ ಬಂದೂ ವಿಳಂಬವಾದರೆ ಅವರನ್ನೂ ಶಿಕ್ಷೆಗೆ ಗುರಿಪಡಿಸುವ ಅಧಿಕಾರವು ಪ್ರಾಧಿಕಾರಕ್ಕೆ ಇರಲಿದೆ’ ಎಂದೂ ನಗರಾಭಿವೃದ್ಧಿ ಸಚಿವಾಲಯದ ಮೂಲಗಳು ತಿಳಿಸಿವೆ.

ಸರ್ಕಾರಿ ಕಾಲೇಜಿನಲ್ಲಿ ಉಚಿತ ತರಬೇತಿ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಕೋಚಿಂಗ್ ಸೆಂಟರ್‌ಗಳಲ್ಲಿ ಸಾವಿರಾರು ರೂಪಾಯಿ ವ್ಯಯಿಸಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಹಾಗೂ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್)ಗೆ ತರಬೇತಿ ಪಡೆಯುವುದು ಬಡ ವಿದ್ಯಾರ್ಥಿಗಳಿಗೆ ಅಸಾಧ್ಯ. ಇದನ್ನು ಮನಗಂಡ ಇಲ್ಲಿನ ವಡಗಾವಿಯ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಉಚಿತವಾಗಿ ತರಬೇತಿ ನೀಡಿ, ಸಿಇಟಿ ಮತ್ತು ನೀಟ್‌ಗೆ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದ್ದಾರೆ.

ಇಲ್ಲಿ ಪಿಯು ವಿಜ್ಞಾನ ವಿಭಾಗದಲ್ಲಿ ಪ್ರಥಮ ವರ್ಷದಲ್ಲಿ 67, ದ್ವಿತೀಯ ವರ್ಷದಲ್ಲಿ 33 ಸೇರಿ 100 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಕಳೆದ ನಾಲ್ಕು ವಾರಗಳಿಂದ ಅವರಿಗೆ ತರಬೇತಿ ನೀಡಲಾಗುತ್ತಿದೆ. ಮಂಗಳೂರಿನ ಬಾಸ್ಕೋಸ್ ಪಬ್ಲಿಕೇಷನ್ಸ್ ಇದಕ್ಕೆ ಅಗತ್ಯವಾದ ಕಲಿಕಾ ಸಾಮಗ್ರಿ ಪೂರೈಸಿದೆ.

‘ನಮ್ಮ ಕಾಲೇಜಿಗೆ ಬೆಳಗಾವಿ ನಗರ ಮಾತ್ರವಲ್ಲದೆ, ಸುತ್ತಲಿನ ಹಳ್ಳಿಗಳಿಂದಲೂ ವಿದ್ಯಾರ್ಥಿಗಳು ಬರುತ್ತಾರೆ. ಈ ಪೈಕಿ ಹೆಚ್ಚಿನವರು ಬಡವರು. ಅವರಿಗೆ ಅನುಕೂಲವಾಗಲೆಂದು ಕಾಲೇಜಿನ ಉಪನ್ಯಾಸಕರೆಲ್ಲ ಕೂಡಿಕೊಂಡು ಪ್ರತಿ ಶನಿವಾರ ಮತ್ತು ಭಾನುವಾರ ತರಬೇತಿ ಕೊಡುತ್ತಿದ್ದೇವೆ. ಬೇರೆ ಸರ್ಕಾರಿ ಕಾಲೇಜಿನ ಉಪನ್ಯಾಸಕರೂ ನಮ್ಮ ಸೇವೆಗೆ ಕೈಜೋಡಿಸಿದ್ದಾರೆ’ ಎಂದು ಪ್ರಾಚಾರ್ಯ ಶ್ರೀಶೈಲ ಕಾಪಸೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅಗತ್ಯವಿರುವವರಿಗೆ ತರಬೇತಿ ನೀಡಬೇಕು ಎಂಬುದಷ್ಟೇ ನಮ್ಮ ಉದ್ದೇಶ. ಆಸಕ್ತರಿದ್ದರೆ ಬೇರೆ ಕಾಲೇಜಿನ ವಿದ್ಯಾರ್ಥಿಗಳೂ ತರಬೇತಿಗೆ ಹಾಜರಾಗಬಹುದು. ಮುಂದಿನ ದಿನಗಳಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ, ಮಾರ್ಗದರ್ಶನ ನೀಡುವ ಯೋಜನೆ ಹಾಕಿಕೊಂಡಿದ್ದೇವೆ. ಶೈಕ್ಷಣಿಕ ವರ್ಷವಿಡೀ ಈ ತರಗತಿ ನಡೆಯುತ್ತದೆ’ ಎನ್ನುತ್ತಾರೆ ಉಪನ್ಯಾಸಕರಾದ ಎನ್.ಬಿ.ಮರೆಣ್ಣವರ, ಡಾ.ಎಸ್.ಎಸ್.ಪಾಟೀಲ ಹಾಗೂ ಎಸ್.ಎಸ್. ಚುಳೇಕರ್.

> **ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಖಾಸಗಿ ಸಂಸ್ಥೆಗಳಲ್ಲಿ ತರಬೇತಿ ಪಡೆಯಲು ಬಡತನ ಅಡ್ಡಿಯಾಗಿದೆ. ಉಚಿತ ತರಬೇತಿಯಿಂದ ಅನುಕೂಲವಾಗಿದೆ**
>
> **ಶಿವಾನಂದ ಹೋಳಿ, ಸೃಷ್ಟಿ ಅಗಸಿಮನಿ** ವಿದ್ಯಾರ್ಥಿಗಳು

ವಡಗಾವಿಯ ಸರ್ಕಾರಿ ಪಿಯು ಕಾಲೇಜಿನಲ್ಲಿ ಪಿಯು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಭಾನುವಾರ ಸಿಇಟಿ ತರಬೇತಿ ನೀಡಲಾಯಿತು —ಪ್ರಜಾವಾಣಿ ಚಿತ್ರ

ನಿಗಮಕ್ಕಾಗಿ ಹೋರಾಟ

ಮಂಗಳೂರು: ಬಿಲ್ಲವರ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು, ಬಿಲ್ಲವರನ್ನು ಪ್ರವರ್ಗ-1ಕ್ಕೆ ಸೇರಿಸಬೇಕು ಎಂದು ಒತ್ತಾಯಿಸಿ ಹೋರಾಟ ನಡೆಸಲು ಶ್ರೀ ನಾರಾಯಣ ಗುರು ವಿಚಾರವೇದಿಕೆ ನಿರ್ಧರಿಸಿದೆ. ಮುಂದಿನ ತಿಂಗಳು ಬೆಂಗಳೂರಿನಲ್ಲಿ ನಡೆಯಲಿರುವ ಸಭೆಯಲ್ಲಿ ಹೋರಾಟದ ರೂಪುರೇಷೆ ನಿರ್ಧರಿಸಲಾಗುವುದು ಎಂದು ಅಧ್ಯಕ್ಷ ಸತ್ಯಜಿತ್ ಸುರತ್ಕಲ್ ತಿಳಿಸಿದರು.

ಆರ್.ಆರ್. ನಗರ ಜಂಕ್ಷನ್: ಮೇಲ್ಸೇತುವೆ ಕಾಮಗಾರಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ರಾಜರಾಜೇಶ್ವರಿನಗರ ಜಂಕ್ಷನ್‌ನಲ್ಲಿ ಸಿಗ್ನಲ್‌ರಹಿತ ಮುಕ್ತ ಸಂಚಾರಕ್ಕೆ ₹71.45 ಕೋಟಿ ವೆಚ್ಚದ ಮೇಲ್ಸೇತುವೆ ಕಾಮಗಾರಿ ಆರಂಭವಾಗಿದೆ.

ನಾಯಂಡಹಳ್ಳಿಯಿಂದ ಆರ್.ಆರ್. ನಗರಕ್ಕೆ ಎರಡು ಕಡೆಗಳಿಂದ ಪ್ರತ್ಯೇಕ ಮಾರ್ಗಗಳು ನಿರ್ಮಾಣವಾಗಲಿವೆ. ಈ ಪೈಕಿ ಒಂದು ಮಾರ್ಗ ರ್‍ಯಾಂಪ್–ಮೇಲ್ಸೇತುವೆಯಾಗಲಿದೆ. ಆರ್.ಆರ್. ನಗರದಿಂದ ಜ್ಞಾನಭಾರತಿ ದ್ವಾರಕ್ಕೆ ದ್ವಿಮುಖ ಮೇಲ್ಸೇತುವೆ ನಿರ್ಮಾಣವಾಗಲಿದೆ.

ವೃಷಭಾವತಿ ನದಿ ಕಣಿವೆಯ ಅಗಲವನ್ನು ಈ ಭಾಗದಲ್ಲಿ 21.6 ಮೀಟರ್‌ಗೆ ವಿಸ್ತರಿಸಿ, ಅದರ ಮೇಲೆ ಪಿಲ್ಲರ್ ಅಳವಡಿಸಿ ಮೇಲ್ಸೇತುವೆಗಳನ್ನು ನಿರ್ಮಿಸಲಾಗುತ್ತದೆ. ರಾಜರಾಜೇಶ್ವರಿ ನಗರದ ಆರ್ಚ್ ಅನ್ನು ಹಾಗೆಯೇ ಉಳಿಸಿಕೊಳ್ಳುವ ಯೋಜನೆ ಇದೆ. ಈ ಯೋಜನೆಗೆ ಬಿಬಿಎಂಪಿ ‘ಸಿಗ್ನಲ್‌ಫ್ರೀ ರೋಟರಿ’ ಎಂದು ಹೆಸರಿಸಿದೆ.

‘ಸಚಿವ ಮುನಿರತ್ನ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಮೇಲ್ಸೇತುವೆ ಕಾಮಗಾರಿಗೆ ಚಾಲನೆ ನೀಡಿದ್ದರು. ಜುಲೈ 5ರಿಂದ ಕಾಮಗಾರಿ ಆರಂಭವಾಗಿದೆ. ರಾಜಕಾಲುವೆ ವಿಸ್ತರಣೆ ಕಾರ್ಯ ನಡೆಯುತ್ತಿದೆ. ಇದೀಗ ಮುಖ್ಯವಾಗಿ ರ್‍ಯಾಂಪ್ ಹಾಗೂ ಮೇಲ್ಸೇತುವೆ ಕೆಲಸವೂ ಆರಂಭವಾಗಿವೆ’ ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯದ ಮೇಲ್ವಿಚಾರಣೆ ಹೊಂದಿರುವ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಮಾಹಿತಿ ನೀಡಿದರು.

‘ಈ ಮೇಲ್ಸೇತುವೆ ಕಾಮಗಾರಿ ನಿರ್ಮಿಸುವುದರಿಂದ ಇಲ್ಲಿ ಸೃಷ್ಟಿಯಾಗುತ್ತಿದ್ದ ವಾಹನದಟ್ಟಣೆಗೆ ಪರಿಹಾರ ಸಿಗುತ್ತದೆ. ಆದರೆ, ಜ್ಞಾನಭಾರತಿ ದ್ವಾರದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗುತ್ತದೆ. ಇದರ ಬಗ್ಗೆ ಯಾರೂ ಯೋಚಿಸಿಲ್ಲ’ ಎಂದು ಆರ್.ಆರ್. ನಗರದ ಜಗದೀಶ್ ದೂರಿದರು.

‘ಕಾಮಗಾರಿ ನಡೆಸುವ ಸಂದರ್ಭದಲ್ಲಿ ಸಂಚಾರಕ್ಕೆ ತೊಂದರೆಯಾಗದಂತೆ ರಸ್ತೆಗಳನ್ನು ನಿರ್ವಹಣೆ ಮಾಡಬೇಕು’ ಎಂದು ಪ್ರಸಾದ್ ಆಗ್ರಹಿಸಿದರು.



ಆರೋಗ್ಯ ಇಲಾಖೆ ನೌಕರರ ಮುಷ್ಕರಕ್ಕೆ ತಾತ್ಕಾಲಿಕ ತಡೆ

ಬೆಂಗಳೂರು: ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಸೋಮವಾರದಿಂದ ಕೈಗೊಳ್ಳಬೇಕಾಗಿದ್ದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ತಾತ್ಕಾಲಿಕ ತಡೆ ನೀಡಲಾಗಿದೆ.

ನೌಕರರ ವಿವಿಧ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸಭೆ ನಡೆಸುವ ಭರವಸೆ ನೀಡಿದ್ದಾರೆ. ಆದ್ದರಿಂದ ನೌಕರರು ಮುಷ್ಕರದಿಂದ ಹಿಂದೆ ಸರಿದಿದ್ದಾರೆ.

ವೇತನ ಹೆಚ್ಚಳ, ಸೇವಾ ಭದ್ರತೆ, ಜೀವ ವಿಮೆ ಸೇರಿ ವಿವಿಧ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕು ಎಂದು ಆಗ್ರಹಿಸಿದ್ದ ನೌಕರರು, ಸೆ.19 ರಿಂದ ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳುವುದಾಗಿ ಘೋಷಿಸಿದ್ದರು. ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘ ಮುಷ್ಕರದ ನೇತೃತ್ವ ವಹಿಸಿತ್ತು.

‘ಭಾನುವಾರ ಡಾ.ಕೆ. ಸುಧಾಕರ್ ಅವರು ಸಂಘದ ಗೌರವಾಧ್ಯಕ್ಷ ಆಯನೂರು ಮಂಜುನಾಥ್ ಅವರಿಗೆ ಕರೆ ಮಾಡಿ, ಬೇಡಿಕೆ ಸಂಬಂಧ ಸಭೆ ನಡೆಸುವ ಭರವಸೆ ನೀಡಿದ್ದಾರೆ. ಸಿ.ಎಂ, ಸಚಿವರ ಜೊತೆ ಸೋಮವಾರ ಚರ್ಚಿಸಲಿದ್ದು, ಬೇಡಿಕೆ ಈಡೇರಿಸದಿದ್ದಲ್ಲಿ ಅಧಿವೇಶನದಲ್ಲಿ ಅನಿರ್ದಿಷ್ಟ ಮುಷ್ಕರ ನಡೆಸಲಿದ್ದೇವೆ’ ಎಂದು ಸಂಘದ ಅಧ್ಯಕ್ಷ ವಿಶ್ವಾರಾಧ್ಯ ಎಚ್. ಯಾಮೋಜಿ ತಿಳಿಸಿದ್ದಾರೆ.

ಬಾಗೇಪಲ್ಲಿಯಲ್ಲಿ ಸಿಪಿಎಂ ಸಮಾವೇಶ: ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಪಿಣರಾಯಿ ವಾಗ್ದಾಳಿ

‘ಕೋಮುವಾದ ಆದರ್ಶವಾಗಿಸಲು ಯತ್ನ’

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ (ಚಿಕ್ಕಬಳ್ಳಾಪುರ): ಎತ್ತ ನೋಡಿದರೂ ಕೆಂಬಾವುಟಗಳು. ಒಂದು ಕಿಲೋ ಮೀಟರ್ ಉದ್ದಕ್ಕೂ ಕಿಕ್ಕಿರಿದು ಸೇರಿದ್ದ ಕಾರ್ಯಕರ್ತರ ರ್‍ಯಾಲಿ. ಮೊಳಗಿದ ತಮಟೆಯ ಸದ್ದು, ಕ್ರಾಂತಿ ಗೀತೆಗಳು, ಪಕ್ಷದ ಪರ ಘೋಷಣೆಗಳು. ಎಲ್ಲಿ ನೋಡಿದರೂ ಕೆಂಪುವಸ್ತ್ರಧಾರಿಗಳು..

ಇದು ಪಟ್ಟಣದಲ್ಲಿ ಭಾನುವಾರ ನಡೆದ ಸಿಪಿಎಂ ರಾಜಕೀಯ ಸಮಾವೇಶದ ಚಿತ್ರಣ. ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ಸಿಪಿಎಂ ಕಾರ್ಯಕರ್ತರು ಮತ್ತು ಮುಖಂಡರು ಸಮಾವೇಶಕ್ಕೆ ಸಾಕ್ಷಿಯಾದರು. ಸಮಾವೇಶದ ಮುಖ್ಯಭಾಷಣಕಾರ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಮುಖ್ಯದ್ವಾರದಿಂದ ವೇದಿಕೆಗೆ ಬರುವಾಗ ಕಾರ್ಯಕರ್ತರು ಎದ್ದು ನಿಂತು ಮೊಳಗಿಸಿದ ‘ಲಾಲ್ ಸಲಾಂ’, ‘ಇಂಕ್ವಿಲಾಬ್ ಜಿಂದಾಬಾದ್’ ಘೋಷಣೆಗಳು ಸಭಾಂಗಣದಲ್ಲಿ ಮಾರ್ದನಿಸಿದವು. ಒಂದೂಕಾಲು ಗಂಟೆ ಭಾಷಣದಲ್ಲಿ ಪಿಣರಾಯಿ ಅವರು ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಕರ್ನಾಟಕ ಕೋಮುವಾದದ ಪ್ರಯೋಗ ಶಾಲೆ: ‘ಆರ್‌ಎಸ್‌ಎಸ್ ಮತ್ತು ಬಿಜೆಪಿ ಕೋಮುವಾದವನ್ನು ಭಾರತದ ಅಧಿಕೃತ ಆದರ್ಶವನ್ನಾಗಿಸಲು ಯತ್ನಿಸುತ್ತಿವೆ. ಕೋಮುವಾದಿ ವಿ.ಡಿ.ಸಾವರ್ಕರ್ ವಿಚಾರಗಳನ್ನು ದೇಶದಾದ್ಯಂತ ಪಸರಿಸಲು ಪ್ರಯತ್ನಿಸಲಾಗುತ್ತಿದೆ’ ಎಂದು ಪಿಣರಾಯಿ ದೂರಿದರು.

ಬಾಗೇಪಲ್ಲಿಯಲ್ಲಿ ಭಾನುವಾರ ನಡೆದ ಸಿಪಿಎಂ ರಾಜಕೀಯ ಸಮಾವೇಶದಲ್ಲಿ ಸೇರಿದ್ದ ಪಕ್ಷದ ಕಾರ್ಯಕರ್ತರು

> **ಸೈದ್ಧಾಂತಿಕವಾಗಿ ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ಹೋರಾಡುವ ಶಕ್ತಿಯನ್ನು ಕಾಂಗ್ರೆಸ್ ಕಳೆದುಕೊಂಡಿದೆ**
> **ಪಿಣರಾಯಿ ವಿಜಯನ್**
> ಕೇರಳ ಮುಖ್ಯಮಂತ್ರಿ

‘ಪ್ರಮಾಣಪತ್ರ; ಅಧಿಕಾರ ನೀಡಿದವರು ಯಾರು’

ರಾಷ್ಟ್ರೀಯತೆ ಎಂದರೆ ಹಿಂದುತ್ವ ಎನ್ನುವ ರೀತಿಯಲ್ಲಿ ಆರ್‌ಎಸ್‌ಎಸ್ ಪ್ರಚಾರ ಮಾಡುತ್ತಿದೆ. ಹಿಂದೂಗಳಲ್ಲದವರ ರಾಷ್ಟ್ರಪ್ರೇಮವನ್ನು ಸಂಶಯದಿಂದ ನೋಡಲಾಗುತ್ತಿದೆ ಎಂದು ಪಿಣರಾಯಿ ಆತಂಕ ವ್ಯಕ್ತಪಡಿಸಿದರು.

‘ರಾಷ್ಟ್ರೀಯತೆಯ ಪ್ರಮಾಣ ಪತ್ರ ನೀಡುವ ಅಧಿಕಾರವು ಕೆಲವರಿಗೆ ಮಾತ್ರ ಸೀಮಿತವಾಗಿದೆ. ರಾಷ್ಟ್ರೀಯತೆಯ ಪ್ರಮಾಣ ಪತ್ರ ನೀಡಲು ಇವರಿಗೆ ಅಧಿಕಾರ ನೀಡಿದವರು ಯಾರು’ ಎಂದು ಪ್ರಶ್ನಿಸಿದರು.

‘ಸಮಾನತೆ, ಜಾತ್ಯತೀತತೆ, ಪ್ರಗತಿಪರ ಚಳವಳಿಗಳಿಗೆ ಕರ್ನಾಟಕದಲ್ಲಿ ದೊಡ್ಡ ಪರಂಪರೆ ಇದೆ. ಅಂತಹ ಪರಂಪರೆಯನ್ನು ಅಳಿಸಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಪ್ರಯತ್ನಿಸುತ್ತಿವೆ. ಉತ್ತರ ಭಾರತದ ರಾಜ್ಯಗಳ ರೀತಿ ಕರ್ನಾಟಕವನ್ನು ಕೋಮುವಾದದ ಪ್ರಯೋಗ ಶಾಲೆಯನ್ನಾಗಿಸಲಾಗುತ್ತಿದೆ’ ಎಂದು ಆರೋಪಿಸಿದರು.

‘ಸಾಹಿತಿ ಎಂ.ಎಂ.ಕಲಬುರ್ಗಿ, ಪತ್ರಕರ್ತೆ ಗೌರಿ ಲಂಕೇಶ್ ಅವರು ಯಾರ ವಿರುದ್ಧ ಹೋರಾಡಿ ಮೃತಪಟ್ಟರು ಎನ್ನುವುದನ್ನು ಮರೆಯಬಾರದು. ಮಂಗಳೂರಿನ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗ ಕೊಲೆ ಹಿಂದೆ ಸಂಘ ಪರಿವಾರವಿದೆ. ಚಿಂತಕ ಕೆ.ಎಸ್. ಭಗವಾನ್ ಅವರು ನಿರಂತರವಾಗಿ ಸಂಘ ಪರಿವಾರದ ಬೆದರಿಕೆ ಎದುರಿಸುತ್ತಿದ್ದಾರೆ’ ಎಂದು ಹೇಳಿದರು.

ಅಲ್ಪಸಂಖ್ಯಾತರನ್ನು ಭಾರತದಲ್ಲಿ ಎರಡನೇ ದರ್ಜೆಯ ಪ್ರಜೆಗಳು ಎನ್ನುವ ರೀತಿ ಬಿಂಬಿಸಲು ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ. ಬಹುಸಂಖ್ಯಾತರ ಕೋಮುವಾದವನ್ನು ಅಲ್ಪಸಂಖ್ಯಾತರ ಕೋಮುವಾದದ ಮೂಲಕ ಮಣಿಸಲು ಸಾಧ್ಯವಿಲ್ಲ. ಕೋಮುವಾದಿ ಶಕ್ತಿಗಳನ್ನು ಕೋಮುವಾದದ ಮೂಲಕವೇ ಎದುರಿಸಲು ಮುಂದಾದರೆ ಮತ್ತಷ್ಟು ವಿಭಜನೆ ಆಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಎಸ್‌ಡಿಪಿಐ, ಪಿಎಫ್‌ಐ, ಜಮಾತೆ ಇಸ್ಲಾಂ ಸಂಘಟನೆಗಳ ಚಟುವಟಿಕೆಗಳು ಆರ್‌ಎಸ್‌ಎಸ್‌ನ ಕೋಮುವಾದದ ಬೆಂಕಿಗೆ ಮದ್ಯವನ್ನು ಸುರಿಯುವಂತೆ ಆಗುತ್ತಿದೆ.ಅಲ್ಪಸಂಖ್ಯಾತರ ಹಿತ ಕಾಪಾಡಬೇಕಾದರೆ ಎಡಪಕ್ಷಗಳನ್ನು ಬೆಳೆಸಬೇಕು ಎಂದು ಅವರು ಹೇಳಿದರು.

ಸುದ್ದಿ 2 ನಿಮಿಷ

ಬೊಗಳಿದ ನಾಯಿಗೆ ಗುಂಡು

ದೊಡ್ಡಬಳ್ಳಾಪುರ: ತಾಲ್ಲೂಕಿನ ಮಾದಗೊಂಡನಹಳ್ಳಿಯಲ್ಲಿ ಶನಿವಾರ ವ್ಯಕ್ತಿಯೊಬ್ಬ ತನ್ನನ್ನು ನೋಡಿ ಬೊಗಳಿದ ನಾಯಿಯನ್ನು ಏರ್‌ಗನ್‌ನಿಂದ ಶೂಟ್ ಮಾಡಿ ಸಾಯಿಸಿದ್ದಾನೆ.

ಮಾದಗೊಂಡನಹಳ್ಳಿಯ ಕೃಷ್ಣಪ್ಪ ಎಂಬ ವ್ಯಕ್ತಿ ಹರೀಶ್ ಎಂಬುವರ ಸಾಕುನಾಯಿ ‘ರಾಕಿ’ ತನ್ನನ್ನು ನೋಡಿ ಬೊಗಳಿತು ಎಂದು ಕೋಪಗೊಂಡು ಶೂಟ್ ಮಾಡಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಗುಂಡಿನ ಶಬ್ದದಿಂದ ತಪ್ಪಿಸಿಕೊಂಡು ಓಡಿಹೋದ ನಾಯಿಯನ್ನು ರಾಗಿಯ ಹೊಲದಲ್ಲಿ ಅಟ್ಟಾಡಿಸಿಕೊಂಡು ಕೃಷ್ಣಪ್ಪ ಶೂಟ್ ಮಾಡಿದ್ದಾರೆ. ಏಳೆಂಟು ಗುಂಡು ತಿಂದ ಐದು ವರ್ಷದ ರಾಕಿ ಸಾವನ್ನಪ್ಪಿದೆ’ ಎಂದು ನಾಯಿಯ ಮಾಲೀಕ ಹರೀಶ್ ದೂರಿನಲ್ಲಿ ತಿಳಿಸಿದ್ದಾರೆ.

‘ಈ ನಾಯಿ ನನ್ನ ಮಗನನ್ನು ಕಚ್ಚಿದೆ, ಅದಕ್ಕೆ ಕೊಂದಿದ್ದೇನೆ. ಬೇಕಿದ್ದರೆ ಕಾನೂನು ಕ್ರಮ ಕೈಗೊಳ್ಳಿ ಎಂದು ಕೃಷ್ಣಪ್ಪ ಸವಾಲು ಹಾಕಿದ್ದಾರೆ’ ಎಂದು ಹರೀಶ್ ಹೇಳಿದ್ದಾರೆ.

ಸಿ.ಎಂ ಮನೆ ಮುಂದೆ ಧರಣಿ ನಾಳೆ: ಕೂಡಲಸಂಗಮಶ್ರೀ

ಶಿಗ್ಗಾವಿ (ಹಾವೇರಿ ಜಿಲ್ಲೆ): ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಶಿಗ್ಗಾವಿ ಪಟ್ಟಣದಲ್ಲಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮನೆ ಮುಂದೆ ಇದೇ 20ರಂದು ಧರಣಿ ನಡೆಸಲಾಗುತ್ತಿದ್ದು, ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ಪಂಚಮಸಾಲಿ ಸಮಾಜದ ಮುಖಂಡರು ಭಾನುವಾರ ಸ್ಥಳ ಪರಿಶೀಲನೆ ನಡೆಸಿದರು.

‘ಮೀಸಲಾತಿಗೆ ಒತ್ತಾಯಿಸಿ ಎರಡು ವರ್ಷಗಳಿಂದ ಸತತವಾಗಿ ಪಾದಯಾತ್ರೆ, ಧರಣಿ ನಡೆಸಲಾಗಿದ್ದು, ಅದಕ್ಕೆ ಸರ್ಕಾರ ಸರಿಯಾಗಿ ಸ್ಪಂದಿಸಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುಮಾರು ನಾಲ್ಕು ಬಾರಿ ಮಾತು ಕೊಟ್ಟಿದ್ದು, ಕೊಟ್ಟ ಮಾತನ್ನು ನಡೆಸಿಕೊಡದ ಕಾರಣ ಮಂಗಳವಾರ ಅವರ ಮನೆ ಮುಂದೆ ಧರಣಿ ಹಮ್ಮಿಕೊಳ್ಳಲಾಗಿದೆ’ ಎಂದು ಸ್ವಾಮೀಜಿ ತಿಳಿಸಿದರು.

‘ಧರಣಿ ಯಶಸ್ವಿಗೊಳಿಸುವಂತೆ ರಾಜ್ಯವ್ಯಾಪಿ ಸಂಚರಿಸಿ ಸಂಘಟನೆ ಮಾಡಲಾಗಿದೆ. ರಾಜ್ಯದ ವಿವಿಧೆಡೆಗಳಿಂದ ಸುಮಾರು 50 ಸಾವಿರದಿಂದ ಒಂದು ಲಕ್ಷದವರೆಗೆ ಜನ ಸೇರುವ ನಿರೀಕ್ಷೆಯಿದೆ. ಅಲ್ಲದೆ ಶಿಗ್ಗಾವಿ, ಸವಣೂರ ತಾಲ್ಲೂಕಿನ ಗ್ರಾಮಸ್ಥರು ರೊಟ್ಟಿಬುತ್ತಿಯೊಂದಿಗೆ ಟ್ರ್ಯಾಕ್ಟರ್, ಚಕ್ಕಡಿಬಂಡಿಗಳನ್ನು ಕಟ್ಟಿಕೊಂಡು ಬರಲಿದ್ದಾರೆ. ಬೆಳಿಗ್ಗೆ 9 ಗಂಟೆಗೆ ಪಟ್ಟಣದ ಕಿತ್ತೂರ ರಾಣಿ ಚನ್ನಮ್ಮ ಮೂರ್ತಿಗೆ ಮಾಲಾರ್ಪಣೆ ಮಾಡಿ ಪಾದಯಾತ್ರೆ ಮೂಲಕ ಧರಣಿ ನಡೆಸಲಾಗುತ್ತಿದೆ’ ಎಂದರು.

‘ಕೂಡಲ ಸಂಗಮ ಶ್ರೀಗಳಿಂದ ಸಿ.ಎಂ ಟಾರ್ಗೆಟ್’

ಗದಗ: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕೂಡಲಸಂಗಮದ ಜಯಮೃತ್ಯುಂಜಯ ಸ್ವಾಮೀಜಿ ಏಕೆ ಟಾರ್ಗೆಟ್ ಮಾಡುತ್ತಿದ್ದಾರೆ? ಎಂಬುದು ತಿಳಿಯುತ್ತಿಲ್ಲ. ಇದು ನನಗೆ ಮಿಲಿಯನ್ ಡಾಲರ್ ಪ್ರಶ್ನೆಯಂತೆ ಕಾಡುತ್ತಿದೆ’ ಎಂದು ಸಚಿವ ಸಿ.ಸಿ. ಪಾಟೀಲ ಹೇಳಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ದಿಢೀರ್ ಅಂತ ಘೋಷಿಸಲು ಸಾಧ್ಯವಿಲ್ಲ. ಮುಖ್ಯಮಂತ್ರಿಯಾಗಿ ಎಲ್ಲರ ಬೇಡಿಕೆ ಕೇಳಬೇಕಿದೆ ಒಬ್ಬಿಬ್ಬರ ಮಾತು ಕೇಳಿಕೊಂಡು ಪ್ರತಿಭಟನೆ ಮಾಡುವುದು ಸರಿಯಲ್ಲ’ ಎಂದು ಹೇಳಿದರು

ನವೆಂಬರ್‌ಗೆ ಸಿದ್ದರಾಮಯ್ಯ ‘ಚುನಾವಣಾ ಯಾತ್ರೆ’

ಸಿದ್ಧವಾಗುತ್ತಿದೆ ವಿಶೇಷ ವಿನ್ಯಾಸದ ಹೈಟೆಕ್ ಬಸ್ • ನಿತ್ಯ ಎರಡು ಕ್ಷೇತ್ರಗಳಲ್ಲಿ ಪ್ರವಾಸ ಸಂಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಹುಲ್ ಗಾಂಧಿ ನೇತೃತ್ವದ ‘ಭಾರತ ಒಗ್ಗೂಡಿಸಿ’ (ಭಾರತ್ ಜೋಡೊ) ಪಾದಯಾತ್ರೆ ರಾಜ್ಯದಿಂದ ನಿರ್ಗಮಿಸಿದ ಬಳಿಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ರಾಜ್ಯದಾದ್ಯಂತ ಚುನಾವಣಾ ‘ಯಾತ್ರೆ’ಗೆ ಸದ್ದಿಲ್ಲದೆ ಸಿದ್ಧತೆಗಳು ನಡೆದಿವೆ.

ಯಾತ್ರೆಗೆಂದೇ ವಿಶೇಷ ವಿನ್ಯಾಸದ ಹೈಟೆಕ್ ಬಸ್ ಸಿದ್ಧಪಡಿಸಲಾಗುತ್ತಿದೆ. ನವೆಂಬರ್ ಮೊದಲ ವಾರ ಯಾತ್ರೆ ಆರಂಭವಾಗಲಿದೆ. ನಿತ್ಯ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಯಾತ್ರೆ ಸಾಗುವ ಸಂಭವವಿದೆ ಎಂದು ಸಿದ್ದರಾಮಯ್ಯ ಅವರ ಆಪ್ತ ಮೂಲಗಳು ತಿಳಿಸಿವೆ.

ರಾಜ್ಯ ಎಲ್ಲ 224 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪರ ಜನಾಭಿಪ್ರಾಯ ಮೂಡಿಸಲು ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸುತ್ತಾಡುವಂತೆ ಹಾಲಿ– ಮಾಜಿ ಶಾಸಕರು ಒತ್ತಾಯಿಸುತ್ತಿದ್ದಾರೆ.

ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕವೆಂದು ಕ್ಷೇತ್ರಗಳನ್ನು ವಿಂಗಡಿಸಿ, ಇಬ್ಬರು ನಾಯಕರೂ ಯಾತ್ರೆ ನಡೆಸುವ ಬಗ್ಗೆ ಚರ್ಚೆ ನಡೆದಿದ್ದು, ಪೂರಕವಾಗಿ ಸಿದ್ದರಾಮಯ್ಯ ಯಾತ್ರೆಗೆ ಭರದ ತಯಾರಿ ಆರಂಭಿಸಲಾಗಿದೆ.

ಇತ್ತೀಚೆಗೆ ದಾವಣಗೆರೆಯಲ್ಲಿ ನಡೆದ ಸಿದ್ದರಾಮಯ್ಯ ಜನ್ಮದಿನ ನಿಮಿತ್ತದ ಅಮೃತ ಮಹೋತ್ಸವಕ್ಕೆ ಬಂದ ಜನಸಾಗರದಿಂದ ಕಾಂಗ್ರೆಸ್ ವಲಯದಲ್ಲಿ ಹೊಸ ಹುರುಪು ಕಾಣಿಸಿದೆ. ರಾಜ್ಯ ಸರ್ಕಾರದ ವಿರುದ್ಧ ಭ್ರಷ್ಟಾಚಾರ, ನೇಮಕಾತಿ ಹಗರಣಗಳು, ಬೆಲೆ ಏರಿಕೆ ಮತ್ತಿತರ ‘ಅಸ್ತ್ರ’ ಪ್ರಯೋಗಿಸಿ ಜನಬೆಂಬಲ ಪಡೆಯಲು ‘ಕೈ’ ನಾಯಕರು, ಮುಂದೆ ವಿವಿಧ ಕಾರ್ಯಕ್ರಮಗಳ ಮೂಲಕ ಜನರ ಬಳಿಗೆ ಹೋಗಲು ನಿರ್ಧರಿಸಿದ್ದಾರೆ.

‘ಸಿದ್ದರಾಮಯ್ಯ ಅವರು ಹುಟ್ಟುಹಬ್ಬ ಆಯೋಜಿಸಿದ್ದ ಅವರ ಬೆಂಬಲಿಗ ಶಾಸಕರು, ಮಾಜಿ ಶಾಸಕರು, ಇದೀಗ ಅವರ ಚುನಾವಣಾ ಯಾತ್ರೆಗೂ ಸಿದ್ಧತೆ ಮಾಡುತ್ತಿದ್ದಾರೆ. ಇದಕ್ಕಾಗಿ ವಿಶೇಷ ಬಸ್ ಸಿದ್ಧವಾಗುತ್ತಿದೆ. ಭಾಷಣಕ್ಕೆ ವೇದಿಕೆಯಾಗಿ ಬಳಸಲು ಆಗುವಂತೆ ರೂಪಿಸುತ್ತಿದ್ದು, ವಾಹನದಲ್ಲಿ ಸುಸಜ್ಜಿತ ಕೋಣೆ, ಶೌಚಾಲಯ, ಸಭೆಗೆ ನಡೆಸಲು ಆಗುವಂತೆ ವ್ಯವಸ್ಥೆ ಇರಲಿದೆ’ ಎಂದೂ ಮೂಲಗಳು ತಿಳಿಸಿವೆ.

ಯಾತ್ರೆಗೆ ಸಿದ್ಧವಾಗುತ್ತಿರುವ ಹೈಟೆಕ್ ಬಸ್

‘ಟಿಕೆಟ್ ಹಂಚಿಕೆ ಗೌಪ್ಯವಾಗಿ ನಡೆಯದು’

‘ಪಕ್ಷದಲ್ಲಿ ಟಿಕೆಟ್ ಹಂಚಿಕೆ ಗೌಪ್ಯವಾಗಿ ನಡೆಯದು. ಚುನಾವಣಾ ಸಮಿತಿಯಲ್ಲಿ ಅಭಿಪ್ರಾಯ ಸಂಗ್ರಹಿಸಿ, ಬಳಿಕ ಹೆಸರುಗಳನ್ನು ಹೈಕಮಾಂಡ್‌ಗೆ ಶಿಫಾರಸು ಮಾಡಲಾಗುತ್ತದೆ, ಶಾಸಕಾಂಗ ಪಕ್ಷದ ನಾಯಕರು, ಕೆಪಿಸಿಸಿ ಅಧ್ಯಕ್ಷರು, ಪ್ರಮುಖ ನಾಯಕರ ಜೊತೆ ಚರ್ಚಿಸಿಯೇ ಹೈಕ ಮಾಂಡ್ ಟಿಕೆಟ್ ಘೋಷಿಸುತ್ತದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದರು.

‘ಹೈಕಮಾಂಡ್ ತೀರ್ಮಾನ’

ಬೆಂಗಳೂರು: ‘ಕೆಪಿಸಿಸಿ ಅಧ್ಯಕ್ಷ ಮತ್ತು ಶಾಸಕಾಂಗ ಪಕ್ಷದ ನಾಯಕನ ಜೊತೆ ಚರ್ಚಿಸಿ ಹೈಕಮಾಂಡ್ ಟಿಕೆಟ್ ಹಂಚಿಕೆ ಅಂತಿಮಗೊಳಿಸಲಿದೆ’ ಎಂದು ಕೆಪಿಸಿಸಿ ಮಾಜಿ ಅಧ್ಯಕ್ಷ ಆರ್.ವಿ.ದೇಶಪಾಂಡೆ ಹೇಳಿದರೆ, ‘ಯಾರೂ ಒಬ್ಬರು ಟಿಕೆಟ್ ಹಂಚಿಕೆ ನಿರ್ಧರಿಸಲಾಗದು’ ಎಂದೂ ಮತ್ತೊಬ್ಬ ಮಾಜಿ ಅಧ್ಯಕ್ಷ ದಿನೇಶ್ ಗುಂಡೂರಾವ್ ಪ್ರತಿಕ್ರಿಯಿಸಿದ್ದಾರೆ.

ಪಕ್ಷದ ಟಿಕೆಟ್ ಹಂಚಿಕೆ ವಿಚಾರ ಕುರಿತು ಇತ್ತೀಚೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೀಡಿದ್ದ ಹೇಳಿಕೆ ಕಾಂಗ್ರೆಸ್ ವಲಯದಲ್ಲಿ ಇದೀಗ ಚರ್ಚೆಗೆ ವಸ್ತುವಾಗಿದೆ.

ಸುದ್ದಿಗಾರರ ಜೊತೆ ಮಾತನಾಡಿದ ದೇಶಪಾಂಡೆ, ‘ಟಿಕೆಟ್ ಹಂಚಿಕೆಗೂ ಮೊದಲು ಅಧ್ಯಕ್ಷರು, ಸಿಎಲ್‌ಪಿ ನಾಯಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ’ ಎಂದರು.

ದಿನೇಶ್ ಗುಂಡೂರಾವ್ ಅವರು, ‘ಟಿಕೆಟ್ ಕುರಿತು ಚುನಾವಣೆ ಸಮಿತಿ, ಪರಿಶೀಲನಾ ಸಮಿತಿಗಳಿವೆ. ಎಲ್ಲರ ಅಭಿಪ್ರಾಯ ಪಡೆಯಬೇಕಾಗುತ್ತದೆ. ಸ್ಥಳೀಯವಾಗಿಯೂ ಮಾಹಿತಿ ಪಡೆಯಬೇಕಾಗುತ್ತದೆ. ಬಳಿಕವಷ್ಟೇ ಟಿಕೆಟ್ ಅಂತಿಮ ಆಗಲಿದೆ’ ಎಂದರು.

‘ಭಾರತ್ ಜೋಡೊದಿಂದ ಲಾಭ’

ಮೈಸೂರು: ‘ಪಕ್ಷದ ನಾಯಕ ರಾಹುಲ್ ಗಾಂಧಿ ನಡೆಸುತ್ತಿರುವ ‘ಭಾರತ್ ಜೋಡೊ’ ಯಾತ್ರೆಯನ್ನು ಯಶಸ್ವಿಗೊಳಿಸುವುದರಿಂದ ವಿಧಾನಸಭೆ ಚುನಾವಣೆಯಲ್ಲಿ ಖಂಡಿತವಾಗಿಯೂ ರಾಜಕೀಯವಾಗಿ ಲಾಭವಾಗುತ್ತದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ಕಾಂಗ್ರೆಸ್ ಭವನದ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ‘ಭಾರತ ಜೋಡೊ’ ಪಾದಯಾತ್ರೆ ಪೂರ್ವ ಸಿದ್ಧತೆ ಮತ್ತು ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

‘ಶಾಸಕರು, ಮಾಜಿ ಶಾಸಕರು ಹಾಗೂ ನಾಯಕರು ಹೆಚ್ಚು ಜನರು ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು. ರಾಹುಲ್ ಗಾಂಧಿಗೆ ಶಕ್ತಿ ತುಂಬಬೇಕು’ ಎಂದು ಕೋರಿದರು.

ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, ‘ಬಿಜೆಪಿಯವರು ಲಜ್ಜೆಗೆಟ್ಟವರು. ರಾಜ್ಯ ಸರ್ಕಾರದಲ್ಲಷ್ಟೆ ಅಲ್ಲ, ಕೇಂದ್ರದಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ತಿನ್ನುವುದಿಲ್ಲ; ತಿನ್ನಲು ಬಿಡುವುದಿಲ್ಲ ಎನ್ನುವ ಮೋದಿ ರಾಜ್ಯ ಸರ್ಕಾರದ ಮೇಲೆ ಗುತ್ತಿಗೆದಾರರ ಸಂಘದವರು ಕೊಟ್ಟಿರುವ ಶೇ 40ರಷ್ಟು ಕಮಿಷನ್ ದೂರನ್ನು ಪರಿಗಣಿಸಲೇ ಇಲ್ಲ. ಚೌಕಿದಾರ ಎನ್ನುತ್ತಿರಲ್ಲಾ, ಅದೆಲ್ಲಿ ಕಾವಲುಗಾರನ ಕೆಲಸ ಮಾಡುತ್ತಿದ್ದೀರಿ ಮೋದಿ?’ ಎಂದು ವ್ಯಂಗ್ಯವಾಗಿ ಕೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ‘ರಾಹುಲ್ ಜೊತೆ ನಡೆಯುವ ಅವಕಾಶವನ್ನು ಮೈಸೂರಿನವರು ಕಳೆದುಕೊಳ್ಳಬಾರದು. ರಾಜಕೀಯದಲ್ಲಿ ಯಾರೂ ಶತ್ರುಗಳಲ್ಲ; ಯಾರೂ ಮಿತ್ರರಲ್ಲ. ವಿಧಾನಪರಿಷತ್ ಚುನಾವಣೆಯಲ್ಲಿ ಯುವ ಜನರು ಬೆಂಬಲಿಸಲಿಲ್ಲವೇ? ಇದನ್ನು ಬಳಸಿಕೊಳ್ಳಬೇಕು. ಇಲ್ಲಿ ನಡೆಯುವ ಯಾತ್ರೆಯಲ್ಲಿ ಪಕ್ಷದ ದೊಡ್ಡ ನಾಯಕಿ ಭಾಗವಹಿಸಲಿದ್ದಾರೆ’ ಎಂದರು.

ತಪಾಸಣೆಗೆ ಒಳಗಾದ ಡಿಕೆಶಿ: ಸಭೆಯ ನಡುವೆಯೇ ಶಿವಕುಮಾರ್ ಆರೋಗ್ಯ ತಪಾಸ ಣೆಗೆ ಒಳಗಾದರು. ದೇಹದ ತಾಪಮಾನ ಹಾಗೂ ರಕ್ತದೊತ್ತಡ ಪ್ರಮಾಣವನ್ನು ವೈದ್ಯರು ಪರೀಕ್ಷಿಸಿದರು. ‘ಪಾದಯಾತ್ರೆಯ ಸಿದ್ಧತೆಯಲ್ಲಿದ್ದೇನೆ. ಸುಸ್ತಾಗಿದ್ದೇನೆ. ಊರು ಬಿಟ್ಟು 11 ದಿನಗಳಾಗಿವೆ. ವಿಧಾನಮಂಡಲ ಅಧಿವೇಶನಕ್ಕೆ ಹೋಗಲಾಗಿಲ್ಲ. ಸಿದ್ದರಾಮಯ್ಯ ಅಲ್ಲಿ ಭಾಗವಹಿಸುತ್ತಿದ್ದಾರೆ’ ಎಂದು ತಿಳಿಸಿದರು.

ಹೊರಟ್ಟಿಗೆ ಕೈಕೊಟ್ಟ ಬಿಜೆಪಿ?

ವಿಧಾನ ಪರಿಷತ್ ಸಭಾಪತಿ ಸ್ಥಾನ ಚುನಾವಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ



ಬಸವರಾಜ ಹೊರಟ್ಟಿ

ಬೆಂಗಳೂರು: ಜೆಡಿಎಸ್ ತ್ಯಜಿಸಿ ಬಂದರೆಮತ್ತೆ ವಿಧಾನ ಪರಿಷತ್ ಸಭಾಪತಿ ಪಟ್ಟ ನೀಡುವುದಾಗಿ ಬಸವರಾಜ ಹೊರಟ್ಟಿ ಅವರಿಗೆ ಭರವಸೆ ನೀಡಿದ್ದ ಬಿಜೆಪಿ, ಇದೀಗ ತನ್ನ ವಾಗ್ದಾನದಿಂದ ಹಿಂದಕ್ಕೆ ಸರಿದಿದೆ.

ಇದೇ 21ರಂದು ನಡೆಯಬೇಕಿದ್ದ ಸಭಾಪತಿ ಚುನಾವಣೆಯನ್ನು ಮುಂದೂಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೂಚಿಸಿದ್ದಾರೆಂದು ಗೊತ್ತಾಗಿದೆ.

ಚುನಾವಣೆ ನಡೆಸಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿತ್ತು. ನಾಮಪತ್ರ ಸಲ್ಲಿಸಲು ಸಿದ್ಧತೆಗೂ ಹೊರಟ್ಟಿ ಅವರಿಗೆ ಸೂಚಿಸಲಾಗಿತ್ತು. ಈ ಮಧ್ಯೆಯೇ ಚುನಾವಣೆ ಮುಂದೂಡಿಕೆಯಾಗಿದೆ.

ಚುನಾವಣೆಗೆ ಅಧಿಸೂಚನೆ ಹೊರಡಿಸಲು ರಾಜ್ಯಪಾಲರಿಗೆ ಕಡತ ರವಾನಿಸಬೇಕು ಎನ್ನುವಷ್ಟರಲ್ಲಿ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿಗೆ ಕರೆ ಮಾಡಿದ್ದ ಕಟೀಲ್, ಸಭಾಪತಿ ಆಯ್ಕೆ ಪ್ರಕ್ರಿಯೆ ಮುಂದೂಡಲು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿಗೆ ಸೂಚಿಸಲು ತಿಳಿಸಿದ್ದರು. ಅದರಂತೆ ಕರೆ ಮಾಡಿದಾಗ, ‘ಸಂಪುಟದ ತೀರ್ಮಾನ ಮುಂದೂಡಿಕೆ ಸರಿಯಲ್ಲ’ ಎಂದು ಮಾಧುಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು ಗೊತ್ತಾಗಿದೆ.

‘ಆ ಬಳಿಕ ಸಿ.ಎಂಗೆ ಕಟೀಲ್ ಕರೆ ಮಾಡಿದ್ದಾರೆ. ಅದರಂತೆ, ಮಾಧುಸ್ವಾಮಿಗೆ ಕರೆ ಮಾಡಿದ್ದ ಬೊಮ್ಮಾಯಿ, ಪಕ್ಷದ ಸೂಚನೆಯಂತೆ ಮುಂದೂಡಲು ಸೂಚಿಸಿದರು ಎನ್ನಲಾಗಿದೆ. ಬಿಜೆಪಿಯವರನ್ನೇ ಸಭಾಪತಿ ಮಾಡಲು ಯತ್ನ ನಡೆದಿದೆ. ಅದಕ್ಕೆ ಚುನಾವಣೆ ಮುಂದೂಡಿಕೆಯಾಗಿದೆ’ ಎಂದು ಮೂಲಗಳು ತಿಳಿಸಿವೆ.

> **ಚುನಾವಣೆಗೆ ಮುನ್ನ ಬಿಜೆಪಿಯವರು ಮಾತು ಕೊಟ್ಟಿದ್ದು ನಿಜ. ಮಾತು ಕೊಟ್ಟಂತೆ ನಡೆಯುವುದು, ಬಿಡುವುದು ಅವರಿಗೆ ಬಿಟ್ಟಿದ್ದು.**
> **ಬಸವರಾಜ ಹೊರಟ್ಟಿ**
> ವಿಧಾನ ಪರಿಷತ್ ಸದಸ್ಯ

ಈ ಮಧ್ಯೆ, ಪರಿಷತ್ ಸದಸ್ಯ ವೈ.ಎ.ನಾರಾಯಣಸ್ವಾಮಿ, ಇತರರು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರನ್ನೂ ಭೇಟಿ ಮಾಡಿ ಮೂಲ ಬಿಜೆಪಿಯವರಿಗೇ ಸಭಾಪತಿ ಸ್ಥಾನ ನೀಡುವಂತೆ ಒತ್ತಾಯಿಸಿದರು ಎಂದೂ ಗೊತ್ತಾಗಿದೆ.

ಹೊರಟ್ಟಿಗೆ ಕೆಲವರ ಆಕ್ಷೇಪ

‘ಸಭಾಪತಿ ಸ್ಥಾನಕ್ಕೆ ಪರಿಷತ್ತಿನ ಬಿಜೆಪಿ ಸದಸ್ಯರಲ್ಲಿ ಬಹುತೇಕರು ಹೊರಟ್ಟಿ ಪರ ಒಲವು ವ್ಯಕ್ತಪಡಿಸಿದ್ದಾರೆ. ‘ಮುಂದೆ ಪಕ್ಷ ಅಧಿಕಾರಕ್ಕೆ ಬಾರದಿದ್ದರೆ ಹೊರಟ್ಟಿ ಪಕ್ಷದ ಪರ ಇರುತ್ತಾರೆ ಎನ್ನುವುದಕ್ಕೆ ಏನು ಖಚಿತವಿದೆ’ ಎಂದು ಭಾರತಿ ಶೆಟ್ಟಿ ಪ್ರಶ್ನಿಸಿದರೆ, ಆಯನೂರು ಮಂಜುನಾಥ್, ವೈ.ಎ. ನಾರಾಯಣಸ್ವಾಮಿ ಮತ್ತು ಶಶಿಲ್ ನಮೋಶಿ ತಾವೂ ಆ ಸ್ಥಾನದ ಆಕಾಂಕ್ಷಿಗಳು ಎಂದಿದ್ದಾರೆ’ ಎಂದು ಮೂಲಗಳು ಹೇಳಿವೆ.

ಉಪಸಭಾಪತಿ ಸ್ಥಾನಕ್ಕೆಎಂ. ಕೆ.ಪ್ರಾಣೇಶ್ ಅವರನ್ನು ಆಯ್ಕೆಗೆ ಸಚಿವ ಆರ್. ಅಶೋಕ ಒತ್ತಡ ಹೇರಿದರೆ, ಕೆ.ಎಸ್.ಈಶ್ವರಪ್ಪ ಮತ್ತು ಕೆಲ ಕುರುಬ ನಾಯಕರು ರಘುನಾಥ ರಾವ್ ಮಲ್ಕಾಪುರೆ ಅವರಿಗೆ ನೀಡುವಂತೆ ಆಗ್ರಹಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರೈತರ ಮಕ್ಕಳಿಗಾಗಿ 450 ಹೆಚ್ಚುವರಿ ಸೀಟು

ಧಾರವಾಡ: ‘ಕೃಷಿ ವಿಶ್ವವಿದ್ಯಾಲಯದ ಕೋಟಾದಲ್ಲಿ ಈ ವರ್ಷದಿಂದ ರೈತರ ಮಕ್ಕಳಿಗಾಗಿ 450 ಹೆಚ್ಚುವರಿ ಸೀಟುಗಳನ್ನು ನೀಡಲಾಗುತ್ತಿದೆ’ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ತಿಳಿಸಿದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ಮೇಳವನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದರು.

‘ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದ ನಂತರ ರೈತರ ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ಅನುಕೂಲ ಮಾಡುವ ದೃಷ್ಟಿಯಿಂದ 8ರಿಂದ 10ನೇ ತರಗತಿ ಮಕ್ಕಳಿಗೆ ₹2 ಸಾವಿರ ವಾರ್ಷಿಕವಾಗಿ ನೀಡಲಾಗುತ್ತಿದೆ. ದೇಶದಲ್ಲೇ ಮೊದಲ ಪ್ರಯತ್ನ ಇದಾಗಿರುವುದರಿಂದ 10 ಲಕ್ಷ ಮಕ್ಕಳಿಗೆ ₹469 ಕೋಟಿ ನೀಡಲಾಗಿದೆ’ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.52	17,407	13,243
ಹಾರಂಗಿ	2,859	2,857.81	1,800	1,800
ಕಬಿನಿ	2,284	2,282.82	4,435	1,500
ಹೇಮಾವತಿ	2,922	2,921.88	5,853	4,900
ಲಿಂಗನಮಕ್ಕಿ	1,819	1,816.70	9,347	4422.02
ಸೂಪಾ (ಮೀ)	564	553.75	7,667	507
ಮಾಣಿ	595	587.94	1,565	-
ತುಂಗಭದ್ರಾ	1,633	1,633	24,525	18,338
ಮಲಪ್ರಭಾ	2079.50	2,079.50	1,794	1,794
ಘಟಪ್ರಭಾ	2,175	2,174.50	8,919	8,919
ಭದ್ರಾ	186	184.10	5,962	4,770
ಆಲಮಟ್ಟಿ (ಮೀ)	519.60	519.39	1,30,231	1,20,000
ನಾರಾಯಣಪುರ (ಮೀ)	492.25	491.28	1,35,000	1,28,980

* ನೆಲಮಟ್ಟದಿಂದ

ಅಭಿಮಾನ್‌ನಲ್ಲಿ ‘ಯಜಮಾನೋತ್ಸವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಿತ್ರರಂಗದ ಖ್ಯಾತ ನಟ, ಸಾಹಸಸಿಂಹ ದಿವಂಗತ ವಿಷ್ಣುವರ್ಧನ್ ಅವರ 72ನೇ ಜನ್ಮದಿನಾಚರಣೆಯನ್ನು ಅಭಿಮಾನಿಗಳು ಭಾನುವಾರ ಅದ್ದೂರಿಯಿಂದ ಆಚರಿಸಿದರು.

ವಿಷ್ಣುವರ್ಧನ್ ಅವರ ಸಮಾಧಿಯಿರುವ ಬೆಂಗಳೂರಿನ ಅಭಿಮಾನ್ ಸ್ಟುಡಿಯೊ ಹೊರ ಭಾಗದಲ್ಲಿ ವಿಷ್ಣುವರ್ಧನ್ ಅವರ 51 ಕಟೌಟ್‌ಗಳನ್ನು ನಿಲ್ಲಿಸಿ ವಿಜೃಂಭಣೆಯಿಂದ ನೆಚ್ಚಿನ ದಾದಾನಿಗೆ ಜೈಕಾರ ಹಾಕಿದರು.

ಪುಟ್ಟಣ್ಣ ಕಣಗಾಲ್ ನಿರ್ದೇಶನದ ‘ನಾಗರಹಾವು’ ಸಿನಿಮಾ ಮೂಲಕ ನಾಯಕ ನಟನಾಗಿ ವಿಷ್ಣುವರ್ಧನ್ ಅವರು ಬೆಳ್ಳಿತೆರೆ ಪ್ರವೇಶಿಸಿದ್ದರು. 2022 ಡಿ.29ಕ್ಕೆ ‘ನಾಗರಹಾವು’ ಬಿಡುಗಡೆಯಾಗಿ 50 ವರ್ಷವಾಗಲಿದೆ.

ಈ ಹಿನ್ನೆಲೆಯಲ್ಲಿ ಡಾ.ವಿಷ್ಣು ಸೇನಾ ಸಮಿತಿ ಹಾಗೂ ಹಲವು ಸಂಘ ಸಂಸ್ಥೆಗಳು ಯಜಮಾನೋತ್ಸವಕ್ಕೆ ವಾರದಿಂದಲೇ ಸಿದ್ಧತೆ ಆರಂಭಿಸಿತ್ತು. ನಾಗರಹಾವು, ಯಜಮಾನ, ಸಾಹಸಸಿಂಹ, ಲಯನ್ ಜಗಪತಿ ರಾವ್, ದಿಗ್ಗಜರು, ಕೋಟಿಗೊಬ್ಬ, ಸೇರಿದಂತೆ ಪ್ರಮುಖ ಸಿನಿಮಾಗಳ ವಿಷ್ಣುವರ್ಧನ್ ಲುಕ್‌ಗಳ 51 ಕಟೌಟ್‌ಗಳನ್ನು ಸ್ಟುಡಿಯೊ ಹೊರಭಾಗದಲ್ಲಿ ನಿಲ್ಲಿಸಲಾಗಿದೆ. ಪ್ರತಿ ಕಟೌಟ್ ಸುಮಾರು 38–40 ಅಡಿಯಿದೆ.

‘ಇಲ್ಲಿಯವರೆಗೆ ಭಾರತೀಯ ಚಿತ್ರರಂಗದಲ್ಲಿ ಏಕಸ್ಥಳದಲ್ಲಿ, ಏಕಕಾಲದಲ್ಲಿ ಯಾವುದೇ ಹೀರೊಗೆ ಈ ರೀತಿ ಇಷ್ಟು ಸಂಖ್ಯೆಯಲ್ಲಿ ಕಟೌಟ್‌ಗಳನ್ನು ನಿಲ್ಲಿಸಿಲ್ಲ. ಇದನ್ನು ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸೇರಿಸುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ವಿಷ್ಣುವರ್ಧನ್ ಅವರ ಜನ್ಮದಿನಾಚರಣೆಯನ್ನು ರಾಷ್ಟ್ರೀಯ ಆದರ್ಶ ದಿನವಾಗಿ ಘೋಷಿಸಬೇಕು ಎಂದು ಸರ್ಕಾರಕ್ಕೆ ಮನವಿ ಸಲ್ಲಿಸಿ ವರ್ಷಗಳೇ ಕಳೆದಿದೆ. ಸರ್ಕಾರ ಈ ಕುರಿತು ಶೀಘ್ರದಲ್ಲೇ ನಿರ್ಧಾರ ಕೈಗೊಳ್ಳಬೇಕು’ ಎಂದು ವಿಷ್ಣು ಸೇನಾ ಸಮಿತಿಯ ವೀರಕಪುತ್ರ ಶ್ರೀನಿವಾಸ್ ಹೇಳಿದರು.

30 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಭಾನುವಾರ ಸಮಾಧಿ ಸ್ಥಳಕ್ಕೆ ಭೇಟಿ ನೀಡಿದ್ದರು. ಪೂಜೆ ಸಲ್ಲಿಸಿ, ಕೇಕ್ ಕತ್ತರಿಸಿ ಸಂಭ್ರಮಿಸಿದರು. ಚಿತ್ರರಂಗದ ಪ್ರಮುಖರು ಸಾಮಾಜಿಕ ಮಾಧ್ಯಮಗಳಲ್ಲಿ ವಿಷ್ಣುವರ್ಧನ್ ಅವರನ್ನು ಸ್ಮರಿಸಿದ್ದಾರೆ. ರಕ್ತದಾನ, ಅನ್ನದಾನ, ನೇತ್ರದಾನದ ಪ್ರತಿಜ್ಞೆ ಸೇರಿ ವಿವಿಧ ಕಾರ್ಯಗಳು ನಡೆದವು.

ನಟ, ದಿವಂಗತ ವಿಷ್ಣುವರ್ಧನ್ ಅವರ 72ನೇ ಜನ್ಮದಿನಾಚರಣೆ ಅಂಗವಾಗಿ ಅವರ ಸಮಾಧಿಯಿರುವ ಬೆಂಗಳೂರಿನ ಅಭಿಮಾನ್ ಸ್ಟುಡಿಯೊ ಆವರಣದಲ್ಲಿ ಭಾನುವಾರ ಸೇರಿದ್ದ ಜನಸಾಗರ — ಪ್ರಜಾವಾಣಿ ಚಿತ್ರ

ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್
ISO 9001 COMPANY
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ತುಮಕೂರು ಮುಖ್ಯ ರಸ್ತೆ, ಯಶವಂತಪುರ, ಬೆಂಗಳೂರು–560022.
ಮೊಬೈಲ್ ನಂ: 9591933098
ಸಂ: ಎಂ.ಇ.ಐ/ಪ್ರವ್ಯ/ಉಪ್ರವ್ಯ(ಆ/ಮಾ.ಸಂ)ಪಿ.ಎಫ್‌ಟ್ರಸ್ಟ್/2021–22/220 ದಿನಾಂಕ: 14.09.2022

ಅಂತಿಮ ಸೂಚನೆ

ವಿಷಯ: ಎಂ.ಇ.ಐ ಕಂಪನಿಯಲ್ಲಿ ಹಂಗಾಮಿ ನೌಕರರು ಪಿ.ಎಫ್ ಮೊತ್ತ ಪಡೆಯಲು ಅರ್ಜಿ ಸಲ್ಲಿಸುವ ಬಗ್ಗೆ.

ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್, ತುಮಕೂರು ಮುಖ್ಯ ರಸ್ತೆ, ಯಶವಂತಪುರ, ಬೆಂಗಳೂರು–560022 ಈ ಕಂಪನಿಯಲ್ಲಿ ಈಗಾಗಲೇ ಹಂಗಾಮಿ ನೌಕರರಾಗಿ ಕಾರ್ಯ ನಿರ್ವಹಿಸಿ ಸೇವೆಯಿಂದ ವಿಮುಕ್ತಿಗೊಂಡಿರುವ ಎಲ್ಲಾ ಹಂಗಾಮಿ ನೌಕರರು **ಪಿ.ಎಫ್ ಮೊತ್ತ ಪಡೆಯಲು ದಿನಾಂಕ: 30.09.2022ರ** ಒಳಗಾಗಿ ಕಾರ್ಯದರ್ಶಿಗಳು, ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಪಿ.ಎಫ್ ಟ್ರಸ್ಟ್‌ರವರಿಗೆ ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ. ನಂತರದಲ್ಲಿ ಸಲ್ಲಿಕೆ ಆಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಇದು ಅಂತಿಮ ನೋಟೀಸ್ ಎಂದು ಭಾವಿಸುವುದು.

ಸಹಿ/– ಕಾರ್ಯದರ್ಶಿಗಳು
ಎಂಇಐ ಪಿ.ಎಫ್ ಟ್ರಸ್ಟ್

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ತ್ಯಾನೀನಿ–ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	(ತ್ಯಾನೀನಿ –ಎನ್) ಹೆಚ್&ಎ.ವಿ	ಬೆಂಜಮಂ/ಕಾನಿಅ(ತ್ಯಾನೀನಿ–ಎನ್)ಹೆಚ್&ಎ/ಪಿಬಿ/598/2022–23, ದಿ: 25.07.2022	1	₹ 37.80ಲಕ್ಷಗಳು / ₹ 75,700/–	03.10.2022 ಸಂಜೆ 5:30 ಗಂಟೆಯವರೆಗೆ	06.10.2022ರ ಮಧ್ಯಾಹ್ನ 12:00 ಗಂಟೆಗೆ
2		ಬೆಂಜಮಂ/ಕಾನಿಅ(ತ್ಯಾನೀನಿ–ಎನ್)ಹೆಚ್&ಎ/ಪಿಬಿ/610/2022–23, ದಿ: 30.07.2022 (2ನೇ ಕರೆ)	2	₹ 15.69ಲಕ್ಷಗಳು / ₹ 39,500/–	26.09.2022 ಸಂಜೆ 5:30 ಗಂಟೆಯವರೆಗೆ	28.09.2022ರ ಮಧ್ಯಾಹ್ನ 12:00 ಗಂಟೆಗೆ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎನ್) ಹೆಚ್&ಎ.ವಿ

ಮುಖ್ಯ ಅಭಿಯಂತರರ ಕಚೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
3	ದಕ್ಷಿಣ–1	ಬೆಂಜಮಂ/ಕಾನಿಅ(ದ–1)/ಸಅ/1228/2022–23, ದಿ: 14.09.2022	₹39,78,577/– / ₹ 79,600/–	27.09.2022ರ ಸಂಜೆ 4:00 ಗಂಟೆಯವರೆಗೆ	29.09.2022ರ ಮಧ್ಯಾಹ್ನ 3:00 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–1)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/BCPL/2279/2022-23

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರ ಕಛೇರಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು
ಸಂಖ್ಯೆ/ಬಿ1/ಬಿಜಿಟಿ/ಸಿ.ಆರ್–66/2022–23 ದಿ:12.09.2022

ಟೆಂಡರ್ ಅಧಿಸೂಚನೆ

2022–23ನೇ ಸಾಲಿನಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (http://eproc.karnataka. gov.in) ಮೂಲಕ ಟೆಂಡರ್ ಕರೆಯಲಾಗಿದೆ. **ಕೆಲಸದ ವಿವರ : ಅರಣ್ಯ ಕಾಮಗಾರಿಗಳು (ಬೆಂಕಿ ರೇಖೆ ನಿರ್ವಹಣೆ). ಪರಿಮಾಣ : 11 ಸಂಖ್ಯೆ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 226.68.** ಮೇಲಿನ ಅನುಸೂಚಿಯಲ್ಲಿ ಆಹ್ವಾನಿಸಿರುವ ಕಾಮಗಾರಿಗಳು ಸರ್ಕಾರದಿಂದ ನಿಗದಿಪಡಿಸುವ ಅನುದಾನ ಮತ್ತು ಬಿಡುಗಡೆಯಾಗುವ ಅನುದಾನದ ನಿರೀಕ್ಷೆಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **28.09.2022**. ಮರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **03.10.2022**. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ದೂರವಾಣಿ : 08222–252041. **E-Mail : dirnagarahole@aranya.gov.in**

ಸಹಿ/–ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು.
ವಾಸಾಸಂಇ/ಉನಿ–ಮೈಸೂರು/ಎಂಸಿ&ಎ/494/2022–23

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ~~₹599~~ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಓ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ಕಾಲೇಜು ಆಯ್ಕೆ ಹೇಗೆ?

ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್‌ನಂತಹ ಅಧ್ಯಯನಕ್ಕಾಗಿ ಉತ್ತಮ ಕಾಲೇಜುಗಳಿಗಾಗಿ ಹುಡುಕಾಟ ಆರಂಭಿಸಿದ್ದಾರೆ. ಇಂಥ ಸಂದರ್ಭದಲ್ಲಿ ಯಾವ ಅಂಶಗಳನ್ನು ಪರಿಗಣಿಸಬೇಕು ? ಇಲ್ಲಿದೆ ಮಾಹಿತಿ

ಪ್ರದೀಪ್ ವೆಂಕಟರಾಮ್

ಹೊಸ ಶೈಕ್ಷಣಿಕ ವರ್ಷದ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದೆ. ಇತ್ತೀಚೆಗೆ ನಾನು ಭಾಗವಹಿಸುತ್ತಿರುವ ಸಂವಾದಗಳಲ್ಲಿ ಮತ್ತು ಶೈಕ್ಷಣಿಕ ಕಾರ್ಯಕ್ರಮದ ಪ್ರಶ್ನೋತ್ತರ ಅವಧಿಯಲ್ಲೂ ವಿದ್ಯಾರ್ಥಿಗಳು ಕೇಳುವ ಸಾಮಾನ್ಯ ಪ್ರಶ್ನೆ ಏನೆಂದರೆ, 'ಉತ್ತಮವಾದ ಕಾಲೇಜನ್ನು ಆಯ್ಕೆ ಮಾಡುವುದು ಹೇಗೆ?'ಎಂದು.

ಯಾಕಿಷ್ಟು ಗೊಂದಲ ?

ಅದಕ್ಕೆ ಕಾರಣ ಇಷ್ಟೇ; ನಮ್ಮ ದೇಶದಲ್ಲಿ 55,000ಕ್ಕೂ ಹೆಚ್ಚು ಕಾಲೇಜುಗಳು ಮತ್ತು 1000ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಿವೆ. ಕರ್ನಾಟಕದಲ್ಲಿ 542ಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳಿವೆ. 900ಕ್ಕೂ ಹೆಚ್ಚು ಎಂಬಿಎ ಕಾಲೇಜುಗಳಿವೆ. ಇದರ ನಡುವೆ ಬಹುತೇಕ ಎಲ್ಲಾ ಕೋರ್ಸ್‌ಗಳಲ್ಲೂ ಅತ್ಯಧಿಕ ಪೈಪೋಟಿ. ಹೀಗಾಗಿ ನಾವು ಯಾವ ಕಾಲೇಜಿಗೆ ಸೇರಿಸಬೇಕು? ಕಾಲೇಜುಗಳಲ್ಲಿರುವ ಸೌಕರ್ಯಗಳು, ಕೋಚಿಂಗ್ ಗುಣಮಟ್ಟಗಳನ್ನು ಗುರುತಿಸುವುದು ಹೇಗೆ? ಇಂಥ ವಿವಿಧ ಕಾರಣಗಳಿಂದ, ಕೆಲವು ವಿದ್ಯಾರ್ಥಿಗಳು, ಪೋಷಕರು ಗೊಂದಲಕ್ಕೆ ಸಿಲುಕಿದ್ದಾರೆ. ಹಾಗಾದರೆ, ಕಾಲೇಜು ಆಯ್ಕೆ ಮಾಡುವಾಗ ಯಾವ ಯಾವ ಅಂಶಗಳನ್ನು ಪರಿಗಣಿಸಬಹುದು? ಅದರ ಬಗ್ಗೆ ಈಗ ನೋಡೋಣ. ವಿದ್ಯಾರ್ಥಿಗಳ ವೃತ್ತಿಪರ ಬದುಕನ್ನು ರೂಪಿಸುವಲ್ಲಿ ಕಾಲೇಜು ಆಯ್ಕೆ ಪ್ರಮುಖ ಪಾತ್ರವಹಿಸುತ್ತದೆ. ಹಾಗಾಗಿ, ಕೌನ್ಸೆಲಿಂಗ್ ಅಥವಾ ಇನ್ನಿತರ ಪ್ರವೇಶ ಪ್ರಕ್ರಿಯೆಯಲ್ಲಿ ನೀಡುವ/ಸೂಚಿಸುವ ಕಾಲೇಜನ್ನು ವಸ್ತುನಿಷ್ಠವಾದ ಮೌಲ್ಯಮಾಪನವಿಲ್ಲದೆ ಸ್ವೀಕರಿಸಬಾರದು. ಕಾಲೇಜುಗಳ ಮೌಲ್ಯಮಾಪನಕ್ಕಾಗಿ ಈ ಅಂಶಗಳನ್ನು ಪರಿಗಣಿಸಬಹುದು:

- ಬೋಧನೆ, ಸೌಲಭ್ಯ ಉತ್ತಮವಿರುವ, ಅಹ್ಲಾದಕರ ವಾತಾವರಣವಿರುವ, ನಾಡಿಗೆ ಉತ್ತಮ ಪ್ರತಿಭೆಗಳನ್ನು ನೀಡಿರುವ ಪ್ರತಿಷ್ಠಿತ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬಹುದು.
- ಇಂಥ ಕಾಲೇಜುಗಳನ್ನು ಗುರುತಿಸುವಾಗ, ಆ ಶಿಕ್ಷಣ ಸಂಸ್ಥೆಗಳ ಹಿನ್ನೆಲೆ, ಫಲಿತಾಂಶ, ಸಂಸ್ಥೆಯ ಸಂಸ್ಥಾಪಕರು, ಪ್ರವರ್ತಕರು ಮತ್ತು ನಿರ್ದೇಶಕರ ಹಿನ್ನೆಲೆ ಪರಿಶೀಲಿಸಬಹುದು. ಇದರಿಂದ ಸಂಸ್ಥೆಯ ಬಗ್ಗೆ ವಿಶ್ವಾಸಾರ್ಹತೆ ಮೂಡುತ್ತದೆ.
- ಉತ್ತಮ ಫಲಿತಾಂಶ ಪಡೆದಿರುವ ಹಿರಿಯ ವಿದ್ಯಾರ್ಥಿಗಳಿಂದಲೂ ಅಭಿಪ್ರಾಯ ಸಂಗ್ರಹಿಸಬಹುದು. ಆ ವಿದ್ಯಾರ್ಥಿಗಳ ಪೋಷಕರ ಅನುಭವವನ್ನೂ ಪಡೆಯಬಹುದು.
- ಮುಂದಿನ ಹಂತ, ಬೋಧನಾ ವರ್ಗ ಹೇಗಿದೆ ಎಂದು ತಿಳಿಯಬೇಕು. ವಿದ್ಯಾರ್ಥಿ/ಅಧ್ಯಾಪಕರ ಅನುಪಾತ, ಅಧ್ಯಾಪಕರ ಅನುಭವ, ಅರ್ಹತೆಗಳು, ಪ್ರಕಟಿತ ಪ್ರಬಂಧಗಳು, ಸಂಶೋಧನೆಗಳು, ಇನ್ನಿತರ ಸಾಧನೆಗಳ ವಿವರಗಳನ್ನು ಕಾಲೇಜಿನ ವೆಬ್‌ಸೈಟ್ ಮೂಲಕ ತಿಳಿದುಕೊಳ್ಳಬಹುದು. ಜಾಲತಾಣದ ಮಾಹಿತಿಯನ್ನೂ ಒರೆಗೆ ಹಚ್ಚಿ ನೋಡುವುದು ಒಳ್ಳೆಯ ಕ್ರಮ
- ಸಾಂಪ್ರದಾಯಿಕ ಶಿಕ್ಷಣದ ಜೊತೆ ವಿಮರ್ಶಾತ್ಮಕ, ಪ್ರಾಯೋಗಿಕ ಮತ್ತು ಪರಿಕಲ್ಪನಾ ಶಿಕ್ಷಣವೂ ಇರಬೇಕು. ಪಠ್ಯೇತರ ಚಟುವಟಿಕೆಗಳಿರುವ ಕಾಲೇಜುಗಳು ಇಂದಿನ ಅಗತ್ಯ. ಕೌಶಲ ಅಭಿವೃದ್ಧಿಗೂ ಆದ್ಯತೆ ನೀಡಬೇಕು. ಈ ಅಂಶಗಳನ್ನೂ ಪರಿಗಣಿಸಬಹುದು.
- ಮೂಲಸೌಕರ್ಯ ಪರಿಶೀಲಿಸುವ ವೇಳೆ, ಕೋರ್ಸ್‌ಗೆ ಅನುಗುಣವಾಗಿ ಸೌಕರ್ಯಗಳಿವೆಯೇ ಎಂದು ಪರಿಶೀಲಿಸಬಹುದು. ಜೊತೆಗೆ, ಸುಸಜ್ಜಿತ ತರಗತಿ ಕೊಠಡಿಗಳು, ಪ್ರಯೋಗಾಲಯಗಳು ಗ್ರಂಥಾಲಯ, ಸೆಮಿನಾರ್ ಹಾಲ್‌ಗಳು/ಚರ್ಚಾ ಕೊಠಡಿಗಳು, ಹಾಸ್ಟೆಲ್ / ಕ್ಯಾಂಟಿನ್ ಸೌಲಭ್ಯ, ಪಠ್ಯೇತರ ಚಟುವಟಿಕೆಗಳಿಗಾಗಿ ಕ್ರೀಡಾ ಸೌಲಭ್ಯ ಹಾಗೂ ನೈರ್ಮಲ್ಯ ಮತ್ತು ವಾತಾವರಣವನ್ನು ಗಮನಿಸಬಹುದು.
- ವಿಷಯವಾರು ಪರಿಣತಿಯ ಅಧ್ಯಾಪಕರು, ಪ್ರತಿ ವಿಭಾಗಕ್ಕೆ ಸಂಬಂಧಿಸಿದ ಉದ್ಯಮಗಳ ಜೊತೆ ಕಾಲೇಜುಗಳ ಸಹಯೋಗದಿಂದ ಇಂಟರ್ನ್‌ಷಿಪ್ , ಸಮ್ಮರ್ ಪ್ರಾಜೆಕ್ಟ್‌ಗಳನ್ನು ನಡೆಸುವ ವ್ಯವಸ್ಥೆ ಇರುವುದನ್ನು ಪರಿಶೀಲಿಸಬಹುದು. ಇಂಥ ಸೌಲಭ್ಯಗಳು ಕೋರ್ಸ್ ಮುಗಿದ ನಂತರ, ಭವಿಷ್ಯದಲ್ಲಿ ಉದ್ಯೋಗ ಪಡೆಯಲು ನೆರವಾಗುತ್ತವೆ.
- ಕ್ಯಾಂಪಸ್ ಸೆಲೆಕ್ಷನ್‌ನಂತಹ ಪ್ರಕ್ರಿಯೆಗಳ ಮೇಲೂ ಗಮನಹರಿಸಬಹುದು. ಕ್ಯಾಂಪಸ್‌ನಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಉದ್ಯೋಗ ನೀಡಿದ ಕಂಪನಿಗಳ ಸ್ಥಿತಿ-ಗತಿ ಬಗ್ಗೆಯೂ ಯೋಚಿಸಬಹುದು.
- ಕೋರ್ಸ್‌ಗೆ ಸಂಬಂಧಿಸಿದಂತೆ ಕಾಲೇಜುಗಳು, ಉದ್ಯಮಗಳಿಗೆ (ಮೈನಿಂಗ್, ಆಟೋಮೊಬೈಲ್, ಐಟಿ ಇತ್ಯಾದಿ) ಹತ್ತಿರವಿದ್ದಷ್ಟೂ ಪ್ರಾಯೋಗಿಕ ಕಲಿಕೆಗೆ ಸಹಾಯವಾಗುತ್ತದೆ. ಈ ಬಗ್ಗೆಯೂ ಗಮನಿಸಬಹುದು.
- ಮೆಡಿಕಲ್ ಕೌನ್ಸಿಲ್, ಯುಜಿಸಿ, ಎಐಸಿಟಿಇ ಇತ್ಯಾದಿ ಸಂಸ್ಥೆಗಳಿಂದ ಅನುಮೋದಿತವಾಗಿರುವ ಕೋರ್ಸ್‌ಗಳನ್ನೇ ಆಯ್ಕೆ ಮಾಡಿಕೊಳ್ಳಬೇಕು.
- ಕಾಲೇಜುಗಳ ನಡುವಿನ ಶುಲ್ಕಗಳು ಮತ್ತು ವೆಚ್ಚಗಳನ್ನು ಹೋಲಿಸಿ ಅನುಕೂಲತೆಗಳನ್ನು ಗಮನಿಸಬೇಕು.

ವಿವೇಚನೆ ಬಳಸಿ

ಕಾಲೇಜು ಆಯ್ಕೆಯನ್ನು ಸುಲಭಗೊಳಿಸಲು, ಸಿದ್ಧಪಡಿಸಿದ ಮೌಲ್ಯಮಾಪನದ ದತ್ತಾಂಶ ಈಗ ಲಭ್ಯವಿದೆ. ಪ್ರಮುಖ ವ್ಯಾಪಾರ ಸಂಸ್ಥೆಗಳು, ನಿಯತಕಾಲಿಕೆಗಳು ಮೇಲೆ ಉಲ್ಲೇಖಿಸಿದ ಅಂಶಗಳನ್ನು ಪರಿಗಣಿಸಿ ಶ್ರೇಯಾಂಕಗಳನ್ನು ಪ್ರಕಟಿಸುತ್ತವೆ. ಆದಾಗ್ಯೂ, ಈ ಶ್ರೇಯಾಂಕಗಳು ಸಂಪೂರ್ಣವಾಗಿ ವಿಶ್ವಾಸಾರ್ಹವಲ್ಲ. ಏಕೆಂದರೆ, ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಂಸ್ಥೆಗಳನ್ನು ಮಾತ್ರ ಒಳಗೊಂಡಿದ್ದು, ವಿದ್ಯಾರ್ಥಿಗಳು ನಿರ್ದಿಷ್ಟವಾದ ಕಾಲೇಜುಗಳ ಮಾಹಿತಿಯನ್ನು ಅವಲೋಕಿಸಲು ಅನೇಕ ಮೌಲ್ಯಮಾಪನಗಳನ್ನು ಗಮನಿಸುವುದರ ಜೊತೆಗೆ ನಿರ್ಧಾರ ಮಾಡುವಾಗ ತಮ್ಮ ವಿವೇಚನೆಯನ್ನು ಬಳಸಬೇಕಾಗುತ್ತದೆ.

ಆದರೆ, 2016ರಿಂದ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ಪ್ರಕಟಿಸುತ್ತಿರುವ ರಾಷ್ಟ್ರೀಯ ಶ್ರೇಯಾಂಕ ಮಾಹಿತಿ ಚೌಕಟ್ಟಿನಿಂದ (ಎನ್‌ಐಆರ್‌ಎಫ್) ಈ ಪ್ರಕ್ರಿಯೆ ಸ್ವಲ್ಪಮಟ್ಟಿಗೆ ಸರಾಗವಾಗಿದೆ. ಶ್ರೇಯಾಂಕವನ್ನು ಪರಿಗಣಿಸುವುದರ ಜೊತೆಗೆ, ವಿಶ್ಲೇಷಣೆಯನ್ನು ಸಮಗ್ರಗೊಳಿಸಲು ಕಾಲೇಜಿನ ವೆಬ್‌ಸೈಟ್‌ಗಳನ್ನು ಕೂಲಂಕಷವಾಗಿ ಪರಿಶೀಲಿಸುವುದು ಮತ್ತು ಹಳೆಯ/ಹಿರಿಯ ವಿದ್ಯಾರ್ಥಿಗಳ ಅಭಿಪ್ರಾಯ ಮತ್ತು ಸಲಹೆಗಳನ್ನು ಪಡೆಯುವುದು ಕೆಲವೊಮ್ಮೆ ಉಪಯುಕ್ತ.

ಅಗತ್ಯವೆನಿಸಿದರೆ, ಆಯ್ಕೆಮಾಡಿದ ಕಾಲೇಜಿಗೆ ಖುದ್ದಾಗಿ ಭೇಟಿ ನೀಡುವುದರಿಂದ ತೆಗೆದುಕೊಂಡ ನಿರ್ಧಾರದ ಸಮರ್ಥನೆಯೊಂದಿಗೆ ಭವಿಷ್ಯದ ಬಗ್ಗೆ ಭರವಸೆಯೂ ಮೂಡುತ್ತದೆ.

(ಲೇಖಕರು ಶಿಕ್ಷಣ ತಜ್ಞರು ಮತ್ತು ವೃತ್ತಿ ಸಲಹೆಗಾರರು)

ಬಿ.ಕಾಂ ಪದವೀಧರರು ಸಾಫ್ಟ್‌ವೇರ್ ಎಂಜಿನಿಯರ್ ಆಗಬಹುದೇ ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ಬಿಕಾಂ ಪದವಿ ಹೊಂದಿದವರು ಕೂಡ ಸಾಫ್ಟ್‌ವೇರ್ ಎಂಜಿನಿಯರ್ ಆಗಬಹುದೇ? ಇದಕ್ಕೆ ಏನು ಓದಬೇಕು? ಸಾಫ್ಟ್‌ವೇರ್ ಕ್ಷೇತ್ರಕ್ಕೆ ಬೇಡಿಕೆ ಹೇಗಿದೆ ?

ಅಮೋಘ, ತುಮಕೂರು.

'ಸಾಫ್ಟ್‌ವೇರ್ ಎಂಜಿನಿಯರಿಂಗ್' ಬೇಡಿಕೆಯಲ್ಲಿರುವ ಕ್ಷೇತ್ರ. ನೀವು ಪಿಯುಸಿ/ಪದವಿಯಲ್ಲಿ ಗಣಿತವನ್ನು ಓದಿ, ಕನಿಷ್ಠ ಶೇ 50 ಅಂಕಗಳನ್ನು ಗಳಿಸಿದ್ದರೆ, ಆಯ್ದ ಕೆಲವು ಕಾಲೇಜುಗಳಲ್ಲಿ ಎಂಸಿಎ ಮಾಡಿ ಸಾಫ್ಟ್‌ವೇರ್ ವೃತ್ತಿಯನ್ನು ಅರಸಬಹುದು. ಗಣಿತ ಓದಿಲ್ಲದಿದ್ದರೆ, ಬೇಡಿಕೆಯಲ್ಲಿರುವ ಅರೆಕಾಲಿಕ ಕೋರ್ಸ್‌ಗಳಾದ ಮಷೀನ್ ಲರ್ನಿಂಗ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಪೈಥಾನ್, ಜಾವ, ಸಿ + +, ಸ್ವಿಫ್ಟ್, ಲೈನಕ್ಸ್, ಡೇಟಾ ಸೈನ್ಸ್, ಸೈಬರ್ ಸೆಕ್ಯೂರಿಟಿ ಇತ್ಯಾದಿ ಕೋರ್ಸ್‌ಗಳನ್ನು ಮಾಡಿ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

2. ನಾನು ಬಿಕಾಂ ಪದವಿ ಮುಗಿಸಿದ್ದೇನೆ. ಮುಂದೆ ಬಿ.ಇಡಿ ಮಾಡಬೇಕಾ ಅಥವಾ ಎಂ.ಕಾಂ ಪದವಿಗೆ ಹೋಗಬೇಕಾ ಎನ್ನುವ ಗೊಂದಲವಿದೆ. ಎಲ್ಲದಕ್ಕೂ ಹಣಕಾಸಿನ ತೊಂದರೆ ಅಡ್ಡಿಯಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ನಾನು ಏನು ಮಾಡಬಹುದು ?

ಊರು, ಹೆಸರು ತಿಳಿಸಿಲ್ಲ.

ಆರ್ಥಿಕ ಸಮಸ್ಯೆಯ ಕಾರಣದಿಂದ ನಿಮ್ಮ ಭವಿಷ್ಯದ ಕನಸುಗಳನ್ನು ಕಾಣದೆ ಮುಂದಿನ ಬದುಕಿನ ಬಗ್ಗೆ ರಾಜಿಯಾಗದಿರಿ. ನಿಮ್ಮ ಸಾಮರ್ಥ್ಯ, ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯನ್ನು ಪ್ರತಿಬಿಂಬಿಸುವ ವೃತ್ತಿಯ ಬಗ್ಗೆ ಚಿಂತಿಸಿ. ಅದರಂತೆ ಕೋರ್ಸ್ ಆಯ್ಕೆ ಮಾಡಿ, ಸರ್ಕಾರಿ ಕಾಲೇಜುಗಳಲ್ಲಿ ನಿಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ. ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಆರ್ಥಿಕ ಸಮಸ್ಯೆಯಿರುವ ವಿದ್ಯಾರ್ಥಿಗಳಿಗಿರುವ ಅನೇಕ ಸ್ಕಾಲರ್‌ಶಿಪ್, ಉಚಿತ ಪುಸ್ತಕಗಳು, ವಿದ್ಯಾರ್ಥಿ ವೇತನಗಳ ಬಗ್ಗೆ ಮಾಹಿತಿಯನ್ನು ಕಲೆಹಾಕಿ ಆ ಅನುಕೂಲಗಳನ್ನು ಪಡೆದುಕೊಳ್ಳಿ. ಜೊತೆಗೆ, ನಿಮಗೆ ಸಹಾಯವಾಗಬಹುದಾದ ಅನೇಕ ಅರೆಕಾಲಿಕ ಕೆಲಸಗಳನ್ನು ಕೂಡಾ ಮಾಡಬಹುದು. ವೃತ್ತಿ ಯೋಜನೆಯನ್ನು ಮಾಡುವ ಪ್ರಕ್ರಿಯೆ ಕುರಿತ ಈ ವಿಡಿಯೊ ವೀಕ್ಷಿಸಿ: https://www.youtube.com/c/EducationalExpertManagementCareerConsultant

3. ನಾನು ಎಸ್‌ಎಸ್‌ಎಲ್‌ಸಿ, ಪಿಯುಸಿ ನಂತರ ಕಾರಣಾಂತರದಿಂದ ಬಿಎ ಪದವಿಯನ್ನು ದೂರಶಿಕ್ಷಣದಲ್ಲಿ ಕಲಿತಿದ್ದೇನೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ದ್ವಿತೀಯ ದರ್ಜೆಯಲ್ಲಿ (2009) ಉತ್ತೀರ್ಣನಾಗಿದ್ದು, ಇನ್ನೂ ಹೆಚ್ಚಿನ ಅಂಕ ಪಡೆಯುವ ಆಸಕ್ತಿ ಹೊಂದಿದ್ದೇನೆ. ಈಗ ಎಸ್‌ಎಸ್‌ಎಲ್‌ಸಿ ಮರು ಪರೀಕ್ಷೆ ಬರೆಯಲು ಸಾಧ್ಯವಿದೆಯೇ?

ಶಿವಕುಮಾರ್, ಊರು ತಿಳಿಸಿಲ್ಲ.

ನಮಗಿರುವ ಮಾಹಿತಿಯಂತೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಮೊದಲ ಬಾರಿ ಬರೆದ ಎರಡು ವರ್ಷಗಳ ಒಳಗೆ ಮರು ಪರೀಕ್ಷೆಯನ್ನು ಬರೆಯಬಹುದು. ಖಚಿತವಾದ ಮಾಹಿತಿಗಾಗಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯನ್ನು ಸಂಪರ್ಕಿಸಿ.

4. ನಾನು ಬಿಕಾಂ ಮುಗಿಸಿ ಬಿ.ಇಡಿ ಮಾಡಬೇಕು ಎಂದುಕೊಂಡಿದ್ದೇನೆ. ಆದರೆ, ನನ್ನ ಇಷ್ಟದ ವಿಷಯ ಸಮಾಜ ವಿಜ್ಞಾನ. ಇಲ್ಲಿಯವರೆಗೆ ಅಪ್ಪ ಅಮ್ಮ ಹೇಳಿದ್ದನ್ನು ಓದಿದ್ದೇನೆ. ಇನ್ನು ಮುಂದೆ ನನ್ನ ಇಷ್ಟದ ವಿಷಯ ತೆಗೆದುಕೊಂಡು, ಅದರಲ್ಲಿ ಮುಂದುವರಿಯುವುದು ಹೇಗೆ ಎಂದು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಆಸಕ್ತಿ, ಒಲವು, ಪ್ರತಿಭೆ, ಕೌಶಲಗಳನ್ನು ಗುರುತಿಸಿ, ಸ್ವಯಂ-ಮೌಲ್ಯಮಾಪನ ಮಾಡಬೇಕು. ನಂತರ, ವೈಯಕ್ತಿಕ/ಕುಟುಂಬದ ಮೌಲ್ಯಗಳು, ಸವಾಲುಗಳು, ಅಗತ್ಯಗಳನ್ನು ಗುರುತಿಸಿ, ಯಾವ ವೃತ್ತಿ ಸರಿಹೊಂದಬಹುದು ಎಂದು ಅಂದಾಜು ಮಾಡಿ, ದೀರ್ಘಾವಧಿಯಲ್ಲೂ ಆ ವೃತ್ತಿಗೆ ಬೇಡಿಕೆ ಇರುತ್ತದೆಯೇ ಎಂದು ಖಚಿತಪಡಿಸಿಕೊಳ್ಳಿ.

ವೃತ್ತಿಯ ಮತ್ತು ವೈಯಕ್ತಿಕ ಬದುಕಿನ ಧ್ಯೇಯಗಳನ್ನು ನಿಶ್ಚಯಿಸಿ, ಶಿಕ್ಷಣದ ವಿವಿಧ ಹಂತಗಳ ಅವಶ್ಯಕತೆಗಳನ್ನು ತೀರ್ಮಾನಿಸಿ. ಅವಶ್ಯಕತೆಗಳಿಗೆ ತಕ್ಕಂತೆ ಮಾಡಬೇಕಾದ ಕೋರ್ಸ್‌ಗಳು, ಪ್ರವೇಶ ಪರೀಕ್ಷೆಗಳು, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಗುರುತಿಸಿ.

5. ನಾನು ಎಂಜಿನಿಯರಿಂಗ್ (ಕಂಪ್ಯೂಟರ್ ವಿಜ್ಞಾನ) ಮಾಡಬೇಕು ಅಂದುಕೊಂಡಿದ್ದೇನೆ. ಇದರ ಜೊತೆಗೆ ಪೂರಕ ಕೋರ್ಸ್ ಇದೆಯೇ ?

ಹೆಸರು, ಊರು ತಿಳಿಸಿಲ್ಲ.

ಕಂಪ್ಯೂಟರ್ ವಿಜ್ಞಾನ ವಿಸ್ತಾರವಾದ ಕ್ಷೇತ್ರ. ಉದಾಹರಣೆಗೆ, ಮಷೀನ್ ಲರ್ನಿಂಗ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಪ್ರೋಗ್ರಾಮಿಂಗ್, ಡೇಟಾ ಸೈನ್ಸ್, ಸೈಬರ್ ಸೆಕ್ಯುರಿಟಿ, ನೆಟ್‌ವರ್ಕಿಂಗ್, ಗೇಮ್ಸ್, ಗ್ರಾಫಿಕ್ಸ್ ಇತ್ಯಾದಿ ವಿಭಾಗಗಳಿವೆ. ಬಿಇ/ಬಿಟೆಕ್ ಜೊತೆಗೆ ಕೌಶಲಾಭಿವೃದ್ಧಿಗಾಗಿ, ನಿಮ್ಮ ಆಸಕ್ತಿಯ ಅನುಸಾರ ಮೇಲೆ ಉಲ್ಲೇಖಿಸಿದ ವಿಭಾಗಗಳಲ್ಲಿ ಅರೆಕಾಲಿಕ ಕೋರ್ಸ್ ಮಾಡುವುದು ಒಳ್ಳೆಯದು. ನಂತರ ಹೆಚ್ಚಿನ ತಜ್ಞತೆಗಾಗಿ, ಎಂ.ಇ/ಎಂ.ಟೆಕ್ ಕೋರ್ಸ್ ಮಾಡಬಹುದು.

6. ನನ್ನ ಪ್ರೌಢಶಾಲೆಯ ದಾಖಲೆಗಳಲ್ಲಿ ಗ್ರಾಮೀಣ ಮತ್ತು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆ ಎಂದಿದೆ. ಆದರೆ, ದಾಖಲಾತಿ ದಿನಾಂಕ ಮತ್ತು ಶಾಲೆ ಬಿಟ್ಟ ದಿನಾಂಕದ ವರ್ಷ 2011 ಮತ್ತು 2014ರ ಬದಲು, 2011 ಎಂದು ಮಾತ್ರ ನಮೂದಿಸಲಾಗಿದೆ. ಸೆಪ್ಟೆಂಬರ್ 23ರಂದು ನನಗೆ ಎಸ್‌ಡಿಎ ದಾಖಲಾತಿ ಪರಿಶೀಲನೆ ಇದೆ. ಇದರಿಂದ ತೊಂದರೆಯಾಗುತ್ತದೆಯೆ? ಸರಿಪಡಿಸುವುದು ಹೇಗೆ?

ಸಂದೀಪ್, ಹೊಸದುರ್ಗ.

ನಮ್ಮ ಅಭಿಪ್ರಾಯದಂತೆ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿ ಸರಿಯಾದ ಮಾಹಿತಿಯಿದ್ದರೆ ದಾಖಲಾತಿ ಪರಿಶೀಲನೆಯಲ್ಲಿ ತೊಂದರೆ ಯಾಗಲಾರದು. ಈಗ ಸಮಯದ ಅಭಾವ ವಿರುವುದರಿಂದ, ಎಸ್‌ಡಿಎ ಪ್ರಕ್ರಿಯೆಯ ನಂತರ ಅಗತ್ಯವೆನಿಸಿದರೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯನ್ನು ಸಂಪರ್ಕಿಸಿ.

ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=MHnPg_sp6E0

ಪ್ರಶ್ನೋತ್ತರಗಳಿಗೆ prajavani.net ಸಂಪರ್ಕಿಸಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಎಸ್‌ಬಿಐ ಆಶಾ ಸ್ಕಾಲರ್‌ಶಿಪ್ ಪ್ರೋಗ್ರಾಂ 2022

ವಿವರ: 6 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣವನ್ನು ಮುಂದುವರಿಸಲು ಆರ್ಥಿಕ ನೆರವು ನೀಡುವುದಕ್ಕಾಗಿ ಎಸ್‌ಬಿಐ ಫೌಂಡೇಶನ್ ಆಶಾ ಸ್ಕಾಲರ್‌ಶಿಪ್ ಪ್ರೋಗ್ರಾಂ ಆರಂಭಿಸಿದೆ.

ಅರ್ಹತೆ : 6 ರಿಂದ 12 ನೇ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಹಿಂದಿನ ಶೈಕ್ಷಣಿಕ ವರ್ಷದ ಪರೀಕ್ಷೆಯಲ್ಲಿ ಕನಿಷ್ಠ ಶೇ 75 ಅಂಕಗಳನ್ನು ಗಳಿಸಿರಬೇಕು. ಅವರ ಕುಟುಂಬದ ವಾರ್ಷಿಕ ಆದಾಯ ₹3 ಲಕ್ಷ ಮೀರಬಾರದು.

ಆರ್ಥಿಕ ನೆರವು : ₹ 15000

ಅರ್ಜಿ ಸಲ್ಲಿಸಲು ಕೊನೆ ದಿನ: ಅಕ್ಟೋಬರ್ 15, 2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ : www.b4s.in/praja/SBIFS1

ಎಲ್‌ಐಸಿ ಎಚ್‌ಎಫ್‌ಎಲ್ ವಿದ್ಯಾದಾನ್ ಸ್ಕಾಲರ್‌ಶಿಪ್

ವಿವರ: 11ನೇ ತರಗತಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳನ್ನು ಬೆಂಬಲಿಸುವ ಸಲುವಾಗಿ ಎಲ್‌ಐಸಿ ಎಚ್‌ಎಫ್‌ಎಲ್ ಈ ಕಾರ್ಯಕ್ರಮವನ್ನು ರೂಪಿಸಿದೆ.

ಕಡಿಮೆ ಆದಾಯ ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕುಟುಂಬದ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ವೇತನವನ್ನು ಮೀಸಲಿಡಲಾಗಿದೆ.

ಅರ್ಹತೆ : ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು 11ನೇ ತರಗತಿ ಮತ್ತು ಮೊದಲ ವರ್ಷದ ಪದವಿ ಮತ್ತು ಸ್ನಾತಕೋತ್ತರ ಪದವಿ ಓದುತ್ತಿರಬೇಕು. ಅರ್ಜಿದಾರರು ತಮ್ಮ ಹಿಂದಿನ ಕೋರ್ಸ್ / ತರಗತಿಯಲ್ಲಿ ಶೇ 60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ ₹ 3.60 ಲಕ್ಷ ಮೀರಿರಬಾರದು.

ಆರ್ಥಿಕ ನೆರವು : ₹ 20 ಸಾವಿರದವರೆಗೆ

ಅರ್ಜಿ ಸಲ್ಲಿಸಲು ಕೊನೆ ದಿನ: ಸೆಪ್ಟೆಂಬರ್ 30, 2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ : www.b4s.in/praja/LHVT3

ಎರಿಕ್ಸನ್ ಎಂಪವರಿಂಗ್ ಗರ್ಲ್ ಸ್ಕಾಲರ್‌ಶಿಪ್ ಪ್ರೋಗ್ರಾಂ 2022

ವಿವರ : ದೇಶದಾದ್ಯಂತ ದ್ವಿತೀಯ ವರ್ಷದ ಎಂಜಿನಿಯರಿಂಗ್ (ಐಟಿ/ಸಿಎಸ್) ಅಥವಾ ಎಂಬಿಎ ಓದುತ್ತಿರುವ ಹಿಂದುಳಿದ ವರ್ಗಗಳಿಗೆ ಸೇರಿದ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಬೆಂಬಲಿಸುವುದಕ್ಕಾಗಿ ಎರಿಕ್ಸನ್ ಕಂಪನಿ ಈ ಸ್ಕಾಲರ್‌ಶಿಪ್ ಕಾರ್ಯಕ್ರಮವನ್ನು ರೂಪಿಸಿದೆ.

ಅರ್ಹತೆ : ಅರ್ಜಿದಾರರು ಪ್ರಸ್ತುತ ದೇಶದ ಯಾವುದಾದರೂ ಕಾಲೇಜಿನಲ್ಲಿ 2ನೇ ವರ್ಷದ ಎಂಜಿನಿಯರಿಂಗ್ (ಐಟಿ/ಸಿಎಸ್) ಅಥವಾ ಎಂಬಿಎ ಪದವಿಯನ್ನು ಓದುತ್ತಿರಬೇಕು. ಅರ್ಜಿದಾರರು ಹಿಂದಿನ ಅಂತಿಮ ಪರೀಕ್ಷೆಯಲ್ಲಿ ಕನಿಷ್ಠ 6.5 ಜಿಪಿಎ ಅಥವಾ ತತ್ಸಮಾನ ಅಂಕಗಳನ್ನು ಗಳಿಸಿರಬೇಕು. ಎಲ್ಲಾ ಮೂಲಗಳಿಂದ ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷ ಮೀರಬಾರದು.

ಆರ್ಥಿಕ ನೆರವು : ವಾರ್ಷಿಕ ₹75 ಸಾವಿರ

ಅರ್ಜಿ ಸಲ್ಲಿಸಲು ಕೊನೆ ದಿನ: ನವೆಂಬರ್ 7, 2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ : www.b4s.in/praja/EEGS13

ಮಾಹಿತಿ ಕೃಪೆ: ebuddy.com

ಹಳ್ಳಿಮಕ್ಕಳ ಶಿಕ್ಷಣಾಲಯ– 'ನವೋದಯ'

ವೆಂಕಟಸುಬ್ಬರಾವ್. ವಿ

ಭಾಗ 1

ಹಳ್ಳಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ನೆರವಾಗುವುದು ಜವಾಹರ ನವೋದಯ ವಿದ್ಯಾಲಯಗಳ ಮುಖ್ಯ ಗುರಿ. ಈ ನವೋದಯ ಶಾಲೆಗಳಲ್ಲಿ ಕಲಿಕೆ, ಆಯ್ಕೆ ಪ್ರಕ್ರಿಯೆ ಹೇಗಿರುತ್ತದೆ. ಈ ಬಗ್ಗೆ ಸಮಗ್ರ ಮಾಹಿತಿಯನ್ನು ಒಳಗೊಂಡ ಲೇಖನ ಸರಣಿ ಆರಂಭ.

ಗ್ರಾಮೀಣ ಪ್ರದೇಶಗಳ ಮಕ್ಕಳಿಗೆ ಉನ್ನತವಾದ ಕಲಿಕಾ ವಾತಾವರಣವನ್ನು ನಿರ್ಮಿಸಿ ಅವರ ಕಲಿಕಾ ಸಾಮರ್ಥ್ಯವನ್ನು ಉದ್ದೀಪನಗೊಳಿಸುವ ಉದ್ದೇಶದೊಂದಿಗೆ ಆರಂಭವಾಗಿದ್ದು ಜವಾಹರ ನವೋದಯ ವಿದ್ಯಾಲಯ ವಸತಿ ಶಾಲೆ. 'ರಾಷ್ಟ್ರೀಯ ಶಿಕ್ಷಣ ನೀತಿ – 1986' ಅಡಿಯಲ್ಲಿ ಈ ಶಾಲೆ ಆರಂಭಿಸಲಾಗಿದೆ.

ಹಳ್ಳಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ನೆರವು ನೀಡುವುದು ಜವಾಹರ ನವೋದಯ ವಿದ್ಯಾಲಯಗಳ ಮುಖ್ಯ ಗುರಿ. ಇಂಥ ಉದ್ದೇಶದೊಂದಿಗೆ ಗ್ರಾಮೀಣ ಭಾಗದಲ್ಲಿ ಚಿಕ್ಕದಾಗಿ ಹಾಗೂ ಪ್ರಯೋಗವಾಗಿ ಪ್ರಾರಂಭವಾದ ಈ ಶಾಲೆಗಳು ಈಗ ನಮ್ಮ ದೇಶದ ಹೆಮ್ಮೆಯ ವಿದ್ಯಾಸಂಸ್ಥೆಗಳಾಗಿ ಬೆಳೆದು ನಿಂತಿವೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ವರದಾನವಾಗಿವೆ. ಈ ವಸತಿ ಶಾಲೆಗಳು ಮಕ್ಕಳಲ್ಲಿ ಶಿಸ್ತು ಮೂಡಿಸುವಲ್ಲಿ ಮತ್ತು ಅವರ ಸರ್ವಾಂಗೀಣ ಅಭಿವೃದ್ಧಿಯ ಕಡೆಗೆ ಒತ್ತು ಕೊಡುವಲ್ಲಿ ಯಶಸ್ವಿಯಾಗಿವೆ.

ಸುಸಜ್ಜಿತ ಕಲಿಕಾ ಕೊಠಡಿಗಳು, ಗ್ರಂಥಾಲಯ, ಕಂಪ್ಯೂಟರ್ ಮತ್ತು ವಿಜ್ಞಾನ ಪ್ರಯೋಗಾಲಯಗಳು, ಕ್ರೀಡಾಂಗಣಗಳು ಸೇರಿದಂತೆ ಉತ್ತಮ ಕಲಿಕೆಗೆ ಅಗತ್ಯವಿರುವ ಎಲ್ಲ ಮೂಲಸೌಲಭ್ಯಗಳು ಇಲ್ಲಿವೆ. ಉತ್ತಮವಾದ ಸಮತೋಲಿತ ಆಹಾರವನ್ನು ಮಕ್ಕಳಿಗೆ ಕೊಡಲಾಗುತ್ತದೆ. ಎಲ್ಲ ಶಿಕ್ಷಕರೂ ವಸತಿ ಶಾಲೆಯ ಒಳಗೇ ವಾಸಿಸುವುದರಿಂದ ಮಕ್ಕಳು ಮತ್ತು ಶಿಕ್ಷಕರ ಸಂವಹನ ಸಮರ್ಪಕವಾಗಿ ರೀತಿಯಲ್ಲಿ ಆಗುತ್ತದೆ. ಇದರಿಂದ ಮಕ್ಕಳ ಕಲಿಕಾಸಕ್ತಿ ಹೆಚ್ಚುತ್ತದೆ. ಈ ಶಾಲೆಯ ವೇಳಾಪಟ್ಟಿಯು ಬೆಳಿಗ್ಗೆ 5 ಗಂಟೆಯಿಂದ ಪ್ರಾರಂಭವಾಗಿ ರಾತ್ರಿ 10 ಅಥವಾ 11ರ ತನಕ ಇರುತ್ತದೆ. ಈ ಅವಧಿಯಲ್ಲಿ ಆಟ-ಪಾಠ-ಊಟ-ಕಲಿಕೆ-ಸ್ವಾಧ್ಯಾಯ ಎಲ್ಲವೂ ಇರುತ್ತದೆ.

'ನವೋದಯ'ದ ವೈಶಿಷ್ಟ್ಯಗಳು

ಈ ವಿದ್ಯಾಲಯಗಳು ದೇಶದ ವಿವಿಧ ಭಾಗಗಳ ಗ್ರಾಮೀಣ ಪ್ರದೇಶಗಳಲ್ಲಿವೆ. ಇವು ಸಿ.ಬಿ.ಎಸ್.ಇ(ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ ಪಠ್ಯಕ್ರಮ) ಶಾಲೆಗಳಾಗಿರುತ್ತವೆ.

6 ರಿಂದ 12ನೆಯ ತರಗತಿಯಲ್ಲಿ ಓದುತ್ತಿರುವ ಗ್ರಾಮೀಣ ಭಾಗದ ಪ್ರತಿಭಾವಂತ ಮಕ್ಕಳಿಗೆ ಉಚಿತ ಶಿಕ್ಷಣದ ಜೊತೆಗೆ, ಉಚಿತವಾಗಿ ಸಮವಸ್ತ್ರಗಳು, ಊಟ-ವಸತಿ, ಪಠ್ಯಪುಸ್ತಕಗಳು, ಕಲಿಕಾ ಸಾಮಗ್ರಿಗಳು ಇತ್ಯಾದಿಗಳನ್ನು ನೀಡುತ್ತವೆ.

'ಪ್ರತಿಭಾ ಪರೀಕ್ಷೆ'ಯ ಮೂಲಕ ಪ್ರತಿಭಾನ್ವಿತ ಮಕ್ಕಳನ್ನು ಶಾಲಾ ಪ್ರವೇಶಕ್ಕೆ ಆಯ್ಕೆಮಾಡಲಾಗುತ್ತದೆ. ಪ್ರತಿ ವರ್ಷ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ಪ್ರವೇಶ ಪರೀಕ್ಷೆಗಳನ್ನು ಸಿ.ಬಿ.ಎಸ್.ಇ ಮಂಡಳಿ ನಡೆಸುತ್ತದೆ. ಮೊದಲೇ ಹೇಳಿದಂತೆ ಈ ಶಾಲೆಗಳಲ್ಲಿ ಶೇ 75ರಷ್ಟಾದರೂ ಸೀಟುಗಳು ಗ್ರಾಮೀಣ ಮಕ್ಕಳಿಗೆ ಮೀಸಲಾಗಿರುತ್ತವೆ. 1/3 ಭಾಗದಷ್ಟು ಸೀಟುಗಳು ಹೆಣ್ಣುಮಕ್ಕಳಿಗಾಗಿ ಇರುತ್ತವೆ. ಈ ಶಾಲೆಗಳಲ್ಲಿ ಇಂಗ್ಲಿಷ್, ಹಿಂದಿ ಮತ್ತು ಪ್ರಾಂತೀಯ ಭಾಷೆಗಳನ್ನು ಬೋಧಿಸಲಾಗುತ್ತದೆ. 7 ಮತ್ತು 8ನೆಯ ತರಗತಿಯವರಗೂ ಮಾತೃಭಾಷೆಯಲ್ಲಿ ನಂತರ ಇಂಗ್ಲಿಷ್ ಅಥವಾ ಹಿಂದಿ ಮಾಧ್ಯಮದಲ್ಲಿ ಬೋಧಿಸಲಾಗುತ್ತದೆ.

ಆಯ್ಕೆ ಹೇಗೆ?

ನವೋದಯ ವಿದ್ಯಾಲಯಗಳಿಗೆ 6, 9 ಮತ್ತು 11ನೆಯ ತರಗತಿಯ ಅರ್ಹ ಮಕ್ಕಳು ಸೇರಬಹುದು. ಯಾವ ಜಿಲ್ಲೆಯಲ್ಲಿ ಜವಾಹರ ನವೋದಯ ವಿದ್ಯಾಲಯವಿದೆಯೋ ಆ ಜಿಲ್ಲೆಯ ಮಕ್ಕಳು ಮಾತ್ರ ಆಯಾಯಾ ಜಿಲ್ಲೆಯ ಶಾಲೆಗೆ ಸೇರಬಹುದು.

6ನೆಯ ತರಗತಿಗೆ ಸೇರಬಯಸುವ ಮಕ್ಕಳು ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ, ಸರ್ಕಾರಿ ಅನುದಾನಿತ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೂ ಶಾಲೆಯಲ್ಲಿ 5 ನೆಯ ತರಗತಿ ಓದಿರಬೇಕು. ಈ ಮಕ್ಕಳು ಸಾಮಾನ್ಯವಾಗಿ ಏಪ್ರಿಲ್‌ನಲ್ಲಿ ನಡೆಯುವ ಪ್ರತಿಭಾ ಪರೀಕ್ಷೆಗೆ ಹಾಜರಾಗಿ ಆಯ್ಕೆಯಾಗಬೇಕು.

ಗ್ರಾಮೀಣ ಭಾಗದ ಮಕ್ಕಳಿಗೆ ಅನುಕೂಲವಾಗುವಂತೆ, ಅರ್ಥವಾಗುವಂತೆ ಸರಳವಾಗಿ ಪರೀಕ್ಷೆ ನಡೆಸಲಾಗುತ್ತದೆ. ಎಲ್ಲ ಪ್ರಶ್ನೆಗಳೂ ಬಹು ಆಯ್ಕೆ ಪ್ರಶ್ನೆಗಳಾಗಿರುತ್ತವೆ.ಈ ಪರೀಕ್ಷೆಯ ಅವಧಿ 2 ಗಂಟೆಗಳು. ಪರೀಕ್ಷೆಯಲ್ಲಿ 3 ಭಾಗಗಳಿರುತ್ತವೆ. ಅವುಗಳೆಂದರೆ ಬೌದ್ಧಿಕ ಸಾಮರ್ಥ್ಯ, ಅಂಕಗಣಿತ ಮತ್ತು ಭಾಷೆ. ಈ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಿಗೆ ಕನ್ನಡವೂ ಸೇರಿದಂತೆ 20 ಭಾಷಾ ಮಾಧ್ಯಮಗಳಲ್ಲಿ ಉತ್ತರಿಸಬಹುದು.

6 ಮತ್ತು 9ನೆಯ ತರಗತಿಗೆ ನೇರವಾಗಿ ಸೇರಬಯಸುವ ಮಕ್ಕಳು ಸಾಮಾನ್ಯವಾಗಿ ಫೆಬ್ರುವರಿಯಲ್ಲಿ ನಡೆಯುವ ಪ್ರತಿಭಾ ಪರೀಕ್ಷೆಗೆ ಹಾಜರಾಗಿ ಆಯ್ಕೆಯಾಗಬೇಕು. ಈ ವರ್ಷ ಪ್ರತಿಭಾ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದ್ದು, ಅಕ್ಟೋಬರ್ 15 ಅರ್ಜಿ ಸಲ್ಲಿಸಲು ಕೊನೆಯ ದಿನ. ಈ ವಿಭಾಗದಲ್ಲಿ ಪರೀಕ್ಷೆ ಬರೆಯುವ ಮಕ್ಕಳು ಸರ್ಕಾರಿ, ಸರ್ಕಾರಿ ಅನುದಾನಿತ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೂ ಶಾಲೆಯಲ್ಲಿ 8ನೆಯ ತರಗತಿಯನ್ನು ಓದಿರಬೇಕು.

ಈ ಪರೀಕ್ಷೆಯು ಇಂಗ್ಲಿಷ್ ಅಥವಾ ಹಿಂದಿ ಮಾಧ್ಯಮದಲ್ಲಿರುತ್ತದೆ. ಪರೀಕ್ಷೆಯ ಅವಧಿ ಎರಡೂವರೆ ಗಂಟೆಗಳು. ಮಕ್ಕಳು ಇಂಗ್ಲಿಷ್, ಹಿಂದಿ, ಗಣಿತ ಮತ್ತು ವಿಜ್ಞಾನ ವಿಷಯಗಳ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿರುತ್ತದೆ.

10ನೆಯ ತರಗತಿ ಅಂಕಗಳ ಆಧಾರದ ಮೇಲೆ 11ನೆಯ ತರಗತಿಯ ಉಳಿದ ಸೀಟುಗಳನ್ನು ತುಂಬಿಸಿಕೊಳ್ಳಲಾಗುವುದು. ಹೆಚ್ಚಿನ ವಿವರಗಳಿಗಾಗಿ ಈ ಜಾಲತಾಣವನ್ನು ನೋಡಿರಿ: https://navodaya.gov.in/nvs/en/Home1

(ಮುಂದಿನ ಸಂಚಿಕೆಯಲ್ಲಿ : ನವೋದಯ ವಿದ್ಯಾಲಯ ಪ್ರತಿಭಾ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಹೇಗಿರುತ್ತದೆ ಮತ್ತು ಪ್ರಶ್ನೆಗಳಿಗೆ ಉತ್ತರಿಸುವ ಸರಳ ವಿಧಾನಗಳು)

ಲೇಖಕರು ಸ್ಮಾರ್ಟ್ ಸೆರೆಬ್ರಮ್ ಪ್ರೈ.ಲಿಮಿಟೆಡ್‌ನ ನಿರ್ದೇಶಕರು

661 ಶಾಲೆಗಳು

ದೇಶದಾದ್ಯಂತ ಇರುವ ಒಟ್ಟು 661 ಜವಾಹರ ನವೋದಯ ವಿದ್ಯಾಲಯಗಳಲ್ಲಿ 31 ವಿದ್ಯಾಲಯಗಳು ಕರ್ನಾಟಕದಲ್ಲಿವೆ.

ಪ್ರತಿವರ್ಷ ದೇಶದಾದ್ಯಂತ 51,000 ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

❦ ಸುಭಾಷಿತ ❦

ನಮ್ಮ ಅಸುರಕ್ಷಿತ ಆಲೋಚನೆಗಳು ನಮಗೆ ಹಾನಿ ಮಾಡಿದಷ್ಟು, ಬದ್ಧ ವೈರಿಯೂ ಮಾಡಲಾರ.

-ಗೌತಮ ಬುದ್ಧ

ಭೂಕಬಳಿಕೆ ನಿಷೇಧ ಕಾಯ್ದೆ ತಿದ್ದುಪಡಿ ರಾಜ್ಯ ಸರ್ಕಾರದ ನಡೆ ಅಪಾಯಕಾರಿ

ರಾಜ್ಯದಲ್ಲಿ ಸರ್ಕಾರಿ ಜಮೀನುಗಳ ಕಬಳಿಕೆಯನ್ನು ತಡೆಯಲು ಜಾರಿಗೊಳಿಸಿದ್ದ 'ಕರ್ನಾಟಕ ಭೂಕಬಳಿಕೆ ನಿಷೇಧ ಕಾಯ್ದೆ-2011'ಕ್ಕೆ ತಿದ್ದುಪಡಿ ತರಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಉದ್ದೇಶದಿಂದ ವಿಧಾನ ಸಭೆಯಲ್ಲಿ ತಿದ್ದುಪಡಿ ಮಸೂದೆಯೊಂದನ್ನು ಮಂಡಿಸಿದೆ. ಬೆಂಗಳೂರು ಮತ್ತು ಸುತ್ತಮುತ್ತ ಸರ್ಕಾರಿ ಜಮೀನು ಭಾರಿ ಪ್ರಮಾಣದಲ್ಲಿ ಒತ್ತುವರಿ ಆಗಿರುವುದನ್ನು ಶಾಸಕ ಎ.ಟಿ. ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿಯು ದಶಕದ ಹಿಂದೆಯೇ ಗುರುತಿಸಿತ್ತು. ಬೆಂಗಳೂರು ನಗರ ಜಿಲ್ಲೆಯೊಂದರಲ್ಲೇ ಆಗಿನ ದರದಲ್ಲಿ ₹ 40,000 ಕೋಟಿ ಮೌಲ್ಯದ ಸರ್ಕಾರಿ ಜಮೀನು ಕಬಳಿಕೆಯಾಗಿದೆ ಎಂದು ಸಮಿತಿ ವರದಿ ನೀಡಿತ್ತು. ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆಯು ರಾಜ್ಯದ ಉದ್ದಗಲಕ್ಕೂ ಲಕ್ಷಾಂತರ ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿರುವುದನ್ನು ಪತ್ತೆಹಚ್ಚಿತ್ತು. ಜಂಟಿ ಸದನ ಸಮಿತಿ ಮತ್ತು ನಂತರದ ಕಾರ್ಯಪಡೆಯ ಶಿಫಾರಸಿನಂತೆ ಭೂಕಬಳಿಕೆ ನಿಷೇಧ ಕಾಯ್ದೆಯನ್ನು ರೂಪಿಸಿ, ಜಾರಿಗೊಳಿಸಲಾಗಿತ್ತು. ರೈತರಿಗೆ ಕಿರುಕುಳವಾಗುತ್ತಿದೆ ಎಂಬ ಕಾರಣವನ್ನು ಮುಂದಿಟ್ಟುಕೊಂಡು ಈ ಕಾಯ್ದೆಗೆ ತಿದ್ದುಪಡಿ ತರಲು ರಾಜ್ಯ ಸರ್ಕಾರ ಹೊರಟಿದೆ. ಬಿಬಿಎಂಪಿ ಹಾಗೂ ರಾಜ್ಯದ ಎಲ್ಲ ನಗರಪಾಲಿಕೆಗಳ ವ್ಯಾಪ್ತಿಯ ಹೊರಗಿನ ಪ್ರದೇಶಗಳನ್ನು ಈ ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡುವ ಪ್ರಸ್ತಾವ ತಿದ್ದುಪಡಿ ಮಸೂದೆಯಲ್ಲಿದೆ. ಕಾಯ್ದೆಯ ವ್ಯಾಪ್ತಿಯಿಂದ ಕೈಬಿಡುವ ಪ್ರದೇಶಗಳಲ್ಲಿನ ಭೂಕಬಳಿಕೆಗೆ ಸಂಬಂಧಿಸಿದಂತೆ 'ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ'ದಲ್ಲಿ ದಾಖಲಾಗಿರುವ ಎಲ್ಲ ಪ್ರಕರಣಗಳನ್ನು ಮುಕ್ತಾಯಗೊಳಿಸುವ ಅಂಶವೂ ಮಸೂದೆಯಲ್ಲಿ ಸೇರಿದೆ. ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ರೈತರಿಗೆ ರಕ್ಷಣೆ ನೀಡುವ ನೆಪದಲ್ಲಿ ತರುತ್ತಿರುವ ಈ ತಿದ್ದುಪಡಿಯು ರಾಜ್ಯದಲ್ಲಿ ಭೂಕಬಳಿಕೆಗೆ ಪ್ರಚೋದನೆ ನೀಡುವ, ಅರಣ್ಯ ಮತ್ತು ಪರಿಸರಕ್ಕೆ ಹಾನಿ ಉಂಟುಮಾಡುವ ಸಾಧ್ಯತೆ ಇದೆ.

ಈ ತಿದ್ದುಪಡಿಯು ಭೂಕಬಳಿಕೆಗೆ ಪ್ರಚೋದನೆ ನೀಡುವ, ಅರಣ್ಯ ಮತ್ತು ಪರಿಸರಕ್ಕೆ ಹಾನಿ ಉಂಟು ಮಾಡುವ ಸಾಧ್ಯತೆ ಇದೆ

'ಭೂ ಮಾಫಿಯಾವು ನಗರಗಳ ಪರಿಧಿಯನ್ನು ದಾಟಿ ಹೋಗಿ ದಶಕಗಳೇ ಕಳೆದಿವೆ. ನಗರಗಳಿಗೆ ಹೊಂದಿಕೊಂಡಿರುವ ಸಣ್ಣ ಪಟ್ಟಣಗಳು, ಗ್ರಾಮ ಕೇಂದ್ರಗಳಲ್ಲೂ ಭೂ ಕಬಳಿಕೆ ಬೃಹತ್ ಪ್ರಮಾಣದಲ್ಲಿ ನಡೆಯುತ್ತಿದೆ' ಎಂಬುದು ಬಾಲಸುಬ್ರಮಣಿಯನ್ ಅವರ ಅಭಿಪ್ರಾಯ. ನಕಲಿ ದಾಖಲೆಗಳನ್ನು ಸೃಷ್ಟಿಸಿ ಬೆಲೆಬಾಳುವ ಸರ್ಕಾರಿ ಜಮೀನುಗಳನ್ನು ಕಬಳಿಸುವವರನ್ನು ಕಾನೂನಿನ ವ್ಯಾಪ್ತಿಗೆ ತಂದು ಶಿಕ್ಷೆಗೆ ಗುರಿಪಡಿಸುವುದು ಈ ಕಾಯ್ದೆಯ ಪ್ರಮುಖ ಆಶಯವಾಗಿತ್ತು. ಆದರೆ, ಅಂತಹ ಭೂಗಳ್ಳರ ವಿರುದ್ಧ ಈ ಕಾಯ್ದೆಯನ್ನು ಪ್ರಯೋಗಿಸಿದ ಉದಾಹರಣೆಯೇ ಇಲ್ಲ. ಅರಣ್ಯ ಪ್ರದೇಶವೂ ಸೇರಿದಂತೆ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ರೈತರನ್ನೇ ಗುರಿಯಾಗಿಸಿ ಈ ಕಾಯ್ದೆಯನ್ನು ಬಳಕೆ ಮಾಡಿರುವುದೇ ಹೆಚ್ಚು. ಕಾಯ್ದೆಯ ಅನುಷ್ಠಾನದಲ್ಲಿ ಅಧಿಕಾರಿಗಳಿಂದ ಆಗಿರುವ ಲೋಪವನ್ನು ಸರಿಪಡಿಸುವ ಬದಲಿಗೆ ಕಾಯ್ದೆಯನ್ನೇ ದುರ್ಬಲಗೊಳಿಸುವ ಕೆಲಸ ಮಾಡಲು ಸರ್ಕಾರ ಹೊರಟಿದೆ. ರೈತರು ಜೀವನೋಪಾಯಕ್ಕಾಗಿ ಮಾಡಿಕೊಂಡಿರುವ ಮೂರು ಎಕರೆವರೆಗಿನ ಒತ್ತುವರಿಯನ್ನು ತೆರವುಗೊಳಿಸದಿರುವ ನಿರ್ಧಾರವನ್ನು ರಾಜ್ಯ ಸರ್ಕಾರವು 2015ರಲ್ಲೇ ಕೈಗೊಂಡಿತ್ತು. ಅಂತಹ ರೈತರ ವಿರುದ್ಧ ಭೂಕಬಳಿಕೆ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಿಸುವುದನ್ನು ತಡೆಯುವ ಅವಕಾಶ ಸರ್ಕಾರದ ಕೈಯಲ್ಲೇ ಇತ್ತು. ಈಗಲೂ, ಅಂತಹ ರೈತರ ವಿರುದ್ಧದ ಪ್ರಕರಣಗಳನ್ನಷ್ಟೇ ಕೈಬಿಡುವ ತೀರ್ಮಾನ ಮಾಡುವುದಕ್ಕೂ ಅವಕಾಶ ಇದೆ. ಸರ್ಕಾರಿ ಜಮೀನುಗಳ ಕಬಳಿಕೆಯು ಬಿಬಿಎಂಪಿ ಮತ್ತು ಇತರ ನಗರಪಾಲಿಕೆಗಳ ವ್ಯಾಪ್ತಿಗೆ ಸೀಮಿತವಾಗಿ ಉಳಿದಿಲ್ಲ. ಈ ಪ್ರದೇಶಗಳ ಆಚೆಗೂ ರಿಯಲ್ ಎಸ್ಟೇಟ್ ಚಟುವಟಿಕೆಗಳು ಹೆಚ್ಚಿದಂತೆ ಜಮೀನಿನ ದರವೂ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಅಂತಹ ಎಲ್ಲ ಪ್ರದೇಶಗಳಲ್ಲೂ ರಿಯಲ್ ಎಸ್ಟೇಟ್ ಮಾಫಿಯಾದ ಕೈಗಳು ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಿ ಜಮೀನು ಕಬಳಿಸುತ್ತಿರುವುದು ರಹಸ್ಯವೇನಲ್ಲ. ರಾಜ್ಯದ ವಿವಿಧೆಡೆ ನಡೆದಿರುವ ಸರ್ಕಾರಿ ಜಮೀನುಗಳ ಒತ್ತುವರಿಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ಸಂಗ್ರಹಿಸಿರುವ ಅಂಕಿಅಂಶಗಳೇ ಇದನ್ನು ರುಜುವಾತುಪಡಿಸುತ್ತವೆ.

ಗ್ರಾಮೀಣ ಪ್ರದೇಶದಲ್ಲಿ ಬಗರ್‌ಹುಕುಂ ಸಾಗುವಳಿಯ ಪ್ರಮಾಣ ಹೆಚ್ಚುತ್ತಲೇ ಇದೆ. ಭೂಕಬಳಿಕೆ ನಿಷೇಧ ಕಾಯ್ದೆ ಜಾರಿಯಾದ ಬಳಿಕ ಅರಣ್ಯ ಜಮೀನಿನ ಒತ್ತುವರಿಗೆ ತುಸು ಕಡಿವಾಣ ಬಿದ್ದಿತ್ತು. ಆದರೂ, ರಾಜ್ಯದಲ್ಲಿ ಸುಮಾರು 2 ಲಕ್ಷ ಎಕರೆಯಷ್ಟು ಅರಣ್ಯ ಜಮೀನು ಒತ್ತುವರಿಯಾಗಿದೆ ಎಂದು ಅರಣ್ಯ ಇಲಾಖೆ ಹೇಳುತ್ತಿದೆ. ಈಗ ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತ ಸಾಗುವಳಿಯ ಸಕ್ರಮಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸುವ ತೀರ್ಮಾನದ ಬೆನ್ನಲ್ಲೇ ಭೂಕಬಳಿಕೆ ನಿಷೇಧ ಕಾಯ್ದೆಯ ವ್ಯಾಪ್ತಿಯಿಂದ ಗ್ರಾಮೀಣ ಪ್ರದೇಶಗಳನ್ನು ಹೊರಗಿಡುವುದು ಅರಣ್ಯ ಪ್ರದೇಶದ ಒತ್ತುವರಿಗೆ ಎಡೆಮಾಡುವ ಸಂದೇಹವೂ ಇದೆ. 'ಈ ತಿದ್ದುಪಡಿ ಪ್ರಸ್ತಾವವು, ಸರ್ಕಾರ ಭೂಮಾಫಿಯಾದ ನಿಯಂತ್ರಣಕ್ಕೆ ಸಿಲುಕಿದೆ ಎಂಬುದನ್ನು ತೋರಿಸುತ್ತಿದೆ. ಕೆಲವು ವರ್ಷಗಳಿಂದ ಈಚೆಗೆ ₹ 2 ಲಕ್ಷ ಕೋಟಿ ಮೌಲ್ಯದ ಭೂಕಬಳಿಕೆಯನ್ನು ಸಕ್ರಮಗೊಳಿಸಲಾಗಿದೆ. ಈಗಿನ ತಿದ್ದುಪಡಿಯು ಭೂಗಳ್ಳರ ಪಾಲಿಗೆ ವರದಾನ ಆಗಲಿದೆ' ಎಂದು ಶಾಸಕ ಎ.ಟಿ. ರಾಮಸ್ವಾಮಿ ವಿಧಾನಸಭೆಯ ಕಲಾಪದಲ್ಲೇ ಹೇಳಿದ್ದಾರೆ. ಈ ತಿದ್ದುಪಡಿಯ ಕೆಟ್ಟ ಪರಿಣಾಮ ರಾಜ್ಯದ ಪಶ್ಚಿಮಘಟ್ಟಗಳ ಮೇಲೂ ಆಗಲಿದೆ. ಅನಧಿಕೃತ ಸಾಗುವಳಿ ಮತ್ತು ಇತರ ಸ್ವರೂಪದ ಒತ್ತುವರಿಯಿಂದಾಗಿ ಪಶ್ಚಿಮಘಟ್ಟ ಪ್ರದೇಶ ತೊಂದರೆಯಲ್ಲಿದೆ. ಈಗ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಜಮೀನುಗಳ ಒತ್ತುವರಿಗೆ ಮುಕ್ತ ಅವಕಾಶ ಕಲ್ಪಿಸುವಂತಹ ತೀರ್ಮಾನವು ರಾಜ್ಯದ ಅರಣ್ಯ ಪ್ರದೇಶವು ವ್ಯಾಪಕವಾಗಿ ಅತಿಕ್ರಮಣಕ್ಕೆ ಒಳಗಾಗಲು ಕಾರಣವಾಗಬಹುದು. ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ಎದುರಿಸುತ್ತಿರುವ ಹೊತ್ತಿನಲ್ಲೇ ಪರಿಸರಕ್ಕೆ ಮಾರಕವಾದ ಇಂತಹ ನಿಲುವನ್ನು ರಾಜ್ಯ ಸರ್ಕಾರ ತಾಳುತ್ತಿರುವುದು ದುರದೃಷ್ಟಕರ. ವಿಧಾನಸಭಾ ಚುನಾವಣೆಯನ್ನು ಗುರಿಯಾಗಿಟ್ಟುಕೊಂಡು ಜನರನ್ನು ಓಲೈಸಲು ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ ಎಂಬ ಅನುಮಾನವೂ ಇದೆ. ಈ ವಿಚಾರದಲ್ಲಿ ವಿರೋಧ ಪಕ್ಷಗಳೂ ಜವಾಬ್ದಾರಿಯಿಂದ ವರ್ತಿಸಬೇಕು. ಕಾಯ್ದೆ ತಿದ್ದುಪಡಿಯ ಸಾಧಕ-ಬಾಧಕಗಳ ಕುರಿತು ವಿಸ್ತೃತವಾಗಿ ಚರ್ಚಿಸಿದ ಬಳಿಕವೇ ತೀರ್ಮಾನಕ್ಕೆ ಬರಬೇಕು. ಇಲ್ಲವಾದರೆ ಮುಂದಿನ ಪೀಳಿಗೆಯು ನಮ್ಮನ್ನು ಶಪಿಸುವಂತಾಗುತ್ತದೆ.

ದಿನದ ಟ್ವೀಟ್

ಪರೀಕ್ಷಾ ಸಮಯ...

ಚಂಡೀಗಡ ವಿಶ್ವವಿದ್ಯಾಲಯದಲ್ಲಿ ನಡೆದಿರುವ ಬೆಳವಣಿಗೆ ಅತ್ಯಂತ ದುರದೃಷ್ಟಕರ. ನಮ್ಮ ಸಹೋದರಿಯರಿಗೆ ಬೆಂಬಲವಾಗಿ ನಿಂತು, ಜವಾಬ್ದಾರಿಯುತ ಸಮಾಜಕ್ಕೆ ನಿದರ್ಶನವಾಗಬೇಕಾದ ಸಮಯ ಈಗ ಬಂದಿದೆ. ಇದು ನಮಗೆ ಪರೀಕ್ಷಾ ಸಮಯವೇ ವಿನಾ ಸಂತ್ರಸ್ತರಿಗೆ ಅಲ್ಲ. ಜವಾಬ್ದಾರಿಯುತವಾಗಿ ವರ್ತಿಸಿ.

ಸೋನು ಸೂದ್, ಚಲನಚಿತ್ರ ನಟ

ಕಿಡಿನುಡಿ

ನಿಯಮ ಉಲ್ಲಂಘಿಸುವವರನ್ನು ಸಚಿವರು ಬೆಂಬಲಿಸುತ್ತಿರುವುದೇಕೆ? ಟೋಯಿಂಗ್ ಸ್ಥಗಿತಗೊಳಿಸಿದ ನಂತರ ಪಾದಚಾರಿ ಮಾರ್ಗಗಳು ಮತ್ತು ಇತರ ಸ್ಥಳಗಳಲ್ಲಿ ವಾಹನ ನಿಲುಗಡೆ ಪ್ರಮಾಣ ತೀವ್ರವಾಗಿದೆ. ಅಪರಾಧಿಗಳು ಅನುಭವಿಸಲಿ, ಪಾದಚಾರಿಗಳಲ್ಲಿ ಸುರಕ್ಷಿತ ಭಾವನೆ ಮೂಡಲಿ ಮತ್ತು ಸಂಚಾರ ವ್ಯವಸ್ಥೆ ಸುಗಮವಾಗಲಿ.

(ಬೆಂಗಳೂರಿನಲ್ಲಿ ಸದ್ಯಕ್ಕೆ ಟೋಯಿಂಗ್ ಪುನರಾರಂಭಿಸುವ ಇರಾದೆ ಇಲ್ಲ ಎಂಬ ರಾಜ್ಯ ಗೃಹ ಸಚಿವರ ಹೇಳಿಕೆಗೆ ಪ್ರತಿಕ್ರಿಯೆ)

ಆನಂದ ಗುಂಡೂರಾವ್, ಬಿ-ಪ್ಯಾಕ್ ಸದಸ್ಯ

25 ವರ್ಷಗಳ ಹಿಂದೆ

ಶುಕ್ರವಾರ, 19-9-1997

● **ಬೆಂಗಳೂರು ಉದ್ವಿಗ್ನ: ಸ್ಥಿತಿ ನಿಯಂತ್ರಣದಲ್ಲಿ**

ಬೆಂಗಳೂರು, ಸೆಪ್ಟೆಂಬರ್ 18– ಜಯನಗರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ನಿನ್ನೆ ನಡೆದ ಹಿಂಸಾಚಾರದಿಂದ ಉಂಟಾಗಿದ್ದ ಉದ್ವಿಗ್ನ ಪರಿಸ್ಥಿತಿಯು ನಿಯಂತ್ರಣಕ್ಕೆ ಬಂದಿದೆ ಎಂದು ತಿಳಿಸಿದ ಗೃಹ ಖಾತೆಯ ರಾಜ್ಯ ಸಚಿವ ರೋಷನ್ ಬೇಗ್ ಅವರು, ಹಿಂಸಾಚಾರ ಹಾಗೂ ಪೊಲೀಸ್ ಗೋಲಿಬಾರ್‌ನಿಂದ ಮೃತಪಟ್ಟ ನಾಲ್ವರ ಕುಟುಂಬದವರಿಗೆ ಇಂದು ಇಲ್ಲಿ ಪರಿಹಾರ ಪ್ರಕಟಿಸಿದರು.

ಗಲಭೆನಿರತ ಗುಂಪಿನ ಇರಿತದಿಂದ ಮೃತಪಟ್ಟ ಪೊಲೀಸ್ ಪೇದೆಯ ಕುಟುಂಬ ವರ್ಗದವರಿಗೆ 2 ಲಕ್ಷ ರೂಪಾಯಿ, ಗೋಲಿಬಾರ್‌ನಿಂದ ಸತ್ತ ಇಬ್ಬರು ಹಾಗೂ ಹೃದಯಾಘಾತದಿಂದ ಮೃತರಾದ ಬಸ್ ಪ್ರಯಾಣಿಕರೊಬ್ಬರ ಕುಟುಂಬ ವರ್ಗದವರಿಗೆ ತಲಾ 1 ಲಕ್ಷ ರೂಪಾಯಿ ಪರಿಹಾರ ನೀಡಲಾಗುತ್ತದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 19-9-1972

● **ನಕಲಿ ಮಾರ್ಕ್ಸ್‌ಕಾರ್ಡ್ ಪ್ರಕರಣ: ರಾಜ್ಯದಲ್ಲಿ 48 ಜನರ ಬಂಧನ**

ಬೆಂಗಳೂರು, ಸೆಪ್ಟೆಂಬರ್ 18– ಮೈಸೂರು ವಿಶ್ವವಿದ್ಯಾಲಯದ ವಿವಿಧ ಪರೀಕ್ಷೆಗಳ ಹಾಗೂ ರಾಜ್ಯದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಕಲಿ ಮಾರ್ಕ್ಸ್‌ಕಾರ್ಡುಗಳ ಚಲಾವಣೆಯ ಅನೇಕ ಪ್ರಕರಣಗಳು ಬೆಳಕಿಗೆ ಬಂದಿವೆ.

ಮೈಸೂರು ವಿಶ್ವವಿದ್ಯಾಲಯದ ಪಿ.ಯು.ಸಿ., ಬಿ.ಎಸ್ಸಿ. ಮುಂತಾದ ಪರೀಕ್ಷೆಗಳಿಗೆ ಸಂಬಂಧಿಸಿದ 65 ನಕಲಿ ಮಾರ್ಕ್ಸ್‌ಕಾರ್ಡುಗಳನ್ನು ವಶಪಡಿಸಿಕೊಂಡ ರಾಜ್ಯದ ಸಿ.ಐ.ಡಿ. ಪೊಲೀಸರು, ಇಬ್ಬರು ವಿದ್ಯಾರ್ಥಿನಿಯರು ಹಾಗೂ ಮಂಡ್ಯದ ಕಲ್ಲಹಳ್ಳಿಯ ಶಿವಸ್ವಾಮಿ ಎಂಬುವರು ಸೇರಿದಂತೆ ಒಟ್ಟು 48 ಮಂದಿಯನ್ನು ಬಂಧಿಸಿದ್ದಾರೆ.

ತನ್ನ ಶಾಸಕರನ್ನು ಕಳೆದುಕೊಳ್ಳುತ್ತಿರುವುದಕ್ಕೆ ಕಾಂಗ್ರೆಸ್ ಕೊರಗಬೇಕಿಲ್ಲ, ಖುಷಿಪಡಬೇಕಿದೆ

ಶಾಸಕರನ್ನು ಖರೀದಿಸುತ್ತಿರುವುದಲ್ಲ, ಕದಿಯುತ್ತಿರುವುದು

ಅನುರಣನ

ನಾರಾಯಣ ಎ.

ಭಾರತದಲ್ಲಿ ಷೇರು ಮಾರುಕಟ್ಟೆ, ಕೃಷಿ ಮಾರುಕಟ್ಟೆ, ಜಾನುವಾರು ಮಾರುಕಟ್ಟೆ ಇತ್ಯಾದಿಗಳು ಇರುವಂತೆಯೇ ಶಾಸಕರ ಅರ್ಥಾತ್ ಎಂಎಲ್‌ಎ ಮಾರುಕಟ್ಟೆಯೂ ಇದೆಯಷ್ಟೆ. ವಾಸ್ತವದಲ್ಲಿ ಇದನ್ನು ಮಾರುಕಟ್ಟೆ ಅಂತ ಕರೆಯುವುದು ಸೂಕ್ತವಲ್ಲ. ಆ ವಿಚಾರಕ್ಕೆ ಮತ್ತೆ ಬರೋಣ. ಭಾರತವನ್ನು ವಿಶ್ವಗುರುವಾಗಿಸುವ ಪ್ರಯತ್ನದ ಭಾಗವಾಗಿ ಇತರ ಎಲ್ಲಾ ಮಾರುಕಟ್ಟೆಗಳು ವಿಶೇಷವಾದ ಉತ್ತೇಜನವನ್ನು ಪಡೆಯುತ್ತಿರುವಂತೆಯೇ ವಾರ್ಷಿಕ ಕೋಟಿ ಕೋಟಿ ವಹಿವಾಟು ಇರುವ ಶಾಸಕರ ಮಾರುಕಟ್ಟೆಯ ವ್ಯವಹಾರಗಳು ಕೂಡ ಏಳೆಂಟು ವರ್ಷಗಳಿಂದ ಉಚ್ಛ್ರಾಯ ಸ್ಥಿತಿಯಲ್ಲಿವೆ.

ಈ ಮಾರುಕಟ್ಟೆಯಲ್ಲಿ ಹೋದ ವಾರ ಗೋವಾ ರಾಜ್ಯದ ಎಂಟು ಮಂದಿ ಕಾಂಗ್ರೆಸ್ ಶಾಸಕರ ಸಗಟು ಖರೀದಿ ನಡೆದದ್ದು ಒಂಥರಾ ಕೆಲವು ಉದ್ಯಮಪತಿಗಳು ನಡೆಸುವ ಕಾರ್ಪೊರೇಟ್ ಟೇಕ್‌ಓವರ್‌ಗಳ ರೀತಿ ದೊಡ್ಡ ಸುದ್ದಿಯಾಗಿ, ಅದರ ಬಗ್ಗೆ ಮಾಧ್ಯಮ ಚರ್ಚೆಗಳು ಇನ್ನೂ ಮುಗಿದಿಲ್ಲ.

ವಾಣಿಜ್ಯಶಾಸ್ತ್ರದ ವಿದ್ಯಾರ್ಥಿಗಳನ್ನೇ ಒಂದು ಕ್ಷಣ ಅವಾಕ್ಕಾಗಿಸುವಂತಹ ವ್ಯವಹಾರ ಈ ಶಾಸಕರ ಮಾರುಕಟ್ಟೆಯದ್ದು. ಯಾಕೆಂದರೆ, ಯಾವುದೇ ವಾಣಿಜ್ಯ ವ್ಯವಹಾರವನ್ನು ಮಾರಾಟ ಅಂತ ಕರೆಯಬೇಕಾದರೆ ಅಲ್ಲಿ ಒಬ್ಬ ಮಾರಾಟಗಾರ ಇರಬೇಕು, ಓರ್ವ ಖರೀದಿದಾರ ಇರಬೇಕು ಮತ್ತು ಸರಕುಗಳು ಇರಬೇಕು.

ಈಗ ಈ ಶಾಸಕರ ಸಗಟು ಅಥವಾ ಚಿಲ್ಲರೆ ಮಾರಾಟದ ವಿಷಯಕ್ಕೆ ಬರೋಣ. ಇಲ್ಲಿ ಶಾಸಕರನ್ನು ಖರೀದಿಸುವ ಪಕ್ಷ ಯಾವುದು ಅಂತ ಎಲ್ಲರಿಗೂ ಗೊತ್ತಿರುತ್ತದೆ. ಹಾಗಾಗಿ ಖರೀದಿದಾರ ಯಾರು ಅಂತ ಸ್ಪಷ್ಟವಾಯಿತು. ಸರಕುಗಳು ಯಾವುವು ಅಂತಲೂ ಗೊತ್ತು. ಮಾರಾಟವಾಗುವ ಶಾಸಕರನ್ನು ಸರಕುಗಳು ಅಂತ ಗುರುತಿಸಬಹುದು. ಆದರೆ ಮಾರಾಟ ಮಾಡಿದ್ದು ಯಾರು? ಇಲ್ಲಿ ಮಾರಾಟಗಾರರೇ ಇಲ್ಲವಲ್ಲ.

ಒಂದು ರಾಜಕೀಯ ಪಕ್ಷವು ಇನ್ನೊಂದು ರಾಜಕೀಯ ಪಕ್ಷದ ಶಾಸಕರನ್ನು ಖರೀದಿಸುತ್ತದೆ. ಆದರೆ ಆ ಇನ್ನೊಂದು ರಾಜಕೀಯ ಪಕ್ಷ ತನ್ನ ಶಾಸಕರನ್ನು ಮಾರಿಲ್ಲ. ಒಂದು ರಾಜಕೀಯ ಪಕ್ಷವು ಮಾರದೇ ಇರುವ ಸರಕುಗಳನ್ನು ಇನ್ನೊಂದು ಪಕ್ಷವು ಖರೀದಿಸಿದ್ದು ಹೇಗೆ? ಕಾನೂನು ಪ್ರಕಾರ, ಮತ್ತೊಬ್ಬರಿಗೆ ಸೇರಿದ ಸರಕನ್ನು ಸರಕಿನ ಮಾಲೀಕರ ಸಮ್ಮತಿ ಇಲ್ಲದೆ ಯಾರೋ ತಮ್ಮದಾಗಿಸಿಕೊಂಡಿದ್ದಾರೆ ಎಂದರೆ ಅದು ಕಳ್ಳತನ ಎಂದಾಗುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ, ಈ ಶಾಸಕರ ಮಾರಾಟದಲ್ಲಿ ನಡೆಯುವುದು ಖರೀದಿಯಲ್ಲ, ಇದು ಅಪ್ಪಟ ಕಳ್ಳತನ. ಆದರೆ, ಇದು ದುಡ್ಡು ನೀಡಿ ಕದಿಯಬೇಕಾದ ವಿಲಕ್ಷಣ ಕಳ್ಳತನ. ಹಾಗಾಗಿ ಶಾಸಕರ ಮಾರುಕಟ್ಟೆಯಲ್ಲಿ ನಡೆಯುವ ಯಾವತ್ತೂ ವ್ಯವಹಾರವನ್ನು ಪಕ್ಷಾಂತರ ಅಂತ ಕರೆಯುವುದಾಗಲೀ ಶಾಸಕರ ಖರೀದಿ ಅಂತ ಕರೆಯುವುದಾಗಲೀ ಮಾಡಿದರೆ ಅದು ವಸ್ತುಸ್ಥಿತಿಯನ್ನು ತಪ್ಪಾಗಿ ವ್ಯಾಖ್ಯಾನಿಸಿದ ಹಾಗೆ ಆಗುತ್ತದೆ.

ಸರಿಯಾದ ಪದಪ್ರಯೋಗ ಮಾಡಿ ಹೇಳುವುದಾದರೆ, ಎಂಟು ವರ್ಷಗಳಿಂದ ದೇಶದಲ್ಲಿ ಭಾರಿ ಪ್ರಮಾಣದಲ್ಲಿ ಶಾಸಕರನ್ನು ಕದಿಯುವ ಕೆಲಸ ನಿರಾತಂಕವಾಗಿ ನಡೆಯುತ್ತಿದೆ. ಇದು ಭಾರತದ ಹೊಸ ರಾಜಕೀಯ ಸಂಸ್ಕೃತಿ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇದು, ಪ್ರಾಚೀನ ಭಾರತೀಯ ಸಂಸ್ಕೃತಿಯ ಪ್ರಕಾರ ನಡೆದುಕೊಳ್ಳುತ್ತಿದ್ದೇವೆ ಅಂತ ಹೇಳುವವರು ಮಾಡುತ್ತಿರುವ ಅರ್ವಾಚೀನ ರಾಜಕೀಯ.

ಶಾಸಕರು ತಮ್ಮನ್ನು ತಾವೇ ಮಾರಿಕೊಳ್ಳುತ್ತಿರುವ ವ್ಯವಹಾರ ಇದಾಗಿರುವುದರಿಂದ ಇಲ್ಲಿ ಮಾರಾಟಗಾರರೇ ಇಲ್ಲ ಎಂದು ಹೇಗೆ ಹೇಳುವುದು ಅಂತ ಕೆಲವರು ಸವಾಲು ಹಾಕಬಹುದು. ಅದಕ್ಕೆ ಹೀಗೆ ಉತ್ತರಿಸಬಹುದು. ಯಾವುದೇ ಸರಕು ತನ್ನನ್ನು ತಾನೇ ಮಾರಿಕೊಳ್ಳಲು ಆಗುವುದಿಲ್ಲ. ತನ್ನನ್ನು ತಾನೇ ಮಾರಿಕೊಳ್ಳಲು ಸಾಧ್ಯ ಅಂತ ಒಪ್ಪಿಕೊಂಡರೂ, ಇಲ್ಲಿ ಶಾಸಕರು ಅರ್ಥಾತ್ ಚುನಾಯಿತ ಪ್ರತಿನಿಧಿಗಳು ಎಂದರೆ ಅವರು ಸ್ವತಂತ್ರ ಸರಕುಗಳಲ್ಲ. ಅವರು ಯಾವ ಪಕ್ಷದ ಅಭ್ಯರ್ಥಿಗಳಾಗಿ ಚುನಾವಣೆ ಗೆದ್ದರೋ ಆ ಪಕ್ಷದ ಸ್ವಾಮಿತ್ವಕ್ಕೆ ಸೇರಿದವರು. ಅದೇ ವೇಳೆ ಅವರನ್ನು ಒಂದು ಪಕ್ಷದ ಅಭ್ಯರ್ಥಿಗಳು ಅಂತ ಗುರುತಿಸಿ ಮತ ನೀಡಿದ ಮತದಾರರ ಸ್ವಾಮಿತ್ವಕ್ಕೆ ಸೇರಿದವರು. ಆದುದರಿಂದ ಪ್ರಜಾತಂತ್ರ ರಾಜಕೀಯದ ಸೂಕ್ಷ್ಮ ನಿಯಮಗಳನ್ನು ಅನ್ವಯಿಸಿ ವಿಶ್ಲೇಷಣೆ ಮಾಡಿದ್ದೇ ಆದಲ್ಲಿ, ಯಾವುದೇ ಪಕ್ಷದ ಚುನಾಯಿತ ಸದಸ್ಯ ಏಕಕಾಲಕ್ಕೆ ಆ ಪಕ್ಷದ ಮತ್ತು ಚುನಾಯಿಸಿದ ಮತದಾರರ ಸಂಯುಕ್ತ ಸ್ವಾಮಿತ್ವಕ್ಕೆ ಸೇರಿದವರಾಗಿರುತ್ತಾರೆ. ಈ ಈರ್ವರು ಸ್ವಾಮಿತ್ವದಾರರ ಅನುಮತಿ ಇಲ್ಲದೆ ಇವರನ್ನು ಇನ್ನೊಂದು ಪಕ್ಷ ತನ್ನದಾಗಿಸಿಕೊಳ್ಳುವ ಪ್ರಕ್ರಿಯೆಯನ್ನು ಕಳ್ಳತನ ಎನ್ನದೆ ವಿಧಿಯಿಲ್ಲ.

ಇವು ಶಾಸಕರ ಮಾರುಕಟ್ಟೆಗೆ ಸಂಬಂಧಿಸಿದ ವಾಣಿಜ್ಯ ಶಾಸ್ತ್ರೀಯ ಮತ್ತು ಪ್ರಜಾತಾಂತ್ರಿಕ ಆಯಾಮಗಳಾದರೆ, ಇದರ ರಾಜಕೀಯ ಆಯಾಮವನ್ನು ಕೂಡಾ ಸ್ವಲ್ಪ ಭಿನ್ನವಾಗಿ ನೋಡುವ ಅಗತ್ಯವಿದೆ.

ಸದ್ಯ ದೇಶದ ಶಾಸಕರ ಮಾರುಕಟ್ಟೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಶಾಸಕರ ಖರೀದಿ ಭರ್ಜರಿಯಾಗಿ ನಡೆಯುತ್ತಿರುವುದರಿಂದ ಆ ಪಕ್ಷಕ್ಕೆ ಭಾರಿ ಹಿನ್ನಡೆ ಆಗುತ್ತಿದೆ ಎನ್ನುವಂತಹ ಅಭಿಪ್ರಾಯಗಳು ಕೇಳಿಬರುತ್ತಿವೆ. ಅದೇ ರೀತಿ ಆ ಪಕ್ಷದ ಬಗ್ಗೆ ಕೆಲವರು ತೀರಾ ಮರುಕಪಡುತ್ತಿದ್ದಾರೆ. ಆದರೆ ನಿಜಕ್ಕೂ ಕಾಂಗ್ರೆಸ್ಸಿಗೆ (ಅಥವಾ ಈ ರೀತಿ ಶಾಸಕರನ್ನು ಕಳೆದುಕೊಳ್ಳುವ ಯಾವುದೇ ಪಕ್ಷಕ್ಕೆ) ಇದೊಂದು ಹಿನ್ನಡೆಯಲ್ಲ. ಕಾಂಗ್ರೆಸ್ ಸಂಭ್ರಮಿಸಬೇಕಾದ ಬೆಳವಣಿಗೆ ಇದು. ಬಿಟ್ಟುಹೋದ ಶಾಸಕರು ತಮ್ಮ ಪ್ರತಿಸ್ಪರ್ಧಿ ಪಕ್ಷವನ್ನು ಸೇರಿಕೊಳ್ಳುತ್ತಿದ್ದಾರೆ ಎನ್ನುವ ವಿಚಾರವಾಗಿ ಆ ಪಕ್ಷ ಇನ್ನಷ್ಟು ಸಂಭ್ರಮಿಸಬೇಕು. ಯಾಕೆಂದರೆ, ಯಾವುದೇ ಒಂದು ಪಕ್ಷದ ವತಿಯಿಂದ ಗೆದ್ದ ನಂತರ ಅದರಿಂದ ವಲಸೆ ಹೋಗುವ ಶಾಸಕರು ಎಂತಹವರೆಂದರೆ, ಅವರಿಗೆ ಪಕ್ಷವನ್ನು ಕಟ್ಟಿಕೊಂಡು ಏನೂ ಆಗಬೇಕಿಲ್ಲ. ಅವರೆಲ್ಲಾ ಯಾವುದೇ ಪಕ್ಷದಿಂದ ಸ್ಪರ್ಧಿಸಿದರೂ ಸ್ವಂತ ಬಲದಿಂದ ಗೆದ್ದು ಬರಬಲ್ಲ ಪ್ರಭಾವಿ ಸ್ಥಳೀಯ ಸಾಮಂತರು. ಪಕ್ಷಕ್ಕೆ ಅವರ ಮೇಲೆ ಯಾವುದೇ ರೀತಿಯ ನಿಯಂತ್ರಣವೂ ಇಲ್ಲ.

ಈ ರೀತಿ ಪಕ್ಷದ ಹಂಗಿಲ್ಲದ, ಪಕ್ಷದಿಂದ ನಿಯಂತ್ರಿಸಲಾಗದ ಶಾಸಕರನ್ನು ಹೊಂದಿರುವುದು ಪಕ್ಷವೊಂದು ತೀರಾ ದುರ್ಬಲವಾಗಿರುವುದರ ಸಂಕೇತ. ಒಂದು ರಾಜಕೀಯ ಪಕ್ಷ ನಿಜಕ್ಕೂ ರಾಜಕೀಯ ಪಕ್ಷ ಅಂತ ಕರೆಸಿಕೊಳ್ಳಬೇಕಾದರೆ, ಆ ಪಕ್ಷ ತನ್ನ ಯೋಚನೆ, ಯೋಜನೆ, ತತ್ವಗಳ ಮೂಲಕ ಜನರನ್ನು ಪ್ರಭಾವಿಸಿ ತನ್ನ ಬಲದಿಂದ ತಾನು ಆರಿಸಿದ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬರುವ ತಾಕತ್ತನ್ನು ಹೊಂದಿರಬೇಕು. ತಾನು ಗೆಲ್ಲಲು ಪ್ರಬಲ ಸ್ಥಳೀಯ ಅಭ್ಯರ್ಥಿಗಳ ಪ್ರಭಾವವನ್ನು ಬಳಸಿಕೊಂಡರೆ ಅಥವಾ ಯಾವುದೋ ಒಬ್ಬ ನಾಯಕನ ವರ್ಚಸ್ಸನ್ನು ನಂಬಿಕೊಂಡರೆ ಅಂತಹ ಪಕ್ಷಗಳು ನಿಜವಾದ ರಾಜಕೀಯ ಪಕ್ಷಗಳೇ ಅಲ್ಲ. ಅಂತಹ ಪಕ್ಷಗಳಿದ್ದಲ್ಲಿ ಪ್ರಜಾತಂತ್ರಕ್ಕೆ ಅರ್ಥವೂ ಇಲ್ಲ.

ದುರದೃಷ್ಟವಶಾತ್ ಭಾರತದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಈ ದೌರ್ಬಲ್ಯದಿಂದ ಬಳಲುತ್ತಿವೆ. ಪಕ್ಷ ರಾಜಕಾರಣದಲ್ಲಿ ದೇಹವು ಬಾಲವನ್ನು ಅಲ್ಲಾಡಿಸುವ ಬದಲಿಗೆ ಬಾಲವೇ ದೇಹವನ್ನು ಅಲ್ಲಾಡಿಸುವ ಸ್ಥಿತಿ ಇದೆ. ಹಾಗಾಗಿ ಇಂತಹವರೆಲ್ಲಾ ಕಾಂಗ್ರೆಸ್ಸನ್ನು ಬಿಟ್ಟು ಹೋಗುತ್ತಿರುವುದು ಆ ಪಕ್ಷಕ್ಕೆ ನಿಜವಾದ ಅರ್ಥದಲ್ಲಿ ರಾಜಕೀಯ ಪಕ್ಷವಾಗಿ ಬೆಳೆಯಲು ಒದಗಿಬಂದ ಒಂದು ಅವಕಾಶ. ಈ ದೇಶದಲ್ಲಿ ಪ್ರತಿಯೊಂದು ಮತಕ್ಷೇತ್ರದಲ್ಲೂ ತನ್ನ ಪ್ರಭಾವವನ್ನು ಸ್ಥಾಪಿಸಿ, ತನ್ನ ನಿಯಂತ್ರಣದಲ್ಲಿರುವ ಅಭ್ಯರ್ಥಿಗಳನ್ನು ಬೆಳೆಸಿ ಗೆಲ್ಲಿಸುವ ಸಾಧ್ಯತೆಯೊಂದನ್ನು ಅನ್ವೇಷಿಸಲು ಒದಗಿಬಂದ ಅವಕಾಶ. ಕಾಂಗ್ರೆಸ್ ಅಥವಾ ಕಾಂಗ್ರೆಸ್ಸಿನಂತೆಯೇ ಶಾಸಕರನ್ನು ಕಳೆದುಕೊಳ್ಳುತ್ತಿರುವ ಪಕ್ಷಗಳು ಈ ರೀತಿ ಯೋಚಿಸದೇ ಹೋದರೆ ಅವುಗಳಿಗೆ ರಾಜಕೀಯ ಪಕ್ಷಗಳೆಂದು ಕರೆಸಿಕೊಳ್ಳುವ ಯೋಗ್ಯತೆಯೇ ಇಲ್ಲ ಅಂತ ಭಾವಿಸಬೇಕಾಗುತ್ತದೆ.

ಕಾಂಗ್ರೆಸ್ ಪಕ್ಷಕ್ಕೆ ಈ ಹಂತದಲ್ಲಾದರೂ ತನ್ನನ್ನು ತಾನು ನಿಜವಾದ ಅರ್ಥದ ರಾಜಕೀಯ ಪಕ್ಷ ಎನ್ನುವಂತೆ ಮುರಿದುಕಟ್ಟುವ ಉಮೇದೇನಾದರೂ ಇದ್ದರೆ ಅದು, ಬಿಟ್ಟು ಹೋಗಲು ಬಯಸುವ ಶಾಸಕರು ಮತ್ತು ಸಂಸದರಿಗೆ 'ದಯಮಾಡಿ ಆದಷ್ಟು ಬೇಗ ಹೋಗಿ' ಅಂತ ಕರೆ ನೀಡುವ ಅಗತ್ಯವಿದೆ. ಕಾಂಗ್ರೆಸ್ಸಿಗೆ ಇದು ಅಗತ್ಯವಿದೆ ಎನ್ನುವುದಕ್ಕಿಂತ ಹೆಚ್ಚಾಗಿ ಎಲ್ಲಾ ಪಕ್ಷಗಳು ಈ ರೀತಿ ಯೋಚಿಸುವುದು ಈ ದೇಶದ ಪ್ರಜಾತಂತ್ರದ ಉಳಿವಿನ ದೃಷ್ಟಿಯಿಂದ ಕೂಡಾ ಅಗತ್ಯ.

ಚುರುಮುರಿ

ತಾಕತ್ತಿಲ್ಲದ ಶ್ರೀಸಾಮಾನ್ಯ

• ಸುಮಂಗಲಾ

'ನನಗ ಎರಡು– ಮೂರು ಲಕ್ಷ ರೊಕ್ಕ ಕೊಡು, ನಾ ಒಂದು ಇ-ಹರಾಜಿನೊಳಗ ಭಾಗವಹಿಸ್ತೀನಿ' ಬೆಕ್ಕಣ್ಣನದು ಒಂದೇ ಸಮನೆ ಹಾರಾಟ.

ನಾನು ಹೌಹಾರಿಬಿಟ್ಟೆ. 'ಹಾಲಿಗೆ, ಗ್ಯಾಸಿಗೆ ರೊಕ್ಕ ಹೊಂದಿಸಾಕೇ ತ್ರಾಸು ಪಡಾಕೆಹತ್ತೀನಿ... ಲಕ್ಷಗಟ್ಟಲೆ ಎಲ್ಲಿಂದ ತರಲಿ?'

'ಮೋದಿಮಾಮನ ಉಡುಗೊರೆಗಳನ್ನ ಹರಾಜು ಹಾಕ್ತಾರಂತ. ಭಾರೀ ಬೆಲೆದು ಟಿಶರ್ಟು ಐತಂತ. ಮೋದಿಮಾಮನ ಹೆಸರನ್ನ ಬಂಗಾರದ ಎಳೆವಳಗ ನೇಯ್ದ ಕುರ್ತಾ ಐತಂತ. ನಾನೂ ಅದ್ಯಾವುದಾರ ಒಂದ್ ತಗಳೂಣು ಅಂದ್ರ ಎಲ್ಲಾದಕ್ಕೆ ಬ್ಯಾಡಂತೀ' ಬೆಕ್ಕಣ್ಣ ಕೊಸಗುಡುತ್ತಲೇ ಇತ್ತು. ನಾನು ಕ್ಯಾರೆ ಎನ್ನದೇ ಸುಮ್ಮನಿದ್ದೆ.

'ಹೋಗ್ಲಿ ಇಪ್ಪತ್ ಸಾವ್ರನಾದ್ರೂ ಕೊಡು. ದಿಲ್ಲೀ ಹೋಟೆಲ್ಲಿನಾಗೆ ಮೋದಿಮಾಮನ ಹುಟ್ಟಿದಹಬ್ಬಕ್ಕೆ ಅಂತ 56 ಇಂಚಿನ ಥಾಲಿ ಭೋಜನ ವ್ಯವಸ್ಥೆ ಮಾಡಿದಾರಂತ, ದಿಲ್ಲಿಗೆ ಹೋಗಿ 56 ಇಂಚಿನ ಮಾಂಸಾಹಾರದ ಥಾಲಿ ಉಂಡುಬರ್ತೀನಿ. ಅಕಸ್ಮಾತ್ ಅಲ್ಲಿ 8.5 ಲಕ್ಷದ ಲಾಟರಿ ಗೆದ್ದರೆ ಅದ್ರಾಗೆ ಅರ್ಧ ನಿನಗ ಕೊಡ್ತೀನಿ' ಎಂದು ಮತ್ತೆ ಗಂಟುಬಿದ್ದಿತು.

'ಒಳ್ಳೆ ಕಥೆ... ಆ ಥಾಲಿ ಉಂಡ್ರ ನಿಂದೇನು 56 ಇಂಚಿನ ಎದೆ ಆಗತೈತೇನು? ಇಲಿ, ಹೆಗ್ಗಣ ಹಿಡಿಯೂದು ಬಿಟ್ಟು ಒಣ ಕಾರುಬಾರು ನಡೆಸ್ತೀ' ಎಂದು ಬೈದಿದ್ದಕ್ಕೆ ಗುರುಗುಟ್ಟಿ ಸುಮ್ಮನಾಯಿತು.

'ಹೋಗ್ಲಿ... ಇಲ್ಲೇನೋ ಭಾರೀ ಆಫರ್ ಸೇಲ್ ನಡೆದೈತಂತ. ದಸರಾ, ದೀಪಾವಳಿಗಿಂತ ಮೊದಲೇ ಸೇಲ್ ಹಚ್ಯಾರ. ಅದಕ್ಕಾರೂ ಇಬ್ರೂ ಹೋಗೂಣೇನಾ?' ಎಂದು ಪೇಪರು ಹಿಡಿದು ಮೆತ್ತಗೆ ಕೇಳಿತು.

ಮನೆಗೆ ಬೇಕಾದ ಸಾಮಾನುಗಳು ಇವೆಯೇನೋ ಅಂತ ನೋಡಿದರೆ 'ಶಾಸಕಾಂಗಡಿ ಸೇಲ್, ಕಾರ್ಯಾಂಗಡಿ ಸೇಲ್' ಎಂದು ಬರೆದಿದ್ದ ಕಾರ್ಟೂನು ತೋರಿಸಿತು.

'ಇದೂ ನಮಗಲ್ಲಲೇ... ಶಾಸಕಾಂಗಡಿ ವಳಗ ಕೊಂಡುಕೊಳ್ಳೊ ತಾಕತ್ತು ಇರದು ನಮ್ಮ ಕುಬೇರ ಜನಪ್ರತಿನಿಧಿಗಳಿಗೆ. ಇನ್ನ ಕಾರ್ಯಾಂಗಡಿ ವಳಗ ಕೊಂಡುಕೊಳ್ಳೊ ತಾಕತ್ತು...'

'ನಿನ್ನಂಥ ಶ್ರೀಸಾಮಾನ್ಯರಿಗೆ ಆ ತಾಕತ್ತೂ ಇಲ್ಲ' ಎಂದು ನನ್ನ ತಲೆಗೆ ಮೊಟಕಿತು.

ಸಂಗತ

ಶಾಲೆಯಲ್ಲಿ ಮಾನಸಿಕ ಆರೋಗ್ಯದ ಕರೆಗಂಟೆ!

ಮಕ್ಕಳ ಮಾನಸಿಕ ಆರೋಗ್ಯದ ಬಗ್ಗೆ ಗಮನ ಹರಿಸುವುದು ಎಂದರೆ ಅದು ಇಡೀ ಸಮಾಜದ ಮಾನಸಿಕ ಆರೋಗ್ಯಕ್ಕೆ ಪ್ರಾಮುಖ್ಯ ನೀಡಿದಂತೆ

• ಡಾ. ಕೆ.ಎಸ್.ಪವಿತ್ರ

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ), ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ ಶಾಲೆಗಳಿಗೆ ನಿರ್ದೇಶಿಸಿದೆ. ಮಂಡಳಿಯು ಈ ವರ್ಷದ ಮಾರ್ಚ್‌ನಲ್ಲಿ ನಡೆಸಿದ ಎಲ್ಲಾ ರೀತಿಯ ಶಾಲೆಗಳ ಸಮೀಕ್ಷಾ ವರದಿ ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ. ಸಮೀಕ್ಷೆಯಲ್ಲಿ ಸರ್ಕಾರಿ- ಖಾಸಗಿ- ಕೇಂದ್ರೀಯ- ಸೈನಿಕ್ ಶಾಲೆ ಹೀಗೆ ವಿವಿಧ ಶಾಲೆಗಳ ಒಟ್ಟು ಮೂರೂವರೆ ಲಕ್ಷ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

ವೈಯಕ್ತಿಕ ಮತ್ತು ಸಾಮಾಜಿಕ ಒತ್ತಡಗಳ ಬಗೆಗೂ ಈ ಅಧ್ಯಯನವು ಮಾಹಿತಿಯನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿರುವುದು ವಿಶೇಷ. ಅಂತರ್ಜಾಲದಲ್ಲಿ ಲಭ್ಯವಿರುವ ವರದಿ ಹಲವು ಮುಖ್ಯ ವಿಷಯಗಳನ್ನು ಹೊರಹಾಕಿದೆ. ಹಲವು ಶಿಫಾರಸುಗಳನ್ನೂ ಮಾಡಿದೆ.

ಮಾಹಿತಿಪೂರ್ಣವಾಗಿದ್ದರೂ, ಅಧ್ಯಯನವನ್ನು ರೂಪಿಸಿದ ತಜ್ಞರು- ಮನೋವಿಜ್ಞಾನ- ವೈದ್ಯಕೀಯ ಸಂಸ್ಥೆಗಳ ಹೆಸರುಗಳು ನಮೂದಾಗಿಲ್ಲ ಎನ್ನುವುದು ಮಾತ್ರ ಅಚ್ಚರಿಯ ಸಂಗತಿ. ಎನ್‌ಸಿಇಆರ್‌ಟಿ ತಜ್ಞರ ಜೊತೆಗೆ ಮಕ್ಕಳ ಮನೋವಿಜ್ಞಾನಿ- ಮನೋವೈದ್ಯರ ಸಹಾಯವನ್ನು ತೆಗೆದುಕೊಂಡಿದ್ದರೆ ಅವರ ಉಲ್ಲೇಖದಿಂದ ವರದಿಯ ಅಧಿಕೃತತೆ ಮತ್ತಷ್ಟು ಹೆಚ್ಚುತ್ತಿತ್ತು.

ಮಕ್ಕಳ ಮಾನಸಿಕ ಆರೋಗ್ಯವನ್ನು ಗಮನಿಸುವಲ್ಲಿ, ವರ್ಧಿಸುವಲ್ಲಿ, ಈ ಸಂಬಂಧ ಸಹಾಯ ಮಾಡುವಲ್ಲಿ ಶಿಕ್ಷಕರ ಪಾತ್ರದ ಬಗ್ಗೆ ಒತ್ತು ನೀಡಿರುವುದು, ಭಾವನಾತ್ಮಕ ಸಾಕ್ಷರತೆ ಎನ್ನುವ ಪದದ ಬಗ್ಗೆ ಜನರ ಗಮನ ಸೆಳೆಯುವ ಪ್ರಯತ್ನವನ್ನು ವರದಿ ಮಾಡಿರುವುದು ಮುಖ್ಯವಾದ ಗಮನಾರ್ಹ ಅಂಶಗಳು.

ಆತಂಕಕಾರಿಯಾದ ಕೆಲವು ಪ್ರವೃತ್ತಿಗಳು ಈ ಅಧ್ಯಯನದಲ್ಲಿ ಕಂಡುಬಂದಿವೆ. ಇವು ನಿರೀಕ್ಷಿತವೇ. ಶೇ 81ರಷ್ಟು ವಿದ್ಯಾರ್ಥಿಗಳು ಪರೀಕ್ಷೆ, ಅಧ್ಯಯನ, ಫಲಿತಾಂಶಗಳ ಬಗೆಗೆ ಆತಂಕ ವ್ಯಕ್ತಪಡಿಸಿದ್ದಾರೆ. ಶೇ 43ರಷ್ಟು ಮಕ್ಕಳು ತಮ್ಮ ಮನಃಸ್ಥಿತಿಯಲ್ಲಿನ ಅತಿಯಾದ ಏರುಪೇರಿನ ಬಗ್ಗೆ ಹೇಳಿದ್ದಾರೆ. ಶೇ 51ರಷ್ಟು ಮಕ್ಕಳು ಆನ್‌ಲೈನ್‌ನಲ್ಲಿ ತಮಗೆ ಕಲಿಯಲು ಆದ ಕಷ್ಟಗಳ ಕುರಿತು ದಾಖಲಿಸಿದ್ದಾರೆ. ಇವುಗಳಲ್ಲದೆ ಏಕಾಗ್ರತೆಯ ಕೊರತೆ, ಆತಂಕ, ಪ್ರಶ್ನೆಗಳನ್ನು ಕೇಳಲು ಮುಜುಗರ ಮೊದಲಾದ ಸಂಗತಿಗಳ ಬಗೆಗೂ ಹೇಳಿದ್ದಾರೆ. ಶೇ 14ರಷ್ಟು ಮಕ್ಕಳು ಅತಿ ಉದ್ವೇಗ, ಕೋಪ ಮೊದಲಾದ ತೀವ್ರಭಾವನೆಗಳನ್ನು ಅನುಭವಿಸುತ್ತಿರುವುದಾಗಿ ತೋಡಿಕೊಂಡಿದ್ದಾರೆ.

ಮತ್ತೆ ಇವ್ಯಾವುವೂ ಅನಿರೀಕ್ಷಿತವೇನೂ ಅಲ್ಲ. ಪ್ರಸ್ತುತ ಅಧ್ಯಯನದಿಂದ ಉಪಯೋಗವೇನಾದರೂ ಆಗಬೇಕೆಂದರೆ ನಾವು ಇವುಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಸಮಾಜದ ವಿವಿಧ ವರ್ಗಗಳ ಮಧ್ಯೆ ಸಂಪರ್ಕ ಏರ್ಪಡಿಸಿ ಬೆಂಬಲಕ್ಕೆ ಹಲವು ದಾರಿಗಳನ್ನು ಹುಡುಕಬೇಕು. ಸುತ್ತಮುತ್ತಲ ಜಗತ್ತಿನಲ್ಲಿ ಇಂಥ ಕಾರ್ಯಕ್ರಮಗಳು ಹೇಗೆ ನಡೆದಿವೆ, ಹೇಗೆ ಪರಿಸ್ಥಿತಿ ಬದಲಾಗಿದೆ ಎಂಬುದನ್ನು ಗಮನಿಸಬೇಕು.

'ಇಷ್ಟು ಚಿಕ್ಕ ಮಕ್ಕಳಿಗೆ ಕೈ-ಕಾಲು ನೋವು ಎಂದರೇನು' ಎನ್ನುವ ಹಾಗೆಯೇ ನಾವು ಹಿರಿಯರು ಹೇಳುವ 'ಇಷ್ಟು ಚಿಕ್ಕ ವಯಸ್ಸಿನಲ್ಲಿ ಆತಂಕ, ಮನಸ್ಸಿನ ಬೇಸರ ಅಂದರೆ ಹೇಗೆ?' ಎನ್ನುವ ಮಾತೂ ಸಾಮಾನ್ಯವೇ. ಶಾಲೆಯಲ್ಲಿ ಭಾವನಾತ್ಮಕ ಸಮಸ್ಯೆಗಳನ್ನು ಎದುರಿಸುವ ಮಗು ತಲೆನೋವು, ವಾಂತಿ, ದಣಿವು, ಏದುಸಿರು, ಉಸಿರು ಕಟ್ಟುವಿಕೆಯಂತಹ ದೈಹಿಕ ಸಮಸ್ಯೆಗಳಿಂದ ನರಳಲು ಸಾಧ್ಯವಿದೆ. ಈ ಅಧ್ಯಯನವು ಶಿಕ್ಷಕರ ಪಾತ್ರಕ್ಕೆ ಒತ್ತು ನೀಡಿದಷ್ಟು ಪೋಷಕರ ಪಾತ್ರದ ಬಗ್ಗೆ ಗಮನಹರಿಸಿಲ್ಲ ಎನ್ನುವುದು ನ್ಯೂನತೆ.

ಜಗತ್ತಿನಾದ್ಯಂತ ಹಲವು ಮಾದರಿಗಳನ್ನು ಪ್ರಯೋಗಿಸಿ ನೋಡಲಾಗಿದೆ. ಓರೆಗಾನ್‌ನಲ್ಲಿ 'ಮಾನಸಿಕ ಆರೋಗ್ಯದ ದಿನ'ವನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ. ಅಂದರೆ ಕಾಯಿಲೆಗಳಿಂದ ನರಳುವಾಗ ಮಕ್ಕಳು ಶಾಲೆಗೆ ರಜೆ ಹಾಕಬಹುದಷ್ಟೆ. ಹಾಗೆಯೇ ಭಾವನಾತ್ಮಕವಾಗಿ ನರಳುವುದಕ್ಕೂ ರಜೆ ಹಾಕಬಹುದು! ಇದರಿಂದ 'ಸೋಮಾರಿತನ' ಹೆಚ್ಚುತ್ತದೆ ಎಂದು ಕೆಲವರೆನ್ನಬಹುದು. ಆದರೆ ಮಗು ಹಾಗೆ ರಜೆ ತೆಗೆದುಕೊಳ್ಳುವುದು ಶಾಲೆಯಲ್ಲಿ ದಾಖಲಾಗುತ್ತದೆ, ತತ್‌ಕ್ಷಣ ಮಗುವನ್ನು ಶಾಲೆಯ ಕೌನ್ಸೆಲಿಂಗ್ ವಿಭಾಗ ಪರಿಶೀಲಿಸುತ್ತದೆ. ಕೀನ್ಯಾದ ಶಾಲೆಗಳಲ್ಲಿ ಮಕ್ಕಳ ಮಾನಸಿಕ ಸಮಸ್ಯೆಗಳನ್ನು ಎದುರಿಸಲು ಯುವ ಕಾರ್ಯಕರ್ತರನ್ನು ತರಬೇತುಗೊಳಿಸುವ ಕಾರ್ಯ ನಡೆದಿದೆ. ಇದರಿಂದ ಹದಿಹರೆಯದವರ ಆತ್ಮಹತ್ಯೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆ ಉಂಟಾಗಿದೆ. ಇವೆರಡೂ ಯೋಜನೆಗಳಲ್ಲಿ ಶಾಲೆಗಳು ಮನೋವೈದ್ಯಕೀಯ ಕ್ಷೇತ್ರದ ಹಲವರನ್ನು, ಸಾಮಾಜಿಕ ಮುಂದಾಳುಗಳನ್ನು ಸೇರಿಸಿಕೊಂಡಿವೆ ಎನ್ನುವುದು ಗಮನಾರ್ಹ.

ಬಹು ಹಿಂದೆ ಕಬ್ಬಿನ ಗದ್ದೆಗಳಲ್ಲಿ, ಹುಲ್ಲಿನ ಗುಡಿಸಲುಗಳಲ್ಲಿ ಜನರು ವಾಸಿಸುವಾಗ, ಪ್ರಾಣಿಗಳೂ ಸಂತಸವಾಗಿದ್ದವಂತೆ. ಕೃಷಿ ಆರಂಭವಾಗಿ ಕಾಡನ್ನು ಆಕ್ರಮಿಸಿದಂತೆ ಭವಿಷ್ಯ ಮಸುಕಾಯಿತು. ನೀರಿನ ಸಮಸ್ಯೆ ತಲೆದೋರಿತು. ಸಿಂಹ ಬಂದು ಗರ್ಜಿಸಿತು, ನೀರಿಲ್ಲ! ಆನೆ ಘೀಳಿಟ್ಟಿತು, ನೀರಿಲ್ಲ! ಯಾವ ಪ್ರಾಣಿ ಕೂಗಿದರೂ ನೀರಿಲ್ಲ! ಕೊನೆಗೆ ಪುಟ್ಟ ಜಿಂಕೆ ಮರಿಯೊಂದು ಬಂದು 'ಎಲ್ಲರೂ ಒಟ್ಟಿಗೆ ಬನ್ನಿ, ಬಾವಿಯೊಂದನ್ನು ತೋಡೋಣ' ಎಂದಿತು. ನೀರು ಬಂತು! ಮನೋವೈದ್ಯಕೀಯ ಜಗತ್ತಿಗೆ ಇಂತಹ 'ಜಿಂಕೆಮರಿ'ಯೆಂದರೆ 'ಮಕ್ಕಳು'!

ಮಕ್ಕಳ ಮಾನಸಿಕ ಆರೋಗ್ಯದ ಬಗ್ಗೆ ಗಮನ ಹರಿಸುವುದು ಎಂದರೆ ಅದು ಇಡೀ ಸಮಾಜದ ಮಾನಸಿಕ ಆರೋಗ್ಯಕ್ಕೆ ಪ್ರಾಮುಖ್ಯ ನೀಡಿದಂತೆ ಎಂಬುದನ್ನೂ ನಾವು ಅರಿಯಬೇಕು. ಆಡಳಿತ ವ್ಯವಸ್ಥೆಯು ಅಧ್ಯಯನ ವರದಿಗಳನ್ನಷ್ಟೇ ನೀಡದೆ, ಅವುಗಳನ್ನು ಅನುಷ್ಠಾನಕ್ಕೆ ತರಲಿ ಎಂದು ಆಶಿಸೋಣ.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ಸರಳ ಜೀವನ ಮರೆತವರು

ನಮ್ಮ ಇಂದಿನ ರಾಜಕೀಯ ನಾಯಕರು ದುಬಾರಿ ಬೆಲೆಯ ಮಫ್ಲರ್, ಟಿಶರ್ಟ್, ಕೈಚೀಲ, ವಾಚು ಮುಂತಾದ ವಸ್ತುಗಳನ್ನು ಬಳಸುತ್ತಿರುವ ಬಗ್ಗೆ ಓದಿ (ಪ್ರ.ವಾ., ಸೆ. 14) ದಿಗ್ಭ್ರಮೆಗೊಂಡೆ. ಜನಪ್ರತಿನಿಧಿಗಳಾದವರು ಸರಳ ಜೀವನ ನಡೆಸುವ ಮೂಲಕ ಪ್ರಜೆಗಳಿಗೆ ಮಾದರಿಯಾಗಿರಬೇಕು ಎಂದು ಹೇಳುತ್ತಿದ್ದ ಅರೆನಗ್ನ ಫಕೀರ ಮಹಾತ್ಮ ಗಾಂಧಿಯವರ ಚಿತ್ರ ಕಣ್ಣಮುಂದೆ ಬಂತು. ರಾಷ್ಟ್ರಪಿತನನ್ನೇ ಮರೆತವರಿಗೆ ಆತನ ಮಾತುಗಳು ಎಂತು ನೆನಪಿನಲ್ಲಿ ಇದ್ದಾವು?

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ಅಳುಕಿಲ್ಲದವರ ಎದೆಯಲ್ಲಿ...

ನೇಮಕಾತಿ ಹಗರಣಗಳು ಒಂದರ ಬಳಿಕ ಮತ್ತೊಂದು ಎಂಬಂತೆ ಸಾಲುಸಾಲಾಗಿ ಹೊರಬೀಳುತ್ತಿವೆ. ಸರ್ಕಾರಿ ನೌಕರರು, ಅಧಿಕಾರಿಗಳು ಹಾಗೂ ರಾಜಕಾರಣಿಗಳ ಹೆಸರುಗಳು ಈ ಹಗರಣಗಳ ಜೊತೆ ತಳುಕು ಹಾಕಿಕೊಂಡಿವೆ. ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸುವ ಮತ್ತು ಭ್ರಷ್ಟಾಚಾರಮುಕ್ತಗೊಳಿಸುವ ಇಚ್ಛಾಶಕ್ತಿ ಯಾವ ರಾಜಕೀಯ ಪಕ್ಷದ ಮುಖಂಡರಿಗೂ ಇದ್ದಂತಿಲ್ಲ. ಇಂತಹ ಸನ್ನಿವೇಶದಲ್ಲಿ, ಅಕ್ರಮಗಳ ತನಿಖೆ– ವಿಚಾರಣೆಯನ್ನು ಅಧಿಕಾರಿಶಾಹಿಯಡಿಯಲ್ಲಿ ನಿರ್ವಹಿಸುವುದಕ್ಕಿಂತ ನ್ಯಾಯಾಂಗದ ನೇತೃತ್ವದಡಿ ನಡೆಸುವುದು ಸೂಕ್ತ. ಇದರಿಂದಾಗಿ ತನಿಖೆಗೆ ವಿಶ್ವಾಸಾರ್ಹತೆ ಬರುತ್ತದೆ, ವಿಚಾರಣೆಯೂ ತ್ವರಿತವಾಗಿ ಪೂರ್ಣಗೊಳ್ಳುತ್ತದೆ. ಅಲ್ಲದೆ, ಆರೋಪಿಗಳು ಎಂತಹ ಪ್ರಭಾವಿಗಳಾಗಿದ್ದರೂ ಶಿಕ್ಷೆಯಾಗುವ ಸಾಧ್ಯತೆ ಹೆಚ್ಚಿಗೆ ಇರುತ್ತದೆ. ಅಳುಕಿಲ್ಲದೇ ಅಕ್ರಮ ಎಸುಗುವವರ ಎದೆಯಲ್ಲಿ ಹೀಗಾದರೂ ನಡುಕ ಹುಟ್ಟಿಸಬಹುದೇನೊ.

ಮಂಜುನಾಥ ವಿ.ಜೆ., ವೇದಲವೇಣಿ, ಗೌರಿಬಿದನೂರು

ಎಳೆಯ ಮನಸ್ಸುಗಳ ಬಗ್ಗೆ ಚಿಂತಿಸಿ

ತಮಿಳುನಾಡಿನ ಗ್ರಾಮವೊಂದರಲ್ಲಿ ಅಂಗಡಿ ಮಾಲೀಕರೊಬ್ಬರು ದಲಿತ ಮಕ್ಕಳಿಗೆ ಜಾತಿಯ ಕಾರಣಕ್ಕೆ ಮಿಠಾಯಿ ನೀಡಲು ನಿರಾಕರಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. 'ನಿಮಗೆ ಯಾವುದೇ ತಿನಿಸು ನೀಡಬಾರದೆಂಬ ನಿರ್ಬಂಧವಿದೆ' ಎಂಬ ಅಂಗಡಿ ಮಾಲೀಕನ ಮಾತಿಗೆ, 'ನಿರ್ಬಂಧ! ಯಾವ ನಿರ್ಬಂಧ?' ಎಂದು ಬಾಲಕನೊಬ್ಬ ಮುಗ್ಧತೆಯಿಂದ ಕೇಳುವುದನ್ನು ನೋಡಿದಾಗ ಮನಸ್ಸು ಭಾರವಾಗಿ ಸಂಕಟವಾಗುತ್ತದೆ. ಶೂದ್ರರಿಗೆ, ಕೆಳ ವರ್ಗದವರಿಗೆ ಸಮಾನ ಹಕ್ಕುಗಳಿಗಾಗಿ ಶತಮಾನದ ಹಿಂದೆಯೇ ಹೋರಾಟ ಮಾಡಿದ ಪೆರಿಯಾರ್ ಅವರ ಜನ್ಮದಿನದಂದೇ ಈ ಪ್ರಕರಣ ನಡೆದಿರುವುದು ವಿಪರ್ಯಾಸ.

ಸವರ್ಣೀಯರು ಹಾಗೂ ಪರಿಶಿಷ್ಟರ ನಡುವೆ ನಮ್ಮ ಗ್ರಾಮೀಣ ಭಾಗದಲ್ಲಿ ಜಗಳಗಳಾಗುವುದು, ನಂತರ ಇತ್ಯರ್ಥ ಮಾಡಿಕೊಂಡು ಒಂದಾಗುವುದು ಸರ್ವೇ ಸಾಮಾನ್ಯ ಸಂಗತಿ. ಆದರೆ ಈ ಊರಿನಲ್ಲಿ ಈ ಜಗಳವು ಮಕ್ಕಳಿಗೆ ಮಿಠಾಯಿ ನಿರಾಕರಿಸುವ ಮಟ್ಟಕ್ಕೆ ಹೋಗಿರುವುದು ನಿಜಕ್ಕೂ ದುರಂತ. ಇಂತಹ ನಡೆಗಳು ಆ ಎಳೆಯ ಮನಸ್ಸುಗಳ ಮೇಲೆ ಎಂತಹ ಪರಿಣಾಮ ಬೀರಬಹುದು ಎಂದು ಗಂಭೀರವಾಗಿ ಆಲೋಚಿಸಬೇಕಾಗಿದೆ. ಸಮಾಜದಲ್ಲಿನ ಇಂತಹ ತಾರತಮ್ಯ ನಿವಾರಣೆಗೆ ಪ್ರಯತ್ನಪಡದೆ, ಮತಾಂತರ ನಿಷೇಧ ಕಾಯ್ದೆ ಜಾರಿಗೆ ತಂದು, ಕೇವಲ ಕಾನೂನಿನ ಮೂಲಕವೇ ಮತಾಂತರ ತಡೆಯಲು ಹೊರಟಿರುವುದು ಅರ್ಥಹೀನ.

ಡಾ. ಟಿ.ಜಯರಾಂ, ಕೋಲಾರ

ಎಲ್ಲದಕ್ಕೂ ರಾಜಕೀಯ ಬೆರೆಸುವುದೇಕೆ?

ಭಾರತದಲ್ಲಿ ಚೀತಾ ಸಂತತಿಯು ಏಳು ದಶಕಗಳ ಹಿಂದೆಯೇ ನಿರ್ನಾಮವಾಗಿದ್ದರೂ ಬೇರೆ ದೇಶಗಳಿಂದ ಚೀತಾಗಳನ್ನು ತರಲು ಗಂಭೀರ ಪ್ರಯತ್ನಗಳು ನಡೆಯಲೇ ಇಲ್ಲ ಎಂದು ಪ್ರಧಾನಿ ಹೇಳಿರುವುದು (ಪ್ರ.ವಾ., ಸೆ. 18) ರಾಜಕೀಯ ದುರುದ್ದೇಶದಿಂದ ಕೂಡಿದೆ. 2009ರಲ್ಲೇ ಆಫ್ರಿಕಾದಿಂದ ಚೀತಾಗಳನ್ನು ಭಾರತಕ್ಕೆ ತರುವ ಪ್ರಸ್ತಾವ ಸಿದ್ಧವಾಗಿತ್ತು. ಅದಕ್ಕಾಗಿ ₹ 50 ಕೋಟಿ ಮಂಜೂರಾಗಿತ್ತು. ಆದರೆ ಯೋಜನೆಗೆ ಸುಪ್ರೀಂ ಕೋರ್ಟ್ ತಡೆ ನೀಡಿತ್ತು. ಇವು ಪ್ರಯತ್ನಗಳಲ್ಲವೇ? 2014ರಿಂದ ಇವರದೇ ನೇತೃತ್ವದ ಸರ್ಕಾರ ಇದೆ. ಹಾಗಿದ್ದೂ ಚೀತಾ ತರಲು ಇವರಿಗೆ 8 ವರ್ಷ ಬೇಕಾಯಿತೇ? ಪ್ರತಿಯೊಂದು ವಿಷಯಕ್ಕೂ ಹೀಗೆ ರಾಜಕೀಯ ಬೆರೆಸುವ ಅಗತ್ಯವಿಲ್ಲ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ದಲಿತರಿಗೆ ವೇದಗಣಿತ ಮತ್ತು ಹಿಂದುತ್ವದ ಬಲೆ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳಿಗೆ ಗ್ರಾಮ ಪಂಚಾಯಿತಿಗಳ ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಪಿ) ಮತ್ತು ಗಿರಿಜನ ಉಪಯೋಜನೆ (ಟಿಎಸ್‌ಪಿ) ನಿಧಿಯಲ್ಲಿ ಒಂದು ಲಕ್ಷದವರೆಗೆ ಖರ್ಚು ಮಾಡಿ ವೇದಗಣಿತವನ್ನು ಕಲಿಸಲಾಗುವುದು ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ. ಇದು, ದಲಿತರನ್ನು ಬ್ರಾಹ್ಮಣ್ಯೀಕರಣಕ್ಕೆ ಒಳಪಡಿಸುವ ಬಹಳ ದೊಡ್ಡ ಸಂಚು. ಅತ್ಯಂತ ಖಂಡನೀಯ. ಸಾವಿರಾರು ವರ್ಷ ಮಡಿಮೈಲಿಗೆಯ ಹೆಸರಲ್ಲಿ ಜ್ಞಾನವನ್ನು ಬಂಧಿಸಿಟ್ಟು ದಲಿತರು ಮತ್ತು ಮಹಿಳೆಯರನ್ನು ವಂಚಿಸಿದವರು ಈಗ ಅವರಿಗೆ ಏಕಾಏಕಿ ವೇದಗಣಿತ ಕಲಿಸುತ್ತೇವೆ ಎನ್ನುವುದು, ದಲಿತರನ್ನು ಹಿಂದುತ್ವದ ಬಲೆಯೊಳಕ್ಕೆ ಕೆಡವಿಕೊಳ್ಳಲು ಹೆಣೆದಿರುವ ನಾಗಪುರದ ರಾಷ್ಟ್ರೀಯ ಷಡ್ಯಂತ್ರದ ಭಾಗವೇ ಸರಿ.

ಅಂತರರಾಷ್ಟ್ರೀಯ ಜ್ಞಾನವರ್ತುಲದಲ್ಲಿ ಯಾವ ಮೌಲ್ಯವಾಗಲೀ ಅನ್ವಯಿಕತೆಯಾಗಲೀ ಉದ್ಯೋಗದ ಲಭ್ಯತೆಯಾಗಲೀ ಇಲ್ಲದ ವೇದಗಣಿತವನ್ನು ನಮ್ಮ ತಲೆಗೆ ತುರುಕಲು ಬರಬೇಡಿ. ಅದು ನಿಮ್ಮಲ್ಲೇ ಇರಲಿ. ಅದನ್ನು ನಾವು ಗೌರವಿಸುತ್ತೇವೆ. ಆದರೆ ದಲಿತರಿಗೆ ಬೇಕಿರುವುದು ಸದ್ಯ ಚಾಲ್ತಿಯಲ್ಲಿರುವ ಮತ್ತು ಜಗತ್ತಿನಾದ್ಯಂತ ಸಾರ್ವತ್ರಿಕವಾಗಿರುವ ಗಣಿತ, ಜ್ಞಾನವಿಜ್ಞಾನಗಳು ಮಾತ್ರ. ಅವುಗಳನ್ನು ಪರಿಣಾಮಕಾರಿಯಾಗಿ ಮಕ್ಕಳಿಗೆ ಕಲಿಸಲು ಸಮರ್ಥ ಶಿಕ್ಷಕರನ್ನು ನೇಮಿಸಿ. ಶಾಲಾ ಪರಿಸರವನ್ನು ಸರಿಪಡಿಸಿ. ಮಂತ್ರಿಗಳೆ, ನಿಮಗೆ ದಲಿತರ ಏಳಿಗೆಯ ಬಗ್ಗೆ ನಿಜವಾದ ಕಾಳಜಿಯಿದ್ದರೆ ದಲಿತ ಚಿಂತಕರು, ಹೋರಾಟಗಾರರ ಸಭೆ ಕರೆದು ಚರ್ಚಿಸಿ ಸಲಹೆ ಪಡೆಯಿರಿ. ಆ ಮುಖಾಂತರ ಯೋಜನೆಗಳನ್ನು ರೂಪಿಸಿ ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ದಕ್ಷ ವ್ಯಕ್ತಿಗೆ ಅಧಿಕಾರ ಕೊಡಿ. ಅದಕ್ಕೂ ಮೊದಲು, ದಲಿತರಿಗಾಗಿ ಬಜೆಟ್ಟಿನಲ್ಲಿ ಮೀಸಲಾಗಿಟ್ಟಿದ್ದ ₹ 5,000 ಕೋಟಿಯನ್ನು ದಲಿತರಿಗಾಗಿ ಬಳಸದೆ ಬೇರೆ ಯೋಜನೆಗಳಿಗೆ ಯಾಕೆ ವರ್ಗಾಯಿಸಲಾಯಿತು ಎಂಬುದರ ಬಗ್ಗೆ ಸ್ಪಷ್ಟೀಕರಣ ಕೊಡಿ.

ಎಂ.ಗುರುಮೂರ್ತಿ, ಬಿ.ಎ.ಕಾಟ್ಕೆ, ಶಿವಮೊಗ್ಗ, **ಫಕೀರಪ್ಪ ಮುಂಡಗೋಡ, ಗಂಗಾಧರಪ್ಪ**, ಚಿಕ್ಕಬಳ್ಳಾಪುರ, **ಹನುಮಂತಪ್ಪ ಕಾಕರಗಲ್**, ರಾಯಚೂರು, **ವೆಂಕಟೇಶ್**, ಮಂಡ್ಯ, ಕರ್ನಾಟಕ ದಲಿತ ಸಂಘರ್ಷ ಸಮಿತಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚೀತಾ ಬಂದಾಯ್ತು ಮುಂದೇನು...

ಭಾರತದ ಕಾಡಿಗೆ ಚೀತಾವನ್ನು ಮರುಪರಿಚಯಿಸುವ (ರಿಇಂಟ್ರಡ್ಯೂಸ್) ಪ್ರಕ್ರಿಯೆ ಒಂದೆರಡು ವರ್ಷಗಳದ್ದಲ್ಲ. ಚೀತಾವನ್ನು ಭಾರತಕ್ಕೆ ತರುವುದಕ್ಕೂ ಮೊದಲು ಹತ್ತಾರು ವರ್ಷಗಳ ಕಾರ್ಯಗಳು ನಡೆದಿವೆ. ಅದರ ಆಧಾರದಲ್ಲಿ ಈಗ ಮಧ್ಯ ಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ನಮೀಬಿಯಾದಿಂದ ಎಂಟು ಚೀತಾಗಳನ್ನು ತರಲಾಗಿದೆ. ಈ ಯೋಜನೆಯ ಪೂರ್ಣ ಅನುಷ್ಠಾನಕ್ಕೆ ಇನ್ನೂ 40 ವರ್ಷಗಳು ಬೇಕು. ಚೀತಾವನ್ನು ಭಾರತದ ಅರಣ್ಯಕ್ಕೆ ಮರುಪರಿಚಯಿಸಬೇಕೇ ಬೇಡವೇ ಎಂಬುದನ್ನು ನಿರ್ಧರಿಸುವ ಸಂಬಂಧ ಅಧ್ಯಯನಗಳು 1990ರ ದಶಕದ ಕೊನೆಯಲ್ಲಿ ಆರಂಭವಾಗಿದ್ದವು. ಈ ಸಂಬಂಧ 2001ರಿಂದ 2007ರ ಮಧ್ಯೆ ತಜ್ಞರ ಹಲವು ವರದಿಗಳು ಸಲ್ಲಿಕೆಯಾಗಿವೆ. ಇವುಗಳ ಆಧಾರದಲ್ಲಿ 'ಪ್ರಾಜೆಕ್ಟ್ ಚೀತಾ'ವನ್ನು 2009ರಲ್ಲಿ ಅಂತಿಮಗೊಳಿಸಲಾಗಿತ್ತು. ಎಲ್ಲಾ ಪ್ರಕ್ರಿಯೆಗಳು ಮತ್ತು ಸುಪ್ರೀಂ ಕೋರ್ಟ್‌ನಲ್ಲಿನ ಅಡೆತಡೆಗಳನ್ನು ನಿವಾರಿಸಿಕೊಂಡು 2022ರಲ್ಲಿ ಆಫ್ರಿಕಾದ ನಮೀಬಿಯಾದಿಂದ ಚೀತಾಗಳನ್ನು ಭಾರತಕ್ಕೆ ತರಲಾಗಿದೆ

ಹಲವು ತಿಂಗಳು ಬಯಲು ಬಂಧನ ವಾಸ

ಚೀತಾಗಳನ್ನು ಅರಣ್ಯಕ್ಕೆ ಬಿಡುವ ಮೊದಲ ಹಂತವು ಅತ್ಯಂತ ಮಹತ್ವದ್ದು. ಈ ಎಂಟು ಚೀತಾಗಳನ್ನು ನೇರವಾಗಿ ಅರಣ್ಯಕ್ಕೆ ಬಿಡುವುದಿಲ್ಲ. ಅರಣ್ಯ ಪ್ರದೇಶದಲ್ಲೇ ಬೇಲಿ ನಿರ್ಮಿಸಿ, ಅವುಗಳನ್ನು ಬಯಲು ಬಂಧನದಲ್ಲಿ ಇರಿಸಲಾಗುತ್ತದೆ. ಆ ಅರಣ್ಯ ಪ್ರದೇಶದ ಪರಿಸರದ ಬಗ್ಗೆ ಅವುಗಳಿಗೆ ಪರಿಚಯವಾದ ನಂತರ ಅವನ್ನು ಅರಣ್ಯಕ್ಕೆ ಬಿಡಲಾಗುವುದು. ಈ ಪ್ರಕ್ರಿಯೆಯನ್ನು 'ಸಾಫ್ಟ್ ರಿಲೀಸ್' ಎಂದು ಕರೆಯಲಾಗುತ್ತದೆ. ಸಾಫ್ಟ್ ರಿಲೀಸ್‌ನಲ್ಲಿ ಚೀತಾಗಳ ಬದುಕುಳಿಯುವ ಸಾಧ್ಯತೆಯ ಪ್ರಮಾಣ ಶೇ 67ರಷ್ಟಿರುತ್ತದೆ. ಹೀಗಾಗಿ ಈ ವಿಧಾನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಚೀತಾಗಳನ್ನು ಇರಿಸಲು 6 ಚದರ ಕಿ.ಮೀ. ವ್ಯಾಪ್ತಿಯ ಬಯಲು ಬಂಧನ ಪ್ರದೇಶವನ್ನು ನಿರ್ಮಿಸಲಾಗಿದೆ. ಅದರಲ್ಲೇ ಪ್ರತಿ ಚೀತಾಗೂ ಪ್ರತ್ಯೇಕ ಜಾಗವನ್ನು ನಿರ್ಮಿಸಲಾಗಿದೆ. ಚೀತಾದ ವಯಸ್ಸು ಮತ್ತು ಗಾತ್ರ–ತೂಕದ ಆಧಾರದಲ್ಲಿ ಅವುಗಳ ಜಾಗದ ವ್ಯಾಪ್ತಿಯನ್ನು ನಿಗದಿ ಮಾಡಲಾಗಿದೆ.

ಎಂಟು ಚಿರತೆಗಳಿಗಾಗಿ ರಚಿಸಲಾಗಿರುವ ಏಳು ಪ್ರತ್ಯೇಕವಾಸ ಆವರಣಗಳು



0.7 ಚದರ ಕಿ.ಮೀ. ಚೀತಾವೊಂದಕ್ಕೆ ಸಿಗಲಿರುವ ಅತ್ಯಂತ ಚಿಕ್ಕ ಪ್ರದೇಶದ ವ್ಯಾಪ್ತಿ

1.1 ಚದರ ಕಿ.ಮೀ. ಚೀತಾವೊಂದಕ್ಕೆ ಸಿಗಲಿರುವ ಅತ್ಯಂತ ದೊಡ್ಡ ಪ್ರದೇಶದ ವ್ಯಾಪ್ತಿ

- ಚೀತಾಗಳು ಪರಸ್ಪರ ಕಿತ್ತಾಡಬಾರದು ಎಂಬ ಉದ್ದೇಶದಿಂದ ಅವುಗಳನ್ನು ಬಯಲು ಬಂಧನದಲ್ಲೂ ಪ್ರತ್ಯೇಕವಾಗಿ ಇರಿಸಲಾಗಿದೆ
- ಈ ಬಯಲು ಬಂಧನದಲ್ಲಿ ಚೀತಾಗಳನ್ನು ಕನಿಷ್ಠ ಒಂದು ತಿಂಗಳು ಮತ್ತು ಗರಿಷ್ಠ 2 ತಿಂಗಳವರೆಗೆ ಇರಿಸಲಾಗುತ್ತದೆ. ಇದು ಸಪಾಟಾದ ಬಯಲು ಪ್ರದೇಶವಾಗಿದ್ದು, ಹಲವು ಕಿ.ಮೀ. ದೂರದವರೆಗೂ ಚೀತಾಗಳು ದೃಷ್ಟಿ ಹಾಯಿಸಲು ಸಾಧ್ಯವಾಗುತ್ತದೆ
- ಬಯಲು ಬಂಧನದ ಅವಧಿಯಲ್ಲಿ ಚೀತಾಗಳು ಸ್ಥಳೀಯ ಪರಿಸರವನ್ನು ಪರಿಚಯ ಮಾಡಿಕೊಳ್ಳುತ್ತವೆ. ಆನಂತರ ಮೂರು ಗಂಡು ಚೀತಾಗಳನ್ನು ಮೊದಲು ಅರಣ್ಯ ಪ್ರದೇಶಕ್ಕೆ ಬಿಡಲಾಗುತ್ತದೆ. ಅವು ಅರಣ್ಯ ಪ್ರದೇಶವನ್ನು ಸುತ್ತಾಡಿ, ತಮ್ಮ ವ್ಯಾಪ್ತಿಯನ್ನು ಗುರುತಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತದೆ. ಇದಕ್ಕೆ ಹಲವು ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಈ ಅವಧಿಯಲ್ಲಿ ಗಂಡು ಚೀತಾಗಳು, ಹೆಣ್ಣು ಚೀತಾಗಳ ಸಾಂಗತ್ಯಕ್ಕಾಗಿ ಬಯಲು ಬಂಧನ ಪ್ರದೇಶಕ್ಕೇ ಬರಬೇಕಾಗುತ್ತದೆ

ಚೀತಾ ಆವಾಸಕ್ಕೆ ಯೋಗ್ಯವಾದ ಸ್ಥಳಗಳು

ಬಲಿ ಪ್ರಾಣಿ

ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಚೀತಾಗಳ ಆಹಾರಕ್ಕೆ ಲಭ್ಯವಿರುವ ಬಲಿ ಪ್ರಾಣಿಗಳಲ್ಲಿ ಚುಕ್ಕೆಜಿಂಕೆಗಳೇ ಪ್ರಧಾನ ಎಂದು ಗುರುತಿಸಲಾಗಿದೆ. ಈ ಉದ್ಯಾನದಲ್ಲಿ ಚುಕ್ಕೆಜಿಂಕೆಗಳ ಸಾಂದ್ರತೆ ಉತ್ತಮ ಮಟ್ಟದಲ್ಲಿದೆ. ಪ್ರತಿ ಚದರ ಕಿ.ಮೀ.ನಲ್ಲಿ 38.48 ಚುಕ್ಕೆಜಿಂಕೆಗಳಿವೆ. ಈ ಸಾಂದ್ರತೆಯನ್ನು 51.58ಕ್ಕೆ ಹೆಚ್ಚಿಸಲು ಅವಕಾಶವಿದೆ. ಹೀಗಾಗಿ ಚೀತಾಗಳಿಗೆ ಆಹಾರದ ಕೊರತೆ ಉಂಟಾಗುವುದಿಲ್ಲ ಎಂದು ಅಂದಾಜಿಸಲಾಗಿದೆ.



ಹತ್ತು ವರ್ಷಗಳ ಕಣ್ಗಾವಲು

ಕುನೊ ರಾಷ್ಟ್ರೀಯ ಉದ್ಯಾನವು 748 ಚದರ ಕಿ.ಮೀ. ಪ್ರದೇಶದಲ್ಲಿ ವ್ಯಾಪಿಸಿದೆ. ಇಲ್ಲಿರುವ ಹುಲ್ಲುಗಾವಲು ಮತ್ತು ಬಲಿ ಪ್ರಾಣಿಗಳ ಸಾಂದ್ರತೆಯನ್ನು ಪರಿಗಣಿಸಿದರೆ, ಇಲ್ಲಿ 21 ಚೀತಾಗಳು ಮಾತ್ರ ಇರಲು ಸಾಧ್ಯ. ಈಗ ಎಂಟು ಚೀತಾಗಳನ್ನು ಮಾತ್ರ ಇಲ್ಲಿಗೆ ತರಲಾಗಿದ್ದು, ಮುಂದಿನ ಐದು ವರ್ಷಗಳಲ್ಲಿ ಅವುಗಳ ಸಂಖ್ಯೆಯನ್ನು 21ಕ್ಕೆ ಏರಿಸಲಾಗುತ್ತದೆ.

ಹಂತ ಎರಡು; ಚೀತಾ 36

ಕುನೊ ರಾಷ್ಟ್ರೀಯ ಉದ್ಯಾನ ಮತ್ತು ಸುತ್ತಲಿನ ಒಟ್ಟು 3,200 ಚದರ ಕಿ.ಮೀ. ಪ್ರದೇಶವು ಚೀತಾಗಳ ಆವಾಸಕ್ಕೆ ಯೋಗ್ಯವಾಗಿದೆ. ಈ ಪ್ರದೇಶಕ್ಕೆ ಒಟ್ಟು 36 ವಯಸ್ಕ ಚೀತಾಗಳನ್ನು ಸಲಹುವ ಸಾಮರ್ಥ್ಯವಿದೆ. ಈ ಹಂತದಲ್ಲಿ ರಾಷ್ಟ್ರೀಯ ಉದ್ಯಾನದ ಹೊರವಲಯಕ್ಕೆ ಚೀತಾಗಳನ್ನು ಪರಿಚಯಿಸಲಾಗುತ್ತದೆ. ಇಲ್ಲಿ ವಯಸ್ಕ ಚೀತಾಗಳ ಸಂಖ್ಯೆ 36ರಲ್ಲಿ ಸ್ಥಿರವಾಗಲು 35–40 ವರ್ಷಗಳು ಬೇಕಾಗಬಹುದು .

- ಮೊದಲ ಹಂತದ ಚೀತಾ ಮೇಲ್ವಿಚಾರಣಾ ಅವಧಿಯು ಹತ್ತು ವರ್ಷಗಳದ್ದಾಗಿದೆ. ಈ ಅವಧಿಯಲ್ಲಿ ಪ್ರತಿ ಚೀತಾದ ಮೇಲೂ ದಿನದ 24 ಗಂಟೆಯೂ ಕಣ್ಗಾವಲು ಇರಿಸಲಾಗುವುದು
- ಪ್ರತಿ ಚೀತಾಗೂ ರೇಡಿಯೋ ಕಾಲರ್ ಅಳವಡಿಸಲಾಗುತ್ತದೆ. ಹತ್ತೂ ವರ್ಷಗಳ-ವರೆಗೆ ಇದನ್ನು ಮುಂದುವರಿಸಲಾಗುತ್ತದೆ
- ಈ ಅವಧಿಯಲ್ಲಿ ಚೀತಾಗಳು ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯನ್ನು ದಾಟಿಹೋಗುವುದನ್ನು ತಡೆಯಲಾಗುತ್ತದೆ. ಉದ್ಯಾನದ ವ್ಯಾಪ್ತಿಯನ್ನು ದಾಟಿಹೋಗುವ ಚೀತಾಗಳನ್ನು ಹಿಡಿದು, ವಾಪಸ್ ತಂದು ಬಿಡಲಾಗುವುದು
- ಚೀತಾ ಮತ್ತು ಚಿರತೆಗಳು ಒಂದೇ ಪರಿಸರದಲ್ಲಿ ಇದ್ದಾಗ, ಕೆಲವೊಮ್ಮೆ ಸಂಘರ್ಷ ನಡೆಯುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಚೀತಾ, ಚಿರತೆ ಎರಡೂ ಗಂಭೀರವಾಗಿ ಗಾಯಗೊಳ್ಳುವ ಮತ್ತು ಕೆಲವು ಸಂದರ್ಭದಲ್ಲಿ ಸಾವನ್ನಪ್ಪುವ ಅಪಾಯವೂ ಇರುತ್ತದೆ. ಚೀತಾಗಳು ಗಂಭೀರವಾಗಿ ಗಾಯಗೊಂಡರೆ ಮತ್ತು ಸಾವನ್ನಪ್ಪಿದರೆ, ಅದರ ಬದಲಿಗೆ ಮತ್ತೊಂದು ಚೀತಾವನ್ನು ತಂದು ಬಿಡಬೇಕಾಗುತ್ತದೆ
- ಹತ್ತು ವರ್ಷಗಳವರೆಗೆ ಈ ಪ್ರಕ್ರಿಯೆಗಳ ಮೇಲೆ ತೀವ್ರ ನಿಗಾ ಇರಿಸಲಾಗುತ್ತದೆ. ಈ ಪ್ರದೇಶದಲ್ಲಿ ವಯಸ್ಕ ಚೀತಾಗಳ ಸಂಖ್ಯೆ 21ರಲ್ಲಿ ಸ್ಥಿರವಾಗಲು 15–20 ವರ್ಷಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ

ಸಾಂದರ್ಭಿಕ ಚಿತ್ರ

ಬುಡಕಟ್ಟು ಜನರ ಸ್ಥಳಾಂತರ

ಕುನೊ ರಾಷ್ಟ್ರೀಯ ಉದ್ಯಾನ ಮತ್ತು ಸುತ್ತಲಿನ 3,200 ಚದರ ಕಿಲೋಮೀಟರ್ ವ್ಯಾಪ್ತಿಯ ಪ್ರದೇಶವನ್ನು ಚೀತಾಗಳ ಆವಾಸಕ್ಕಾಗಿ ಗುರುತಿಸಲಾಗಿದೆ. ಈ ವ್ಯಾಪ್ತಿಯಲ್ಲಿ 169 ಹಳ್ಳಿಗಳು ಬರುತ್ತವೆ. ಈ ಪೈಕಿ 748 ಚದರ ಕಿಲೋಮೀಟರ್ ಪ್ರದೇಶವು ಕುನೊ ರಾಷ್ಟ್ರೀಯ ಉದ್ಯಾನ ಪ್ರದೇಶ. ಈ ಪ್ರದೇಶವನ್ನು ಜನರ ಪ್ರವೇಶದಿಂದ ಮುಕ್ತಗೊಳಿಸಲಾಗಿದೆ. ಈ ಪ್ರದೇಶದಲ್ಲಿ ಬರುವ 24 ಹಳ್ಳಿಗಳ ಪೈಕಿ ಒಂದು ಹಳ್ಳಿಯ ಸ್ಥಳಾಂತರ ಪ್ರಕ್ರಿಯೆ ಮಾತ್ರ ಜಾರಿಯಲ್ಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಊರು ಬಿಟ್ಟು ಹೋಗುವ ಹಳ್ಳಿಯ ಪ್ರತಿ ವಯಸ್ಕ ವ್ಯಕ್ತಿಗೆ ₹15 ಲಕ್ಷ ಪರಿಹಾರ ನೀಡಲಾಗಿದೆ. ಗ್ರಾಮಸ್ಥರು ಊರು ತೊರೆಯುವಾಗ ಅವರ ಸಾಕುಪ್ರಾಣಿಗಳನ್ನು ಅಲ್ಲಿಯೇ ಬಿಟ್ಟುಹೋದರೆ, ಅವುಗಳಿಗೂ ಪರಿಹಾರ ನೀಡಲು ಯೋಜನೆಯಲ್ಲಿ ಅವಕಾಶ ಇದೆ. ಈ ಎಲ್ಲ ಹಳ್ಳಿಗಳಲ್ಲಿ ಸುಮಾರು 500 ಸಾಕುಪ್ರಾಣಿಗಳಿವೆ ಎನ್ನಲಾಗಿದೆ. ಈ ಜಾನುವಾರುಗಳನ್ನು ಚೀತಾಗಳಿಗೆ ಬಲಿಪ್ರಾಣಿಗಳನ್ನಾಗಿ ಬಳಸುವ ಉದ್ದೇಶ ಯೋಜನೆಯಲ್ಲಿದೆ.

ಚೀತಾ–ಮನುಷ್ಯ ಸಂಬಂಧ

ಚೀತಾಗಳನ್ನು ಕಾಡಿಗೆ ಬಿಟ್ಟ ಬಳಿಕ ಅವುಗಳ ಸಂತತಿ ಬೆಳೆಯುವುದು ಚೀತಾ ಮತ್ತು ಮನುಷ್ಯನ ಸಂಬಂಧ ಹೇಗೆ ಇರುತ್ತದೆ ಎಂಬುದರ ಮೇಲೆಯೂ ಅವಲಂಬಿತ. ಅದಕ್ಕಾಗಿಯೇ 'ಚಿಂಟೂ ಚೀತಾ' ಎಂಬ ಹೆಸರಿನಲ್ಲಿ ಜನ ಜಾಗೃತಿ ಕಾರ್ಯಕ್ರಮವನ್ನು ಮಧ್ಯಪ್ರದೇಶ ಸರ್ಕಾರವು ಆರಂಭಿಸಿದೆ. ಚೀತಾ ಮತ್ತು ಮನುಷ್ಯ ಸಂಬಂಧವು ಹೇಗಿರಬೇಕು ಎಂಬ ಕುರಿತು ಜನರಿಗೆ ಸರಿಯಾದ ಮಾಹಿತಿ ನೀಡಲು ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಸೂಚಿಸಲಾಗಿದೆ.

ಚೀತಾಗಳಿಂದ ಮನುಷ್ಯರಿಗೆ ಯಾವುದೇ ಅಪಾಯ ಉಂಟಾಗುವುದಿಲ್ಲ ಎಂಬ ಸತ್ಯವನ್ನು ಸಮುದಾಯಕ್ಕೆ ಮನದಟ್ಟು ಮಾಡಬೇಕು. ಜಾನುವಾರುಗಳಿಗೆ ಆಗುವ ತೊಂದರೆಗೆ ತಕ್ಷಣವೇ ಪರಿಹಾರ ದೊರೆಯಲಿದೆ ಎಂಬ ಭರವಸೆಯನ್ನೂ ಜನರಲ್ಲಿ ಮೂಡಿಸಬೇಕು. ಜನವಸತಿ ಪ್ರದೇಶಗಳ ಸುತ್ತಲಲ್ಲಿ ಎಷ್ಟು ಚಿರತೆಗಳು ಇವೆ ಎಂಬುದನ್ನು ರೇಡಿಯೋ ಕಾಲರ್ ಉಪಕರಣದ ಮೂಲಕ ಗುರುತಿಸಲಾಗುವುದು. ಚೀತಾಗಳ ಬಗ್ಗೆ ಜನರಲ್ಲಿ ಇರುವ ಅಭಿಮತ ಏನು ಎಂಬುದನ್ನು ಸಮೀಕ್ಷೆಗಳ ಮೂಲಕ ತಿಳಿದುಕೊಳ್ಳಲಾಗುವುದು. ಚೀತಾಗಳ ನಿರ್ವಹಣೆ ಮತ್ತು ಭವಿಷ್ಯದಲ್ಲಿ ಯೋಜನೆಗಳನ್ನು ರೂಪಿಸಲು ಇಂತಹ ಮಾಹಿತಿ ಅತ್ಯಂತ ಉಪಯುಕ್ತ.

ಹುಲಿ ಸಂತತಿ: ಸರಿಸ್ಕಾ, ಪನ್ನಾ ಯಶೋಗಾಥೆ

ಹುಲಿ ಸಂತತಿ ನಾಮಾವಶೇಷ ಆಗಿರುವ ಹಾಗೂ ತೀರಾ ಕಡಿಮೆ ಪ್ರಮಾಣದಲ್ಲಿರುವ ಅಭಯಾರಣ್ಯಗಳಲ್ಲಿ ಮತ್ತೆ ಹುಲಿ ಸಂತತಿ ಅಭಿವೃದ್ಧಿಪಡಿಸುವ ಎರಡು ಯೋಜನೆಗಳು ಭಾರತದಲ್ಲಿ ಈಗಾಗಲೇ ಯಶಸ್ವಿಯಾಗಿವೆ. ಮಧ್ಯಪ್ರದೇಶದ ಪನ್ನಾ ರಾಷ್ಟ್ರೀಯ ಉದ್ಯಾನ ಹಾಗೂ ರಾಜಸ್ಥಾನದ ಸರಿಸ್ಕಾ ರಾಷ್ಟ್ರೀಯ ಉದ್ಯಾನದಲ್ಲಿ ಇತರ ರಾಷ್ಟ್ರೀಯ ಉದ್ಯಾನಗಳಿಂದ ಹುಲಿಗಳನ್ನು ತಂದು ಬಿಡಲಾಗಿತ್ತು. ಈ ಎರಡೂ ಉದ್ಯಾನಗಳಲ್ಲಿ ಹುಲಿ ಸಂತತಿ ಬೆಳೆದಿದೆ.

ಹುಲಿಗಳ ಸಂಸತಿ ನಾಶವಾಗಿರುವ ಕಾಡುಗಳಲ್ಲಿ ಅವುಗಳನ್ನು ಬೆಳೆಸುವ ಕಾರ್ಯಕ್ರಮ ಡಾ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಶುರುವಾಯಿತು. ರಾಜಸ್ಥಾನದ ಸರಿಸ್ಕಾ ಹುಲಿ ಅಭಯಾರಣ್ಯದಲ್ಲಿ 2004ರ ವೇಳೆಗೆ ಹುಲಿ ಸಂತತಿ ಸಂಪೂರ್ಣ ಇಲ್ಲವಾಗಿತ್ತು. 2008ರಲ್ಲಿ ಈ ಉದ್ಯಾನಕ್ಕೆ ಹುಲಿಗಳನ್ನು ಪರಿಚಯಿಸುವ ಯೋಜನೆ ಚಾಲನೆ ಪಡೆಯಿತು. ಪ್ರಧಾನಿ ಸ್ವತಃ ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದರು. ತಲಾ ಮೂರು ಹೆಣ್ಣು ಹಾಗೂ ಗಂಡು ಹುಲಿಗಳನ್ನು ಸರಿಸ್ಕಾ ಅರಣ್ಯಕ್ಕೆ ಬಿಡಲಾಯಿತು. ಒಂದು ಹೆಣ್ಣು ಹುಲಿಯ (ಎಸ್‌ಟಿ–2) ಜೊತೆ ಎರಡು ವರ್ಷದ ಮರಿ ಹುಲಿ ಇರುವುದು ಕ್ಯಾಮರಾದಲ್ಲಿ ಸೆರೆಯಾಗಿತ್ತು. ಭಾರತದಲ್ಲಿ ಹುಲಿ ಸ್ಥಿತಿಗತಿ ವರದಿ–2018 ಪ್ರಕಾರ, ಸರಿಸ್ಕಾ ಅಭಯಾರಣ್ಯದಲ್ಲಿ 11 ಹುಲಿಗಳಿವೆ.

2003ರ ವೇಳೆಗೆ ಪನ್ನಾ ಉದ್ಯಾನದಲ್ಲಿ 40 ಹುಲಿಗಳಿದ್ದವು. ಬೇಟೆ ಮೊದಲಾದ ಕಾರಣಗಳಿಂದ ಅವುಗಳ ಸಂಖ್ಯೆಯು 2009ರ ವೇಳೆಗೆ ಕೇವಲ 2ಕ್ಕೆ ಕುಸಿಯಿತು. ಹೀಗಾಗಿ ಬಾಂಧವಗಡ ರಾಷ್ಟ್ರೀಯ ಉದ್ಯಾನ ಹಾಗೂ ಕನ್ಹಾ ರಾಷ್ಟ್ರೀಯ ಉದ್ಯಾನದಿಂದ ಎರಡು ಹೆಣ್ಣು ಹುಲಿಗಳನ್ನು (ಟಿ 1 ಮತ್ತು ಟಿ2) ತರಲಾಯಿತು. ಪೆಂಚ್ ರಾಷ್ಟ್ರೀಯ ಉದ್ಯಾನದಿಂದ ಗಂಡು ಹುಲಿಯನ್ನು (ಟಿ 3) ತಂದುಬಿಡಲಾಯಿತು. ಎರಡು ಹೆಣ್ಣು ಹುಲಿಗಳು ತಲಾ ನಾಲ್ಕು ಮರಿಗಳಿಗೆ ಜನ್ಮ ನೀಡಿದವು. 2011ರಲ್ಲಿ ಮತ್ತೆ ಎರಡು ಹುಲಿಗಳನ್ನು (ಟಿ 4 ಮತ್ತು ಟಿ 5) ತರಲಾಯಿತು. ಈಗ, ಪನ್ನಾ ಉದ್ಯಾನದಲ್ಲಿ 25 ಹುಲಿಗಳಿವೆ. ಅಕ್ಕಪಕ್ಕದ ಉದ್ಯಾನಗಳಿಂದ 31 ಹುಲಿಗಳು ಇಲ್ಲಿಗೆ ಬಂದು ಹೋಗುತ್ತಿವೆ ಎಂದು ಭಾರತದಲ್ಲಿ ಹುಲಿ ಸ್ಥಿತಿಗತಿ ವರದಿ–2018 ತಿಳಿಸಿದೆ.

ಆಧಾರ: ಪ್ರಾಜೆಕ್ಟ್ ಚೀತಾ–2009, ಭಾರತಕ್ಕೆ ಚೀತಾ ಮರುಪರಿಚಯ ಕ್ರಿಯಾಯೋಜನೆ ವರದಿ–2021, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 228

ಶಿವನ ಮೊರೆಹೋದ ದೇವತೆಗಳು

ಪಾರ್ವತಿ ತಪೋತಾಪಕ್ಕೆ ಜಗತ್ತು ಅಲ್ಲೋಲ ಕಲ್ಲೋಲವಾಗುತ್ತಿರುವುದನ್ನು ಕಂಡು ತಲ್ಲಣಗೊಂಡ ದೇವತೆಗಳು ಬ್ರಹ್ಮನ ಮೊರೆಹೋದರು. ವಿಶ್ವತಲ್ಲಣಕ್ಕೆ ಪಾರ್ವತಿಯ ತಪಸ್ಸೇ ಕಾರಣ ಎಂಬುದನ್ನು ಅರಿತ ಬ್ರಹ್ಮ, ಸಮಸ್ಯೆಯನ್ನು ನಾರಾಯಣನೊಂದಿಗೆ ಚರ್ಚಿಸಲು ದೇವತೆಗಳೊಡನೆ ಕ್ಷೀರಸಮುದ್ರಕ್ಕೆ ತೆರಳಿದ. ದೇವತೆಗಳೆಲ್ಲರೂ 'ಮಹಾವಿಷ್ಣು, ನಮ್ಮನ್ನು ಕಾಪಾಡು. ಗಿರಿಜೆಯ ಘೋರತಪಸ್ಸಿನ ಜ್ವಾಲೆಯಿಂದ ನಾವೆಲ್ಲರೂ ಬೆಂದು ಹೋಗುತ್ತಿದ್ದೇವೆ' ಎಂದು ಮೊರೆ ಇಟ್ಟರು.

ಲಕ್ಷ್ಮೀಪತಿಯು 'ಎಲೈ ದೇವತೆಗಳಿರಾ, ಇದನ್ನು ಪರಿಹರಿಸಲು ಪರಮೇಶ್ವರನಿಂದ ಮಾತ್ರ ಸಾಧ್ಯ. ಲೋಕಕ್ಷೇಮಕ್ಕಾಗಿ ಗಿರಿಜೆಯನ್ನು ಮದುವೆಯಾಗುವಂತೆ ಪರಮೇಶ್ವರನನ್ನು ಪ್ರಾರ್ಥಿಸೋಣ' ಎಂದ ಮಹಾವಿಷ್ಣು.

ವಿಷ್ಣುವಿನ ಮಾತನ್ನು ಕೇಳಿ ಇಂದ್ರಾದಿ ದೇವತೆಗಳೆಲ್ಲ ಬೆಚ್ಚಿಬಿದ್ದರು. 'ಓ ಹರಿಯೇ, ರುದ್ರನು ಪ್ರಳಯಕರ್ತ. ಕ್ರೋಧಾಗ್ನಿಮೂರ್ತಿ. ತಪೋನಿರತನಾಗಿರುವಾಗ ಶಿವನ ಬಳಿ ಹೋಗುವುದು ಬಹಳ ಕಷ್ಟ. ಈಗಾಗಲೇ ತಪಸ್ಸು ಭಂಗಪಡಿಸಿದನೆಂದು ಮನ್ಮಥನನ್ನು ಭಸ್ಮಮಾಡಿದ್ದಾನೆ. ಈಗ ನಾವು ಹೋದರೆ ಮನ್ಮಥನಿಗಾದ ಗತಿಯೇ ನಮಗಾಗುವುದು. ವಿರೂಪಾಕ್ಷನ ಬಳಿಗೆ ನಾವು ಬರಲಾರೆವು. ನಮ್ಮನ್ನು ಸಹ ಕ್ರೋಧದಿಂದ ದಹಿಸಿಬಿಡುವನು' ಎಂದು ಶಿವನ ಬಳಿಗೆ ಬರಲು ಹಿಂಜರಿದರು.

ಇಂದ್ರ ಮೊದಲಾದ ದೇವತೆಗಳ ಮಾತನ್ನು ಕೇಳಿದ ಹರಿಯು, ಅವರೆಲ್ಲರನ್ನೂ ಸಮಾಧಾನಗೊಳಿಸುತ್ತಾ, 'ಎಲೈ ದೇವತೆಗಳೇ, ಎಲ್ಲರೂ ನನ್ನ ಮಾತನ್ನು ಆದರದಿಂದ ಕೇಳಿರಿ. ರುದ್ರನು ನಿಮ್ಮನ್ನು ದಹಿಸುವುದಿಲ್ಲ. ಅವನು ದೇವತೆಗಳ ಭಯವನ್ನು ಹೋಗಲಾಡಿಸುವವನು. ಆದುದರಿಂದ ಸಜ್ಜನರಾದ ನೀವೆಲ್ಲರೂ ನನ್ನೊಡನೆ ಶಿವನ ಬಳಿಗೆ ಬರಬೇಕು. ಅವನು ಮಂಗಳಕರನೆಂದು ತಿಳಿದು ಅವನನ್ನು ಶರಣು ಹೊಂದಬೇಕು. ಶಿವನು ಆದಿಪುರುಷ, ಪರಮೇಶ್ವರ. ಸಂಪ್ರದಾಯಗಳ ಕರ್ತನಾದ ಪರಮಾತ್ಮಸ್ವರೂಪ. ಇಂತಹ ಶಿವನು ಈಗ ತಪವನ್ನ ಆಚರಿಸುತ್ತಿದ್ದಾನೆ. ನಾವು ಒಳ್ಳೆ ಮನಸ್ಸಿನಿಂದ ಅವನ ಬಳಿಗೆ ಹೋದರೆ, ಅವನ ತಪೋಭಂಗವಾಗುವುದಿಲ್ಲ. ಅವನು ನಮ್ಮನ್ನು ಆದರಿಸಿ ಆಶೀರ್ವದಿಸುತ್ತಾನೆ' ಎಂದು ದೇವತೆಗಳ ಮನದಲ್ಲಿ ಧೈರ್ಯ ತುಂಬಿದ.

ಹರಿಯ ಮಾತಿನಿಂದ ಧೈರ್ಯ ತಾಳಿದ ದೇವತೆಗಳು ನಾರದ-ಬ್ರಹ್ಮ-ವಿಷ್ಣುವಿನೊಂದಿಗೆ ಶಿವನ ಬಳಿಗೆ ಹೊರಟರು. ಅವರು ಹೋಗುವ ಮಾರ್ಗದಲ್ಲಿ ಗಿರಿಜೆಯ ತಪೋವನವು ಸಿಕ್ಕಿತು. ಪಾರ್ವತಿ ತಪಸ್ಸನ್ನು ನೋಡುವ ಕುತೂಹಲದಿಂದ ದೇವತೆಗಳೆಲ್ಲರೂ ಅವಳ ಆಶ್ರಮಕ್ಕೆ ಹೋದರು. ತೇಜೋರೂಪಳೂ ತಪಸ್ವಿನಿಯೂ ಆದ ಮಹೇಶ್ವರಿಯನ್ನು ನೋಡಿ ಭಕ್ತಿಯಿಂದ ನಮಸ್ಕಾರ ಮಾಡಿದ ದೇವತೆಗಳೆಲ್ಲ, ಪಾರ್ವತಿಯ ತಪಸ್ಸನ್ನು ಪ್ರಶಂಸಿಸುತ್ತಾ, ಪರಮೇಶ್ವರನು ಇರುವಲ್ಲಿಗೆ ತೆರಳಿದರು.

ಶಿವ ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಬಂದ ದೇವತೆಗಳು ಮತ್ತೆ ಭಯದಿಂದ ದೂರದಲ್ಲೇ ನಿಂತು, ನಾರದನನ್ನು ಅವನ ಬಳಿಗೆ ಕಳುಹಿಸಿದರು. ನಾರದ ಶಿವನ ಬಳಿಗೆ ಹೋಗಿ, ಶಿವ ಶಾಂತವಾಗಿರುವುದನ್ನು ದೇವತೆಗಳಿಗೆ ಮನದಟ್ಟು ಮಾಡಿಸಿ, ಅವರನ್ನೆಲ್ಲ ಶಂಕರನ ಬಳಿಗೆ ಕರೆದುಕೊಂಡು ಹೋದ. ದೇವತೆಗಳೆಲ್ಲರೂ ಶಿವಸ್ಥಾನಕ್ಕೆ ತೆರಳಿ ಅಲ್ಲಿ ಪ್ರಸನ್ನಮುದ್ರೆಯಿಂದ ಸುಖಾಸನದಲ್ಲಿ ಕುಳಿತಿರುವ ಭಕ್ತವತ್ಸಲನಾದ ಶಂಕರನನ್ನು ನೋಡಿದರು. ಯೋಗಾಸನದಲ್ಲಿ ಕುಳಿತ್ತಿದ್ದ ಶಿವನ ಸುತ್ತಾ ಪ್ರಮಥಗಣಗಳು ಕುಳಿತ್ತಿದ್ದರು.

ದೇವತೆಗಳು, ಸಿದ್ಧರು, ಮುನಿಗಳೆಲ್ಲರೂ ಶಿವನಿಗೆ ನಮಸ್ಕರಿಸಿ ವೇದಸೂಕ್ತಗಳಿಂದ ಸ್ತುತಿಸಿದರು ಎಂಬಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ಇಪ್ಪತ್ತಮೂರನೆ ಅಧ್ಯಾಯ ಮುಗಿಯುತ್ತದೆ. •

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಸೆಪ್ಟೆಂಬರ್ 19, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣನವಮಿ ಗಂ. 19-02, ನಕ್ಷತ್ರ: ಆರ್ದ್ರಾ ಗಂ. 18-11 ಯೋಗ: ವ್ಯತೀಪಾತ ಗಂ. 07-28, ಕರಣ: ತೈತಿಲ ಗಂ. 05-48, ಕನ್ಯಾ ಮಾಸದ 02 ನೇ ದಿನ.
ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-23 ಸೂರ್ಯಾಸ್ತ : 06-26
ದಿನ ವಿಶೇಷ : ಮಾತೃನವಮಿ
ಮುಸ್ಲಿಂ ದಿನಾಂಕ : 22 ಸಫರ್
ಅದೃಷ್ಟ ಸಂಖ್ಯೆ : 4, 8

ಮೇಷ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವುದು ಅಥವಾ ಮಿತ್ರರಿಂದ ಸಲಹೆ ಸ್ವೀಕರಿಸುವುದು ಅನುಕೂಲಕರ. ಹಣಕಾಸು ಸಂಸ್ಥೆಗೆ ಪಾಲುದಾರರಾಗುವುದನ್ನು ಸದ್ಯಕ್ಕೆ ಮುಂದೂಡಿ.

ವೃಷಭ: ಟೆಕ್ಸ್‌ಟೈಲ್ಸ್ ಉದ್ಯಮದವರಿಗೆ ಸಂಗ್ರಹಣೆ ಮಾಡಲು ಉತ್ತಮ. ವಸ್ತ್ರವಿನ್ಯಾಸದಲ್ಲಿ ವಿಶೇಷ ಪರಿಣತಿ ತೆಗೆದುಕೊಳ್ಳಬಹುದು. ಆರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ಸರಿಯಲ್ಲ. ಧೈರ್ಯದಿಂದ ದೊಡ್ಡ ಯೋಜನೆ ಕೈಗೊಳ್ಳಬಹುದು.

ಮಿಥುನ: ಗುರಿ ಸಾಧಿಸಲು ಪ್ರಮುಖ ವ್ಯಕ್ತಿಗಳೊಂದಿಗಿನ ಭೇಟಿ ಮತ್ತು ಕೆಲ ಹೊಸ ಬದಲಾವಣೆಗಳು ಅನಿವಾರ್ಯ ಎನಿಸಲಿದೆ. ಆಪ್ತ ಸ್ನೇಹಿತರು ಮತ್ತು ನೆರೆಯವರೊಂದಿಗೆ ಬಾಂಧವ್ಯ ಉತ್ತಮ ಗೊಳ್ಳುವುದು.

ಕರ್ಕಾಟಕ: ಯಾವುದೇ ಹೊಸ ಉದ್ಯೋಗ ಅಥವಾ ಕರಾರುಗಳ ವಿಚಾರದಲ್ಲಿ ಮುಂದುವರಿಯಬೇಡಿ. ಗೊಂದಲದ ಗೂಡಿಗೆ ಸಿಲುಕಿದಂತಾಗುವುದು. ವಿಷಜಂತುಗಳಿಂದ ಭಯದ ಸನ್ನಿವೇಶ ಎದುರಾಗಬಹುದು.

ಸಿಂಹ: ಸಾಂಸಾರಿಕವಾಗಿ ಮತ್ತು ಆರ್ಥಿಕವಾಗಿ ನಿಮ್ಮ ಇಷ್ಟಾರ್ಥ ಸಿದ್ಧಿಸುವುದು. ಅಸಾಧ್ಯ ಕಾರ್ಯಗಳನ್ನೂ ಸಹ ಸಾಧಿಸಿ ತೋರಿಸುವಷ್ಟು ಮನೋಬಲ ನಿಮ್ಮಲ್ಲಿದೆ. ಅದನ್ನು ಈ ದಿನ ಉಪಯೋಗಿಸಿಕೊಳ್ಳಿರಿ.

ಕನ್ಯಾ: ಲೇಖನಗಾರರಿಗೆ ಮತ್ತು ಅಧ್ಯಾಪನ ವೃತ್ತಿಯುಳ್ಳವರಿಗೆ ಉನ್ನತ ಯಶಸ್ಸು ಲಭಿಸುವುದು. ಪಾರಂಪರಿಕವಾಗಿ ಬಂದಂತಹ ಹಿರಿಯರ ಆಸ್ತಿ ಸ್ವತ್ತುಗಳು ನಿಮ್ಮ ಪಾಲಿಗೆ ಬರಲಿದೆ. ಶ್ರಮಜೀವಿಗಳಿಗೆ ಉತ್ತಮ ಆದಾಯವಿರುವುದು.

ತುಲಾ: ಸಂತಾನದ ಸುದ್ದಿ ಆನಂದ ತರಲಿದೆ. ಸಹವರ್ತಿಗಳ ಅಭಿಪ್ರಾಯಗಳನ್ನು ತಿರಸ್ಕರಿಸುವುದು ಸರಿಯಲ್ಲ, ಆಲಿಸಿ. ಉಪಯೋಗಕ್ಕೆ ಬರುವ ಅಂಶ ಸ್ವೀಕರಿಸಿ. ಕೆಲಸಗಳನ್ನು ಸಮರ್ಪಕವಾಗಿ ಮಾಡಿದ ತೃಪ್ತಿಕರ ಭಾವ ಉಂಟಾಗಲಿದೆ.

ವೃಶ್ಚಿಕ: ನಿಮ್ಮ ಅಧೀನ ಸಿಬ್ಬಂದಿಯವರೊಂದಿಗೆ ಸಂಯಮದಿಂದ ನಡೆದು-ಕೊಳ್ಳುವುದು ಉತ್ತಮ. ಏಕೆಂದರೆ ನಿಮ್ಮ ಯಶಸ್ಸಿಗೆ ಅವರ ಸಹಾಯವೂ ಅಗತ್ಯವಾಗಿರುತ್ತದೆ. ಆರೋಗ್ಯಕ್ಕಾಗಿ ಆಹಾರ ಸೇವನೆ ವಿಧಾನ ಬದಲಾಯಿಸಿ

ಧನು: ಹಿಡಿದ ಕೆಲಸಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗುವಿರಿ. ಸಂಘ ಸಂಸ್ಥೆಗಳವರಿಂದ ಮನ್ನಣೆ ಹಾಗೂ ಸನ್ಮಾನಗಳನ್ನು ಪಡೆಯುವಂತಾಗಬಹುದು. ಚಿಲ್ಲರೆ ಮಾರಾಟಗಾರರಿಗೆ ಮತ್ತು ಹೂವು, ಹಣ್ಣು ಬೆಳೆಗಾರರಿಗೆ ಶುಭ ದಿನ.

ಮಕರ: ಸಂಬಂಧಿಗಳ ಅಪಹಾಸ್ಯದ ಮಾತುಗಳು ನಿಮ್ಮಲ್ಲಿನ ಆತ್ಮವಿಶ್ವಾಸವನ್ನು ಇಮ್ಮಡಿಯಾಗಿ ಮಾಡಿ ಕಠಿಣ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ಚತುರ ನಡೆ ಇರುವುದು.

ಕುಂಭ: ನಿಮ್ಮ ಅಧಿಕ ಪರಿಶ್ರಮದಿಂದ ಕಾರ್ಯಸಫಲತೆ ಉಂಟಾಗುವುದು. ದಾಂಪತ್ಯದಲ್ಲಿ ಚರ್ಚೆ, ವಾದಗಳಿಗೆ ಆಸ್ಪದ ನೀಡದಿರುವುದು ಒಳ್ಳೆಯದು. ವಿದ್ಯಾರ್ಥಿಗಳು ಉದಾಸೀನತೆ ಮಾಡದೆ ವಿದ್ಯಾಭ್ಯಾಸದ ಕಡೆಗೆ ಗಮನವಹಿಸಿ

ಮೀನ: ಸಂಘ ಸಂಸ್ಥೆಗಳ ಅಧಿಕಾರ ಪಡೆದುಕೊಳ್ಳುವ ವಿಚಾರದಲ್ಲಿ ಯಾವುದೇ ವಾಮಮಾರ್ಗವನ್ನು ಅನುಸರಿಸಬೇಡಿ. ಆಡಿಟಿಂಗ್ ವೃತ್ತಿಯವರಿಗೆ ತೃಪ್ತಿಕರ ಆದಾಯವಿರುವುದು.

ಕರ್ಮದ ಫಲ

ನಿನ್ನ ಹೆಣವನು ನೀನೆ ಹೊತ್ತು ಸಾಗಿಸಬೇಕೊ! |
ಅಣ್ಣ ಬಾ ತಮ್ಮ ಬಾ ಎಂದಳುವುದೇಕೋ ? ||
ನಿನ್ನೊಡಲೆ ಚಿತೆ, ಜಗದ ತಂಟೆಗಳೆ ಸವುದೆಯುರಿ |
ಮಣ್ಣೆ ತರ್ಪಣ ನಿನಗೆ – ಮಂಕುತಿಮ್ಮ || 717 ||

ಪದ-ಅರ್ಥ: ಎಂದಳುವುದೇಕೋ = ಎಂದು + ಅಳುವುದು + ಏಕೋ, ನಿನ್ನೊಡಲೆ = ನಿನ್ನ + ಒಡಲೆ(-ದೇಹವೆ), ಸವುದೆಯುರಿ = ಸವುದೆ(ಸೌದೆ) + ಉರಿ,

ವಾಚ್ಯಾರ್ಥ: ನಿನ್ನ ಹೆಣವನ್ನು ನೀನೇ ಹೊತ್ತು ಸಾಗಿಸುವುದು ಸರಿ. ಆಗ ಜೊತೆಗಾರರನ್ನು ಸಂಬಂಧಿಕರನ್ನು ಕರೆಯುವುದು ಏಕೆ? ನಿನ್ನ ದೇಹವೆ ಚಿತೆ, ಪ್ರಪಂಚದ ನಂಟುತಂಟೆಗಳೇ ಸೌದೆ ಮತ್ತು ಉರಿ. ಮಣ್ಣೇ ತರ್ಪಣ.

ವಿವರಣೆ: ಭಗವದ್ಗೀತೆಯ ಒಂದು ಮಾತು ಹೀಗಿದೆ
ನಾದತ್ತೇ ಕಸ್ಯಚಿತ್ ಪಾಪಂ ನ ಚೈವ ಸುಕೃತಂ ವಿಭು:
ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವ: || (5-15)

"ಯಾರ ಪಾಪವನ್ನೂ ನಾವು ತೆಗೆದುಕೊಳ್ಳಲಾಗುವುದಿಲ್ಲ ಹಾಗೂ ಇನ್ನೊಬ್ಬರ ಪುಣ್ಯ ನಮಗೆ ಸಿಗುವುದಿಲ್ಲ. ನಾವು ಏನು ಅನುಭವಿಸುತ್ತೇವೋ ಅದು ನಾವು ಮಾಡಿದ ಕರ್ಮಫಲ".

ಕಗ್ಗ, ಗೀತೆಯ ಮಾತನ್ನು ವಿಶದಪಡಿಸುತ್ತದೆ. ಅದನ್ನು ಕಠಿಣವಾಗಿ ಹೇಳುತ್ತದೆ. "ನಿನ್ನ ಹೆಣವನು ನೀನೆ ಹೊತ್ತು ಸಾಗಿಸಬೇಕೊ". ಇದರರ್ಥ ನಿನ್ನ ಕರ್ಮದ ಫಲವನ್ನು ನೀನೇ ಹೊರಬೇಕು. ಪ್ರತಿಯೊಂದು ಕರ್ಮಕ್ಕೆ ಅದರದೇ ಆದ ಫಲವಿದೆ. ಸತ್ಕರ್ಮಕ್ಕೆ-ಸತ್ಫಲ, ದುಷ್ಕರ್ಮಕ್ಕೆ –ದುಷ್ಫಲ. ಈ ನಿಯಮ ಧರ್ಮಪ್ರವೃತ್ತಿಗೆ ಆಧಾರವಾಗಿದೆ. ಪುರಂದರದಾಸರು ಹಾಡಿದರು, "ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ ದೇವಾ?". ಹಾಗೆಂದರೆ, ನಾನು ಮಾಡಿದ ಕರ್ಮಕ್ಕೆ ದೊರೆತ ಫಲವನ್ನು ದೇವರೂ ತಪ್ಪಿಸಲಾರ. ಹಾಗಿರುವಾಗ ಅಣ್ಣ ಬಾ, ತಮ್ಮ ಬಾ ಎಂದು ಎಲ್ಲರನ್ನು ಕರೆಯುವುದರಲ್ಲಿ ಯಾವ ಅರ್ಥವಿದೆ? ಭಗವಂತ ಒಳ್ಳೆಯ ವ್ಯಾಪಾರಿ. ಒಂದನ್ನೂ ಮರೆಯದೆ ದಾಖಲಿಸುತ್ತಾನೆ. ಎಂದೋ ಮಾಡಿದ ತಪ್ಪನ್ನು, ಉದಾರ ಕಾರ್ಯವನ್ನು ಸರಿಯಾಗಿ ಪಟ್ಟಿಮಾಡಿ ನಮ್ಮ ಖಾತೆಗೆ ಸೇರಿಸುತ್ತಾನೆ. ಅವುಗಳ ಫಲವನ್ನು ಆಗಿಂದಾಗ್ಗೆಯೇ ಕೊಡಬಹುದು ಅಥವಾ ಬೇರೆ ಕಾಲದಲ್ಲಿ ಕೊಡಬಹುದು. ಅದು ಅವನ ಇಚ್ಛೆ. ಆದರೆ ಫಲ ಬರದೇ ಹೋಗುವುದಿಲ್ಲ. ಫಲ ಬಂದಾಗ, ವ್ಯಕ್ತಿಗೆ ಹಿಂದೆ ಮಾಡಿದ್ದು ಮರೆತು ಹೋಗಿ, "ನನಗೇಕೆ ಈ ಶಿಕ್ಷೆ?" ಎಂದು ಕೇಳುತ್ತಾನೆ. ಕರ್ಮದ ನಂತರದ ಬದುಕಿನಲ್ಲಿ ಸನ್ನಡತೆ ತೋರಿದರೆ ಫಲದಲ್ಲಿ ಕೊಂಚ ರಿಯಾಯಿತಿಯನ್ನು ಆತ ತೋರಬಹುದೇನೋ. ಆದರೆ ಫಲ ತಪ್ಪದು. ಎಂದೋ ಲಂಚ ತಿಂದಿದ್ದಕ್ಕೆ ಯಾವಾಗಲೋ ಜೈಲು ಶಿಕ್ಷೆ. ರಾಜಕಾರಣದಲ್ಲಿ ನಂಬಿಸಿ, ಹಿಂದಿನಿಂದ ಚೂರಿ ಹಾಕಿದ್ದಕ್ಕೆ ಮುಂದೊಂದು ದಿನ ಭ್ರಷ್ಟತೆಯ ಅನಾವರಣ. ಮಕ್ಕಳಿಗೆ ಸಂಸ್ಕೃತಿಯನ್ನು ಕಲಿಸದೆ, ಆಡಂಬರದ ಬದುಕು ತೋರಿದರೆ ಮುಂದೆ ವೃದ್ಧಾಶ್ರಮ ತಪ್ಪೀತೇ? ನಿಷ್ಕರುಣೆಯಿಂದ ನಿಸರ್ಗವನ್ನು ಶತಮಾನಗಳ ಕಾಲ ಹೊಸಕಿಹಾಕಿದರೆ ಅಕಾಲದ ಮಳೆ, ಚಳಿಗಾಲದ ಉರಿಬಿಸಿಲು, ಸಮುದ್ರದ ಉಬ್ಬರ, ಸುನಾಮಿ, ಭೂಕಂಪ ತಪ್ಪೀತೇ? ಇದನ್ನು ಕಗ್ಗ ಒರಟಾಗಿ ಹೇಳುತ್ತದೆ. ನಿನ್ನ ಕರ್ಮಕ್ಕೆ ನೀನೇ ಹೊಣೆ, ಇನ್ನಾರನ್ನೂ ಹೊಣೆಗಾರರನ್ನಾಗಿ ಮಾಡಬೇಡ. ನಿನ್ನ ದೇಹವೆ ಚಿತೆ, ಜಗತ್ತಿನಲ್ಲಿ ಎದುರಾಗುವ ಸಮಸ್ಯೆಗಳೇ ಸೌದೆ, ಉರಿ. ಕೊನೆಗೆ ನಿನಗೆ ತರ್ಪಣ ಸಿಗುವುದು ಮಣ್ಣಿಂದಲೇ.

ಪದಬಂಧ 5084 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಒಪ್ಪವಾಗಿ ರಾಗದಿಂದ ಮೂಡಿರುವ ಪ್ರೀತಿ (4)
5.ಈತ ಲಂಕಾಧಿಪತಿ (3)
6.ತಾಯಿಯ ಹತ್ತಿರ ಕಾಣುತ್ತಿರುವ ಕಿಟಕಿ (4)
8.ಗುಡಿಸಲ ಸಮೀಪವಿರುವ ಜಲಪಾತ (4)
12.ಮಂದಿಯ ಒಳಿತು (4)
14.ಇದು ಬೇರೆಯವರ ದುಡ್ಡು (4)
15.ನಗರದಲ್ಲಿ ಕೇಳಿಸಿದ ಚರ್ಮ ವಾದ್ಯ (3)
16.ಬಾಳೆಹಣ್ಣಿನಿಂದ ಮಾಡಿರುವ ಖಾದ್ಯ (4)

ಮೇಲಿಂದ ಕೆಳಕ್ಕೆ
1.ಬೇರೆಯವರನ್ನು ಆಶ್ರಯಿಸಿರುವವನು (5)
2.ಈತ ಒಳ್ಳೆಯ ಸ್ವಭಾವದವನು (4)
3.ತೊಂದರೆಯ ನಿವಾರಣೆಗಾಗಿ ಮಾಡುವ ಪ್ರಾರ್ಥನೆ (4)
4.ಮನ ಕೊನೆಗಿಟ್ಟಾಗಿನ ಲಕ್ಷ್ಯ (3)
7.ಶ್ರಮನಿರ್ವಹಿಸುವುದು (2)
9.ದನವಿರುವ ಮನೆ (3)
10.ಅಧಿಕವಾದ ಬಡತನ (5)
11.ಭೂಲೋಕದ ಅಮೃತ (2)
12.ಮಂದಿಯ ಮನಸ್ಸು (4)
13.ಮಗ್ನತೆಯನ್ನು ಹೀಗೆ ಹೇಳಿ (4)
14.ಉತ್ತರದವರ ವೇತನ (3)



5083ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಾತ್ಮಿದಾರ 3.ಪರಿಚ್ಛೇದ 5.ರವ
6.ಹಣವಂತ 8.ತಭೂ 9.ಲೋಪ
10.ಮಿತವ್ಯಯ 13.ನಾರಿ
15.ಕಡುಕೋಪ 16.ಮಕರಂದ

ಮೇಲಿಂದ ಕೆಳಕ್ಕೆ:
1.ಬಾಲ 2.ದಾನವ
3.ಪರಿಮಾಣ 4.ದಳ್ಳುರಿ
5.ರಣಭೂಮಿ 6.ಹರಿಯ
7.ತಲೋದರಿ 11.ವ್ಯರ್ಥಾಲಾಪ
12.ಸಂದೂಕ 13.ನಾಸಿಕ
14.ವಾದ

ಸುಡೊಕು 5470

		1		7		6		2
		5	2		9			
2	8			1			9	5
	5		7			8		
	2			8		5		9
8		6		9				
6				5		9		7
		8					5	
5		3		6		1		8

5469 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಭಯೋತ್ಪಾದನೆಗಾಗಿ ಪಿಎಫ್‌ಐಯಿಂದ ತರಬೇತಿ: ಶೋಧ

ನವದೆಹಲಿ (ಪಿಟಿಐ): 'ಪಾಪುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯು ಭಯೋತ್ಪಾದನಾ ಕೃತ್ಯಕ್ಕಾಗಿ ಹಲವೆಡೆ ತರಬೇತಿ ಶಿಬಿರಗಳನ್ನು ನಡೆಸುತ್ತಿರುವ ಹಾಗೂ ಧರ್ಮದ ಆಧಾರದಲ್ಲಿ ಸಮುದಾಯಗಳ ನಡುವೆ ದ್ವೇಷ ಬಿತ್ತಲು ಯತ್ನಿಸುತ್ತಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಭಾನುವಾರ ಎರಡು ರಾಜ್ಯಗಳ ಒಟ್ಟು 40 ಸ್ಥಳಗಳಲ್ಲಿ ಶೋಧ ನಡೆಸಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ತೆಲಂಗಾಣದ 38, ಆಂಧ್ರದ ಎರಡು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಈ ವೇಳೆ ಡಿಜಿಟಲ್ ಸಾಧನಗಳು, ದಾಖಲೆಗಳು, ಎರಡು ಕಠಾರಿ ಹಾಗೂ ₹8.31 ಲಕ್ಷ ನಗದು ಸೇರಿದಂತೆ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಎನ್‌ಐಎ ವಕ್ತಾರರೊಬ್ಬರು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ. ಎನ್. ಬಾಲನಾರಾಯಣ ರೆಡ್ಡಿ
ದಿ. ಶ್ರೀ. ಜೆ. ಎಸ್. ನಾರಾಯಣಸ್ವಾಮಿ ರೆಡ್ಡಿಯವರ ಮಗ
ದಿ. ಶ್ರೀ. ಜೆ. ಸುಬ್ಬಯ್ಯ ರೆಡ್ಡಿಯವರ ಮೊಮ್ಮಗ
ಹಲಸೂರು
ದಿ: 18.09.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ
ಇವರ ಅಂತ್ಯಕ್ರಿಯೆಯನ್ನು ದಿ. 19.09.2022ರಂದು ಮಧ್ಯಾಹ್ನ 12.00 ಗಂಟೆಗೆ, ಇಂದಿರಾನಗರದ, ಹಳೆ ಮದ್ರಾಸ್ ರಸ್ತೆಯಲ್ಲಿರುವ (ಬಿಎಂಟಿಸಿ ಡಿಪೊ ಹತ್ತಿರ) ಕುಟುಂಬದ ಸಮಾಧಿ ಭೂಮಿಯಲ್ಲಿ ನೆರವೇರಿಸಲಾಗುವುದು
ದುಃಖತಪ್ತರು: ಕುಟುಂಬವರ್ಗದವರು

ಗುಜರಾತ್ ಚುನಾವಣೆಯಲ್ಲಿ ಬಿಜೆಪಿಗೆ ಸೋಲುವ ಭೀತಿ: ಅರವಿಂದ ಕೇಜ್ರಿವಾಲ್ ಲೇವಡಿ

'ಎಎಪಿ ಜನಪ್ರಿಯತೆ: ಬಿಜೆಪಿಗೆ ದಿಗಿಲು'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, 'ಗುಜರಾತ್ ಚುನಾವಣೆಯಲ್ಲಿ ಸೋಲುವ ಭೀತಿ ಬಿಜೆಪಿಯನ್ನು ಕಾಡುತ್ತಿದೆ. ಆದ್ದರಿಂದ ಭ್ರಷ್ಟಾಚಾರದ ವಿರುದ್ಧ ಹೋರಾಟ ಎನ್ನುವ ಹೆಸರಿನಲ್ಲಿ ಆಮ್ ಆದ್ಮಿ ಪಕ್ಷವನ್ನು ಹೊಸಕಿ ಹಾಕಲು ಯತ್ನಿಸುತ್ತಿದೆ' ಎಂದು ಆರೋಪಿಸಿದ್ದಾರೆ.

ಇದೇ ಮೊದಲ ಬಾರಿಗೆ, ಜನಪ್ರತಿನಿಧಿಗಳ ರಾಷ್ಟ್ರೀಯ ಸಮ್ಮೇಳನವನ್ನು ಭಾನುವಾರ ಇಲ್ಲಿ ಎಎಪಿ ಆಯೋಜಿಸಿತ್ತು. ಈ ಸಮಾವೇಶದಲ್ಲಿ ಮಾತನಾಡಿದ ಕೇಜ್ರಿವಾಲ್, 'ನಮ್ಮ ಪಕ್ಷದ ಸಚಿವರು ಹಾಗೂ ನಾಯಕರನ್ನು ಭ್ರಷ್ಟಾಚಾರದ ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಏಕೆಂದರೆ, ಗುಜರಾತ್‌ನಲ್ಲಿ ಎಎಪಿ ಬಗೆಗೆ ಜನರು ತೋರಿಸುತ್ತಿರುವ ಪ್ರೀತಿಯು ಬಿಜೆಪಿಯಲ್ಲಿ ದಿಗಿಲು ಹುಟ್ಟಿಸಿದೆ' ಎಂದರು.

'ರೇವ್ಡಿ ಸಂಸ್ಕೃತಿ' ಕುರಿತು ಪ್ರಧಾನಿ ಮೋದಿ ಮಾತನಾಡಿರುವುದನ್ನು ಪ್ರಸ್ತಾಪಿಸಿದ ಅವರು, 'ಉಚಿತ ಕೊಡುಗೆಗಳು ದೇಶದ ಆರ್ಥಿಕತೆಗೆ ಮಾರಕವಾದುದು ಎನ್ನುವ ಮೂಲಕ ಎಎಪಿಯ ಉಚಿತ ಕೊಡುಗೆಗಳನ್ನು ಪ್ರಧಾನಿ ಮೋದಿ ಅವರು ಟೀಕಿಸಿದ್ದಾರೆ. ಒಬ್ಬ ಅಪ್ರಾಮಾಣಿಕ, ಒಬ್ಬ ಭ್ರಷ್ಟ ಮತ್ತು ಒಬ್ಬ ದೇಶದ್ರೋಹಿ ಮಾತ್ರವೇ ಈ ರೀತಿ ಹೇಳಲು ಸಾಧ್ಯ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಉಚಿತ ಕೊಡುಗೆಗಳು ದೇಶವೊಂದರ ಆರ್ಥಿಕತೆಗೆ ಮಾರಕ ಎಂದು ಯಾರೇ ರಾಜಕಾರಣಿ ಹೇಳಿದರೆ, ಆತನ ಉದ್ದೇಶಗಳು ಸರಿಯಿಲ್ಲ ಎಂದೇ ಭಾವಿಸಬೇಕು' ಎಂದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಮ್ಮೇಳನದಲ್ಲಿ ಮಾತನಾಡಿದರು –ಪಿಟಿಐ ಚಿತ್ರ

> ತಮ್ಮ ಬಗ್ಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರೂ ಹೆದರಿದ್ದಾರೆ ಎಂದು ಕೇಜ್ರಿವಾಲ್ ಹೇಳದಿರುವುದು ಆಶ್ಚರ್ಯದ ಸಂಗತಿ
> **ಸಂಬಿತ್ ಪಾತ್ರಾ,** ಬಿಜೆಪಿ ವಕ್ತಾರ

ನಾಲ್ವರ ಬಂಧನ: ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ಶುಕ್ರವಾರ ಎಎಪಿ ಶಾಸಕ ಅಮಾನತುಲ್ಲಾ ಖಾನ್ ಅವರ ಮನೆಯ ಮೇಲೆ ದಾಳಿ ನಡೆಸಿದ್ದರು. ಈ ವೇಳೆ ಎಸಿಬಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಲ್ಲಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

'ಶಕೀಲ್ ಅಹಮದ್ (45), ಅಫ್ಸಾರ್ (20), ಅನ್ವರ್ (31) ಮತ್ತು ಸಿಕಂದರ್ (45) ಅವರನ್ನು ಶನಿವಾರ ಬಂಧಿಸಲಾಗಿದೆ. ಈ ಕುರಿತ ತನಿಖೆ ಪ್ರಗತಿಯಲ್ಲಿದೆ' ಎಂದು ಪೊಲೀಸರು ಭಾನುವಾರ ತಿಳಿಸಿದರು.

ಅಮಾನತುಲ್ಲಾ ಬೆಂಬಲಿಗರು ಎಸಿಬಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎನ್ನಲಾದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಗುಂಪೊಂದು ಎಸಿಬಿ ಅಧಿಕಾರಿಗಳನ್ನು ಸುತ್ತುವರಿದು, ಎಳೆದಾಡುತ್ತಿರುವ ದೃಶ್ಯಗಳು ವಿಡಿಯೊದಲ್ಲಿವೆ. 'ನೀವು ಏಕೆ ಇಲ್ಲಿಗೆ ಬಂದಿದ್ದೀರಿ' ಎಂದು ಗುಂಪಿನಲ್ಲಿದ್ದ ಒಬ್ಬರು ಅಧಿಕಾರಿಗಳನ್ನು ಪ್ರಶ್ನಿಸಿದ ತುಣುಕೂ ವಿಡಿಯೊದಲ್ಲಿದೆ.

'ಪ್ರಧಾನಿ ಸಲಹೆಗಾರರಿಂದ ಸಂಪಾದಕರಿಗೆ ಬೆದರಿಕೆ'

'ಗುಜರಾತ್‌ನಲ್ಲಿ ಎಎಪಿ ಜನಪ್ರಿಯತೆ ಬಗ್ಗೆ ಬಿಜೆಪಿ ಮತ್ತು ಪ್ರಧಾನಿ ಮೋದಿ ಅವರು ಎಷ್ಟು ದಿಗಿಲುಗೊಂಡಿದ್ದಾರೆ ಎಂದರೆ, ಪ್ರಧಾನಿ ಅವರ ಸಲಹೆಗಾರ ಹಿರೇನ್ ಜೋಷಿ ಅವರು ಗುಜರಾತ್‌ನ ಹಲವು ಸುದ್ದಿವಾಹಿನಿಗಳ ಮಾಲೀಕರು ಹಾಗೂ ಸಂಪಾದಕರಿಗೆ, ಎಎಪಿಗೆ ಸಂಬಂಧಿಸಿದ ಸುದ್ದಿಗಳನ್ನು ಪ್ರಸಾರ ಮಾಡಬಾರದು ಎಂದು ಬೆದರಿಕೆ ಹಾಕಿದ್ದಾರೆ' ಎಂದು ಕೇಜ್ರಿವಾಲ್ ಆರೋಪಿಸಿದರು.

'ಬೆದರಿಕೆ ಹಾಕುವುದನ್ನು ನಿಲ್ಲಿಸಿ. ಒಂದು ವೇಳೆ ಸುದ್ದಿ ವಾಹಿನಿಗಳ ಸಂಪಾದಕರು ಜೋಷಿ ಅವರು ಕಳುಹಿಸಿದ ಸಂದೇಶಗಳ ಸ್ಕ್ರೀನ್‌ಶಾಟ್‌ಗಳನ್ನು ಬಹಿರಂಗಗೊಳಿಸಿದರೆ, ಪ್ರಧಾನಿ ಮತ್ತವರ ಸಲಹೆಗಾರ ಇಬ್ಬರೂ ದೇಶದ ಜನರಿಗೆ ಮುಖ ತೋರಿಸಲೂ ಸಾಧ್ಯವಾಗುವುದಿಲ್ಲ' ಎಂದು ಹೇಳಿದರು.

'ಇದೇ ಕಾರಣಕ್ಕಾಗಿಯೇ ಮನೀಷ್ ಸಿಸೋಡಿಯಾ ವಿರುದ್ಧದ ಆರೋಪದ ಕುರಿತು ಸುದ್ದಿ ವಾಹಿನಿಗಳು ನಡೆಸಿದ ಚರ್ಚೆಗೆ ನಮ್ಮನ್ನು ಆಹ್ವಾನಿಸಲಿಲ್ಲ' ಎಂದು ಅವರು ಹೇಳಿದರು.

ಆದರೆ, ಈ ಕುರಿತು ಹಿರೇನ್ ಜೋಷಿ ಅವರಾಗಲಿ, ಪ್ರಧಾನಿ ಕಚೇರಿಯಾಗಲಿ ಪ್ರತಿಕ್ರಿಯಿಸಿಲ್ಲ.

ಸ್ವಪ್ರತಿಷ್ಠೆಯ ವ್ಯಕ್ತಿ: ಬಿಜೆಪಿ ಟೀಕೆ

'ಎರಡು ರಾಜ್ಯಗಳ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದ ಬಳಿಕ, ಕೇಜ್ರಿವಾಲ್ ಅವರು ತಮ್ಮನ್ನು ತಾವು ದೇವರು ಎಂದು ಭಾವಿಸಿದ್ದಾರೆ. ಅವರೊಬ್ಬ ಸ್ವಪ್ರತಿಷ್ಠೆಯ ವ್ಯಕ್ತಿ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಭಾನುವಾರ ಟೀಕಿಸಿದ್ದಾರೆ.

ಕೇಜ್ರಿವಾಲ್ ಅವರು ಬಿಜೆಪಿ ಹಾಗೂ ಪ್ರಧಾನಿ ಮೋದಿ ಅವರ ವಿರುದ್ಧ ವಾಗ್ದಾಳಿ ನಡೆಸಿದ ಕೆಲವೇ ಗಂಟೆಗಳಲ್ಲಿ ಪ್ರತಿಕ್ರಿಯಿಸಿರುವ ಬಿಜೆಪಿ, 'ಯಾವುದೇ ಸರ್ಕಾರದಲ್ಲಿಯೂ ವಿವಿಧ ಆರೋಪಗಳ ಕಾರಣಕ್ಕಾಗಿ ಇಷ್ಟೊಂದು ಕಡಿಮೆ ಅವಧಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಸಚಿವರು ರಾಜೀನಾಮೆ ನೀಡಿದ್ದು ಇಲ್ಲ' ಎಂದು ಜಿತೇಂದರ್ ಸಿಂಗ್ ತೋಮರ್ ಮತ್ತು ಸಂದೀಪ್ ಸಿಂಗ್ ಮತ್ತು ಇತರರ ರಾಜೀನಾಮೆಯನ್ನು ಉಲ್ಲೇಖಿಸಿ ಅವರು ಹೇಳಿದ್ದಾರೆ. ಆದರೆ, ಕೇಜ್ರಿವಾಲ್ ಅವರು ಭಷ್ಟಾಚಾರವನ್ನು ವೈಭವೀಕರಿಸಿಕೊಂಡು ಓಡಾಡುತ್ತಿದ್ದಾರೆ ಎಂದೂ ಟೀಕಿಸಿದ್ದಾರೆ.

'ಯಾರು ಪ್ರಾಮಾಣಿಕ, ಯಾರು ಅಪ್ರಾಮಾಣಿಕ ಎಂಬ ವಿಚಾರದಲ್ಲಿ ನ್ಯಾಯಾಲಯದ ತೀರ್ಪಿಗಿಂತಲೂ ಕೇಜ್ರಿವಾಲ್ ಅವರು ನೀಡುವ ಪ್ರಮಾಣಪತ್ರವೇ ಮುಖ್ಯ ಎಂದು ಅವರು ಭಾವಿಸಿದ್ದಾರೆ' ಎಂದು ಟೀಕಿಸಿದರು.

ಸುದ್ದಿ 2 ನಿಮಿಷ

ಓಣಂ ಲಾಟರಿ: ಆಟೊ ಚಾಲಕಗೆ ಒಲಿದ ₹ 25 ಕೋಟಿ ಬಹುಮಾನ

ತಿರುವನಂತಪುರ: ಕೇರಳ ಸರ್ಕಾರದ ಓಣಂ ಬಂಪರ್ ಲಾಟರಿ ಟಿಕೆಟ್ ಖರೀದಿಸಿದ್ದ ಇಲ್ಲಿನ ಆಟೊ ಚಾಲಕ ಅನೂಪ್ ಅವರಿಗೆ ಪ್ರಥಮ ಬಹುಮಾನ ₹ 25 ಕೋಟಿ ಲಭಿಸಿದೆ.

ಶನಿವಾರ ಅವರು ಲಾಟರಿ ಟಿಕೆಟ್ (ಟಿಜೆ750605) ಖರೀದಿಸಿದ್ದರು. ತೆರಿಗೆ ಹಾಗೂ ಕಮಿಷನ್ ಕಳೆದು ಅವರಿಗೆ ₹ 15.75 ಕೋಟಿ ಸಿಗಲಿದೆ.

ಈ ಬಂಪರ್ ಬಹುಮಾನ ತಂದಿರುವ ಟಿಕೆಟ್‌ಅನ್ನು ಮಾರಾಟ ಮಾಡಿರುವ ತಿರುವನಂತಪುರದ ಭಗವತಿ ಏಜೆನ್ಸಿಗೆ ಕಮಿಷನ್ ರೂಪದಲ್ಲಿ ₹ 2.5 ಕೋಟಿ ಸಿಗಲಿದೆ.

ಅನೂಪ್ ಅವರು ಆಟೊ ಚಾಲಕರಾಗಿರುವ ಜೊತೆಗೆ ಬಾಣಸಿಗರೂ ಹೌದು. ಬಾಣಸಿಗನಾಗಿ ಒಳ್ಳೆಯ ಉದ್ಯೋಗ ಅರಸಿ ಮಲೇಷ್ಯಾಕ್ಕೆ ಹೋಗಲು ಯೋಜಿಸಿದ್ದರು. ಬೃಹತ್ ಮೊತ್ತದ ಲಾಟರಿ ಬಹುಮಾನ ಸಿಕ್ಕಿರುವ ಕಾರಣ ವಿದೇಶಕ್ಕೆ ಹಾರುವ ಯೋಚನೆಯನ್ನು ಕೈಬಿಟ್ಟಿದ್ದಾರೆ.

ಈ ವರ್ಷವಷ್ಟೇ ಓಣಂ ಲಾಟರಿಯ ಬಂಪರ್ ಬಹುಮಾನದ ಮೊತ್ತವನ್ನು ₹ 25 ಕೋಟಿಗೆ ಹೆಚ್ಚಿಸಲಾಗಿದೆ. ಪ್ರತಿ ಟಿಕೆಟ್ ದರ ₹ 500 ಇದ್ದು, ದಾಖಲೆಯ 66.5 ಲಕ್ಷ ಟಿಕೆಟ್‌ಗಳು ಮಾರಾಟವಾಗಿದ್ದವು.

ಕಳೆದ ವರ್ಷದ ಓಣಂ ಬಂಪರ್ ಲಾಟರಿಯ ಬಹುಮಾನದ ಮೊತ್ತ ₹ 12 ಕೋಟಿ ಇತ್ತು. ಆ ಬಹುಮಾನ ಸಹ ಕೊಚ್ಚಿಯ ಆಟೊ ಚಾಲಕ ಜಯಪಾಲನ್ ಎಂಬುವವರ ಪಾಲಾಗಿತ್ತು.

ಪರಿಸರ ಸೂಕ್ಷ್ಮ ಪ್ರದೇಶ ಪ್ರಶ್ನಿಸಿದ್ದ ಪಿಐಎಲ್ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ: ಪಶ್ಚಿಮ ಘಟ್ಟದ 55 ಸಾವಿರ ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಕರಡು ಅಧಿಸೂಚನೆ ಹೊರಡಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

'3-10-2018ರಂದು ಹೊರಡಿಸಲಾಗಿರುವ ಕರಡು ಅಧಿಸೂಚನೆಯು ಸಂವಿಧಾನದ 12ನೇ ಪರಿಚ್ಛೇದದಡಿ ರೈತರಿಗೆ ನೀಡಲಾಗಿರುವ ಜೀವನ ಮತ್ತು ಜೀವನೋಪಾಯದ ಹಕ್ಕನ್ನು ಉಲ್ಲಂಘಿಸಲಿದೆ' ಎಂದು ಕೇರಳದ ಕರ್ಶಕ ಶಬ್ದಂ (ರೈತರ ಧ್ವನಿ) ಎಂಬ ಸ್ವಯಂ ಸೇವಾ ಸಂಸ್ಥೆಯು (ಎನ್‌ಜಿಒ) ಅರ್ಜಿಯಲ್ಲಿ ದೂರಿತ್ತು.

'ಕರಡು ಅಧಿಸೂಚನೆ ವಿರುದ್ಧ ಮೇಲ್ಮನವಿ ಸಲ್ಲಿಸಲು ಇಷ್ಟೊಂದು ತಡ ಮಾಡಿದ್ದು ಏಕೆ' ಎಂದು ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ಮತ್ತು ನ್ಯಾಯಮೂರ್ತಿ ರವೀಂದ್ರ ಭಟ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಅರ್ಜಿದಾರರನ್ನು ಪ್ರಶ್ನಿಸಿತು.

'ಕರಡು ಅಧಿಸೂಚನೆಯನ್ನು 2018ರಲ್ಲಿ ಹೊರಡಿಸಲಾಗಿದೆ. ನೀವು ನಾಲ್ಕು ವರ್ಷಗಳ ಬಳಿಕ ಇದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೀರಿ. ತಡವಾಗಿ ಸಲ್ಲಿಸಲಾಗಿರುವ ಇಂತಹ ಅರ್ಜಿಗಳನ್ನು ನಾವು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಹೇಳಿತು.

ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/3RRCKmw

'ಮುಜುಗರದಿಂದ ಪಾರಾಗಲು ಪೊಲೀಸರ ಕಟ್ಟುಕತೆ'

ಲಖಿಂಪುರ ಖೇರಿ ದಲಿತ ಸಹೋದರಿಯರ ಅತ್ಯಾಚಾರ, ಕೊಲೆ: ತಂಗಿಯರ ಕನಸನ್ನು ನೆನೆದ ಅಣ್ಣ

ನವದೆಹಲಿ (ಪಿಟಿಐ): 'ಮುಜುಗರದಿಂದ ಪಾರಾಗಲು ಮತ್ತು ವೈಯಕ್ತಿಕ ಲಾಭಕ್ಕಾಗಿ ಪೊಲೀಸರು ಕಟ್ಟುಕತೆ ಹೇಳುತ್ತಿದ್ದಾರೆ. ಇಬ್ಬರು ತಂಗಿಯರನ್ನು ಅಪಹರಿಸಿ, ಅತ್ಯಾಚಾರ ಎಸಗಿ, ಕೊಲೆ ಮಾಡಲಾಗಿದೆ' ಎಂದು ಉತ್ತರ ಪ್ರದೇಶದ ಲಖಿಂಪುರ ಖೇರಿ ಜಿಲ್ಲೆಯಲ್ಲಿ ಇತ್ತೀಚೆಗೆ ಅತ್ಯಾಚಾರ ಮತ್ತು ಹತ್ಯೆಯಾದ ಇಬ್ಬರು ದಲಿತ ಬಾಲಕಿಯರ ಅಣ್ಣ ಆರೋಪಿಸಿದ್ದಾರೆ.

ದಲಿತ ಸಹೋದರಿಯರ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿ, ಶವಗಳನ್ನು ಕಬ್ಬಿನ ಗದ್ದೆಯಲ್ಲಿ ಮರಕ್ಕೆ ನೇಣು ಹಾಕಿದ್ದ ಪ್ರಕರಣ ನಡೆದಿತ್ತು. ಪ್ರಕರಣ ಸಂಬಂಧ ಆರು ಆರೋಪಿಗಳನ್ನು ಗುರುವಾರ ಬಂಧಿಸಲಾಗಿತ್ತು. ಅತ್ಯಾಚಾರ, ಕತ್ತು ಹಿಸುಕಿ ಕೊಲೆ ಮಾಡಿರುವುದು ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ದೃಢಪಟ್ಟಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆದರೆ, ಲಖಿಂಪುರ ಖೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂಜೀವ್ ಸುಮನ್, 'ಪ್ರಾಥಮಿಕ ತನಿಖೆಯ ಪ್ರಕಾರ, ಬಾಲಕಿಯರಿಬ್ಬರೂ ಬುಧವಾರ ಮಧ್ಯಾಹ್ನ ತಮ್ಮ ಮನೆಯಿಂದ ಹೊರಟು, ಆರೋಪಿಗಳಾದ ಜುನೈದ್, ಸೊಹೈಲ್ ಜತೆಗೆ ಹೋಗಿದ್ದಾರೆ. ಇಬ್ಬರು ಆರೋಪಿಗಳು ಬಾಲಕಿಯರೊಂದಿಗೆ ಸಂಬಂಧ ಹೊಂದಿದ್ದರು. ಮದುವೆಗೆ ಬಾಲಕಿಯರು ಒತ್ತಾಯಿಸಿದ್ದರಿಂದ ಆರೋಪಿಗಳು ಕತ್ತು ಹಿಸುಕಿ ಕೊಂದಿದ್ದಾರೆ' ಎಂದಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯ ಹೇಳಿಕೆ ತಳ್ಳಿಹಾಕಿರುವ ಬಾಲಕಿಯರ ಅಣ್ಣ, 'ಆರೋಪಿಗಳ ಪರಿಚಯ ನಮ್ಮ ಕುಟುಂಬಕ್ಕಿಲ್ಲ. ಅವರನ್ನು ನಾವು ಎಂದೂ ನೋಡಿಯೇ ಇಲ್ಲ. ತಂಗಿಯರ ಜೀವ ಅಪಾಯದಲ್ಲಿರುವ ಕಲ್ಪನೆಯೂ ಇರಲಿಲ್ಲ. ಆರೋಪಿಗಳಿಗೆ ಮರಣ ದಂಡನೆ ಶಿಕ್ಷೆ ವಿಧಿಸಬೇಕು, ನಮಗೆ ನ್ಯಾಯ ಸಿಗಬೇಕು' ಎಂದು ಒತ್ತಾಯಿಸಿದ್ದಾರೆ.

ಬಾಲಕಿಯರ ಅಣ್ಣ ಹಿಮಾಚಲ ಪ್ರದೇಶದಲ್ಲಿ ಕಾರ್ಖಾನೆಯೊಂದರಲ್ಲಿ ನೌಕರಿಯಲ್ಲಿದ್ದು, ಕೆಲ ವರ್ಷಗಳ ಹಿಂದಷ್ಟೇ ದೆಹಲಿಗೆ ಹೋಗಿದ್ದರು.

ಬಾಲಕಿಯರ ತಂದೆ, ಪೊಲೀಸ್ ತನಿಖೆ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರೂ, ಕುಟುಂಬ ಸದಸ್ಯರಿಗೆ ಸರ್ಕಾರಿ ನೌಕರಿ ಕೊಡಬೇಕು, ಆರೋಪಿಗಳಿಗೆ ಮರಣದಂಡನೆ ಶಿಕ್ಷೆಯಾಗಬೇಕು ಎಂದಿದ್ದಾರೆ.

'ಕುಟುಂಬ ಸಲಹುವ ಆಕಾಂಕ್ಷೆ ಹೊಂದಿದ್ದಳು'

'17 ವರ್ಷದ ತಂಗಿ ಶಿಕ್ಷಣ ಅರ್ಧಕ್ಕೆ ನಿಲ್ಲಿಸಿ, ಆರು ತಿಂಗಳ ಹಿಂದಷ್ಟೇ ಗರ್ಭಕೋಶದ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದ ತಾಯಿಯನ್ನು ಕಾಳಜಿ ಮಾಡುತ್ತಿದ್ದಳು. 10ನೇ ತರಗತಿ ಓದುತ್ತಿದ್ದ 15 ವರ್ಷದ ಇನ್ನೊಬ್ಬ ತಂಗಿ ಶಿಕ್ಷಣ ಪೂರ್ಣಗೊಳಿಸಿ, ಉದ್ಯೋಗ ಪಡೆದು ಕುಟುಂಬಕ್ಕಾಗಿ ಸಂಪಾದಿಸುವ ಆಕಾಂಕ್ಷೆ ಹೊಂದಿದ್ದಳು. ಈಗ ಇಬ್ಬರನ್ನೂ ಕಳೆದುಕೊಂಡಿದ್ದೇನೆ' ಎಂದು ಬಾಲಕಿಯರ ಅಣ್ಣ, ತನ್ನ ಸಹೋದರಿಯರ ಕಾಳಜಿ ಮತ್ತು ಆಕಾಂಕ್ಷೆಗಳನ್ನು ನೆನೆದು, ಕಣ್ಣೀರಾಗಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು, ಹುಡುಗರು ಬೇಕಾಗಿದ್ದಾರೆ ಊಟವಸತಿಯಿದೆ 10,000 - 15,000. 8951315839, 9880545002

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225266/ 9611225388

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಶ್ರೀ ಶಕ್ತಿ ಹೆಲ್ತ್ ಕೇರ್ ನಲ್ಲಿ ಯುವಕರಿಗೆ ಹೆಲ್ಪರ್ ಕೆಲಸ ಖಾಲಿಇದೆ, ಊಟ ವಸತಿಯೊಂದಿಗೆ ತಿಂಗಳಿಗೆ 12000/-ವೇತನ ಕೊಡಲಾಗುವುದು ವಿಳಾಸ: ಶೇಷಾದ್ರಿಪುರಂ, ಬೆಂಗಳೂರು - 9019626612

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು ಸಂಪರ್ಕಿಸಿ: 9606523337, 9606385001

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವ್ಯಾಪಾರ

Business Offers

Dealers And Stockists

ಡೀಲರ್ಗಳು ಬೇಕಾಗಿದ್ದಾರೆ ಬೈಯೋ ಚಾರ್ ಇಂಗಾಲದ ಜೈವಿಕ ಗೊಬ್ಬರ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಡೀಲರ್ಗಳು ಬೇಕಾಗಿದ್ದಾರೆ Phone:8310117429 factory@arstaeco.com www.arstaeco.com

ಪ್ರವಾಸ

Travel Agencies

10/11/2022 6/10 ದಿನಗಳು AC ಬಸ್ಸಿನಲ್ಲಿ ಕಾಶಿ, ಗಯಾ, ಬುದ್ಧಗಯಾ, ಅಲಹಾಬಾದ್, ಅಯೊಧ್ಯ 15500/ (ಕೆಲವೇ ಸೀಟುಗಳಿವೆ) ಅಂಡಮಾನ್ ಹವಳದ್ವೀಪ 5/8 ದಿನಗಳು ಹಡಗು/ವಿಮಾನದಲ್ಲಿ. ರಾಯಲ್ ಪ್ಯಾಕೇಜ್. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್9739847429/ 9845560219.

Travel

★ಶ್ರೇಯಸ್ ಟೂರ್ಸ್★ 08.10.2022 12ದಿನಗಳು ಅಖಂಡ ಗುಜರಾತ್‌ರಾಜ್ಯ ಪ್ರವಾಸ.12.10.2022 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ. 01.11.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ.04.11.2022 10ದಿನಗಳು ಅಖಂಡ ನೇಪಾಳರಾಷ್ಟ್ರ(ಮುಕ್ತಿನಾಥ) 25.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.8073824856 9206979202 6366322639

30.09.2022 ರಿಂದ 8 ದಿನಗಳ ಕಾಶಿ,ಗಯಾ,ಪ್ರಯಾಗ ಅಯೋಧ್ಯ ನೈಮಿಶಾರಣ್ಯ. 04.10.2022 ರಿಂದ 6 ದಿನಗಳ ರಾಮೇಶ್ವರ ಕನ್ಯಾಕುಮಾರಿ,ಮದುರೈ ಶ್ರೀರಂಗಂ ತಂಜಾವೂರು ಇತ್ಯಾದಿ. 10.10.2022 ರಿಂದ 13 ದಿನಗಳ ದೆಹಲಿ,ಹರಿದ್ವಾರ್ ಆಗ್ರಾ,ಕಾಶಿ,ಗಯಾ ಇತ್ಯಾದಿ. ವೈಷ್ಣವಿ ಟೂರ್ಸ್ ಅಂಡ್ ಟ್ರಾವೆಲ್ಸ್ ನಂ.39 ಗಾಂದಿಬಜಾರ್ ಬೆಂಗಳೂರು.04: 26914273 9448683374

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
THE RcsS SPOKEN ENGLISH ACADEMY
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

3.11.2022ರಿಂದ ಎಸಿ.ಬಸ್ಸು ಎಸಿ.ರೂಂನೊಂದಿಗೆ ಪಂಚರಾಮ ಕ್ಷೇತ್ರ ಸಮೇತ ಭದ್ರಾಚಲಂ, ಅನ್ನಾವರಂ,ಹೈದರಾಬಾದ್, ವಾಸವಿಪೆನ್ನಗೊಂಡ,ಅಹೋಬಲಂ. 39000/ ಹಾಗೂ 9ದಿನಗಳ ನವಗ್ರಹ ಸಮೇತ ಗುರುವಾಯೂರು,ಮದುರೈ, ರಾಮೇಶ್ವರ, ತ್ರಿವೇಂಡ್ರಮ್, ಕನ್ಯಾಕುಮಾರಿ 27000/ ಏಷ್ಯನ್ ಟ್ರಾವೆಲ್ ಲೈನ್ಸ್,164/3 ಅರ್.ವಿ.ರಸ್ತೆ.ಬೆಂಗಳೂರು. ಸಂಪರ್ಕಿಸಿ: ಷಣ್ಮುಗಾನಂದ. 8105657052/ 26565085

18.11.2022ರಿಂದ 8ದಿನಗಳ ವಿಮಾನ ಎಸಿ ಬಸ್ಸು ಎಸಿ.ರೂಂನೊಂದಿಗೆ ವಾರಾಣಸಿ, ನೈಮಿಷಾರಣ್ಯ,ಗಯಾ, ಅಲಹಾಬಾದ್,ಅಯೋಧ್ಯ, ರೂ.40000/ ಹಾಗೂ 15ದಿನಗಳ ಅಷ್ಟಾಜ್ಯೋತಿರ್ಲಿಂಗ ಸಮೇತ ದ್ವಾರಕಾ,ಪಟೇಲ್ ಪ್ರತಿಮೆ,ಶಿರಡಿ,ಪೋರಬಂದರ್. 58000/ ಏಷ್ಯನ್ ಟ್ರಾವೆಲ್ ಲೈನ್ಸ್.164/3 ಅರ್.ವಿ.ರಸ್ತೆ, ಬೆಂಗಳೂರು.ಸಂಪರ್ಕಿಸಿ: ಷಣ್ಮುಗಾನಂದ: 8105657052/ 26565085

ಉಜ್ಜಯಿನಿ ಓಂಕಾರೇಶ್ವರ್ ಖಜರಾವೊ ಚಿತ್ರಕೂಟ ಕಾಶಿ,ಗಯಾ,ಪ್ರಯಾಗ 21.10.2022 04.11.2022, ರಿಂದ 12/16 ದಿನಗಳು. ದೆಹಲಿ ವೈಷ್ಣವಿದೇವಿ ಶಕ್ತಿಪೀಠಗಳು ಕುಲು,ಮನಾಲಿ 31.10.2022 05.11.2022 ರಿಂದ 12/16 ದಿನಗಳು. ಸೋಮನಾಥ್ ಮಾತ್ರಗಯಾ,ದ್ವಾರಕಾ ಅಷ್ಟ ಜ್ಯೋತಿರ್ಲಿಂಗಗಳು ಅಲಹಾಬಾದ್ 31.10.2022 05.11.2022 ರಿಂದ 15/18 ದಿನಗಳು. ಗೌಹಾಟಿ,ಸಿಕ್ಕಿಂ,ಡಾರ್ಜಲಿಂಗ್ ಕೊಲ್ಕತ್ತ,ಪುರಿ ಭುವನೇಶ್ವರ್10.11.2022 25.11.2022 ರಿಂದ 14/18 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9845114560

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD | ಪ್ರಜಾವಾಣಿ
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact:
Jerry Louis : 9731810277 | Vishal GM : 9845114560
Ravichandra : 9901641752 | Tanveer : 9886213331

ಲೇಖಕಿಯರ ಸಂಘ: ಪುಷ್ಪಾ ಅಧ್ಯಕ್ಷೆ

ಒಂದನೇ ಪುಟದಿಂದ...

ಸಂಘದ 1,330 ಸದಸ್ಯರಲ್ಲಿ 1,295 ಮಂದಿ ಮತದಾನದ ಅರ್ಹತೆ ಹೊಂದಿದ್ದರು. ಜಿಲ್ಲೆಗಳಲ್ಲಿನ ಸದಸ್ಯರು ಅಂಚೆಗಳ ಮೂಲಕ ಮತ ಚಲಾಯಿಸಿದ್ದರು. ಬೆಂಗಳೂರಿನಲ್ಲಿ 650 ಮಂದಿ ಮತದಾನದ ಅರ್ಹತೆ ಹೊಂದಿದ್ದರು. ರಾಜ್ಯದೆಲ್ಲೆಡೆಯಿಂದ 699 ಮತಗಳು ಚಲಾವಣೆಯಾಗಿದ್ದವು. ಬೆಂಗಳೂರಿನಲ್ಲಿ ಚಲಾವಣೆಯಾದ 275 ಮತಗಳಲ್ಲಿ 7 ತಿರಸ್ಕೃತಗೊಂಡವು. 424 ಅಂಚೆ ಮತಗಳಲ್ಲಿ 37 ತಿರಸ್ಕೃತಗೊಂಡವು.

'ಒಗ್ಗೂಡಿಸಿಕೊಂಡು ಸಾಗುವೆ'

'ನನ್ನ ಅವಧಿಯಲ್ಲಿ ಎಲ್ಲ ಲೇಖಕಿಯರನ್ನು ಒಗ್ಗೂಡಿಸಿಕೊಂಡು ಸಾಗುವ ಜತೆಗೆ ರಾಜ್ಯದೆಲ್ಲೆಡೆ ಕಾರ್ಯಕ್ರಮ ಆಯೋಜಿಸಲಾಗುವುದು. ಸದ್ಯ ಸಂಘಕ್ಕೆ ಸ್ವಂತ ಕಟ್ಟಡ, ಸಭಾಂಗಣಕ್ಕೆ ಪ್ರಯತ್ನ ಮಾಡುತ್ತೇನೆ' ಎಂದು ಎಚ್.ಎಲ್. ಪುಷ್ಪಾ 'ಪ್ರಜಾವಾಣಿ'ಗೆ ತಿಳಿಸಿದರು.

'ಸಂಘಕ್ಕೆ ಹೆಚ್ಚಿನ ಅನುದಾನ ತರಲು ಶ್ರಮಿಸುತ್ತೇನೆ. ಅದು ಲಭ್ಯವಾದರೆ ಎಲ್ಲ ಜಿಲ್ಲೆಗಳಲ್ಲಿ ಕಾರ್ಯಕ್ರಮ ಮಾಡಬಹುದು. ಪುಸ್ತಕ ಪ್ರಕಟಣೆ ಸೇರಿ ವಿವಿಧ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗಲಾಗುವುದು' ಎಂದರು.

ಪಿಎಸ್‌ಎ: ಧರ್ಮಗುರುಗಳ ಬಂಧನ

ಶ್ರೀನಗರ (ಪಿಟಿಐ): ಸಾರ್ವಜನಿಕ ಭದ್ರತಾ ಕಾಯ್ದೆ (ಪಿಎಸ್‌ಎ) ಅಡಿ ಇಬ್ಬರು ಪ್ರಮುಖ ಧರ್ಮಗುರುಗಳು ಮತ್ತು ನಿಷೇಧಿತ ಉಗ್ರ ಸಂಘಟನೆ-ಜಮಾತ್-ಇ-ಇಸ್ಲಾಮಿಗೆ ಸೇರಿದ್ದಾರೆ ಎನ್ನಲಾದ ಐವರನ್ನು ಮೂರು ದಿನಗಳ ಹಿಂದೆ ಬಂಧಿಸಲಾಗಿದೆ ಎಂದು ಕಾಶ್ಮೀರದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ವಿಜಯ್ ಕುಮಾರ್ ಅವರು ಭಾನುವಾರ ತಿಳಿಸಿದರು.

'ಬಂಧಿತರೆಲ್ಲರೂ ಇಸ್ಲಾಂ ಧರ್ಮದ ವಿವಿಧ ಧಾರ್ಮಿಕ ಸಂಘಟನೆಗಳಿಗೆ ಸೇರಿರುವವರು. ಅವರು ಯುವಕರನ್ನು ಪ್ರಚೋದಿಸುತ್ತಿದ್ದರು ಎಂಬುದಕ್ಕೆ ನಮ್ಮ ಬಳಿ ಸಾಕಷ್ಟು ಆಧಾರಗಳಿವೆ. ಯುವಕರನ್ನು ಪ್ರಚೋದಿಸದಂತೆ ಹಲವು ಬಾರಿ ಎಚ್ಚರಿಕೆ ನೀಡಿದ ಬಳಿಕವೂ ಅವರು ಅದನ್ನು ನಿಲ್ಲಿಸಿರಲಿಲ್ಲ. ಅಗತ್ಯ ಬಂದರೆ ಬಂಧಿತರ ಕುರಿತ ಮಾಹಿತಿಯನ್ನು ಮಾಧ್ಯಮಗಳ ಎದುರು ಹಂಚಿಕೊಳ್ಳಬಹುದು' ಎಂದು ವಿಜಯ್ ಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ಗುರುವಾಯೂರು: ಆಯುರ್ವೇದ ವೈದ್ಯ ಮುಖ್ಯ ಅರ್ಚಕ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಗುರುವಾಯೂರು ಶ್ರೀಕೃಷ್ಣದೇವಾಲಯದ ಮೇಲ್ ಶಾಂತಿಯಾಗಿ (ಮುಖ್ಯ ಅರ್ಚಕ) ಆಯುರ್ವೇದ ವೈದ್ಯ ಡಾ. ಕಿರಣ್ ಆನಂದ್ ನಂಬೂದಿರಿ (34) ಆಯ್ಕೆಯಾಗಿದ್ದಾರೆ.

ಕಿರಣ್ ಆನಂದ್

ಕಕ್ಕಾಡ್ ಓತ್ತಿಕಾನ್ ಕುಟುಂಬದ ಕಿರಣ್ ಅವರು ಅಕ್ಟೋಬರ್ 1ರಿಂದ ಆರು ತಿಂಗಳ ಅವಧಿಗೆ ಮೇಲ್ ಶಾಂತಿಯಾಗಲಿದ್ದಾರೆ ಎಂದು ದೇವಾಲಯದ ಮೂಲಗಳು ತಿಳಿಸಿವೆ.

ಕೊಯಮತ್ತೂರಿನಲ್ಲಿ ವ್ಯಾಸಂಗ ಪೂರೈಸಿದ ಬಳಿಕ ಕಿರಣ್ ಅವರು ಆರು ವರ್ಷಗಳ ಕಾಲ ರಷ್ಯಾದ ಮಾಸ್ಕೊದಲ್ಲಿ ಆಯುರ್ವೇದ ವೈದ್ಯರಾಗಿ ಕೆಲಸ ಮಾಡಿದ್ದರು. ಶಾಸ್ತ್ರೀಯ ಸಂಗೀತದಲ್ಲೂ ಅವರುಪರಿಣಿತರಾಗಿದ್ದಾರೆ.

'ಮೇಲ್ ಶಾಂತಿಯಾಗಿ ಆಯ್ಕೆಯಾಗಿರುವುದಕ್ಕೆ ಕೃತಾರ್ಥನಾಗಿದ್ದೇನೆ. ಆರು ತಿಂಗಳ ಬಳಿಕ ಮತ್ತೆ ವೈದ್ಯ ವೃತ್ತಿ ಮುಂದುವರಿಸುತ್ತೇನೆ' ಎಂದು ಕಿರಣ್ ಅವರು ತಿಳಿಸಿದ್ದಾರೆ. ಮೇಲ್ ಶಾಂತಿ ಹುದ್ದೆಗೆ 41 ಮಂದಿ ಅರ್ಜಿ ಸಲ್ಲಿಸಿದ್ದರು.

₹1.51 ಕೋಟಿ ದೇಣಿಗೆ ನೀಡಿದ ಅಂಬಾನಿ

ತ್ರಿಶ್ಶೂರ್ (ಪಿಟಿಐ): ರಿಲಯನ್ಸ್ ಉದ್ಯಮ ಸಮೂಹದ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ಕೇರಳದ ಗುರುವಾಯೂರು ದೇವಾಲಯಕ್ಕೆ ಶನಿವಾರ ಭೇಟಿ ನೀಡಿದ್ದು, ದೇಗುಲದ ಅನ್ನದಾನ ನಿಧಿಗೆ ₹1.51 ಕೋಟಿ ದೇಣಿಗೆ ನೀಡಿದ್ದಾರೆ.

ದೇವಾಲಯದ ವತಿಯಿಂದ ₹50 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವೈದ್ಯಕೀಯ ಕೇಂದ್ರದ ಯೋಜನೆಯ ಕುರಿತು ಅಂಬಾನಿ ಅವರಿಗೆ ಮಾಹಿತಿ ನೀಡಿದ್ದೇವೆ ಮತ್ತು ಅದಕ್ಕೆ ನೆರವು ನೀಡುವಂತೆಯೂ ಮನವಿ ಮಾಡಿದ್ದೇವೆ. ಈ ಬಗ್ಗೆ ಪರಿಗಣಿಸುವುದಾಗಿ ಅವರು ತಿಳಿಸಿದ್ದಾರೆ ಎಂದು ದೇವಸ್ಥಾನದ ಆಡಳಿತ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

11ನೇ ದಿನ ಪೂರೈಸಿದ ಭಾರತ್ ಜೋಡೊ ಯಾತ್ರೆ

ಸರ್ಕಾರಗಳ ಅಸೂಕ್ಷ್ಮ ವರ್ತನೆಗೆ ತರಾಟೆ

ಆಲಪ್ಪುಳ (ಕೇರಳ) (ಪಿಟಿಐ): ಕೇರಳದ ಮೂಲಕ ಸಾಗುತ್ತಿರುವ ಭಾರತ ಜೋಡೊ ಯಾತ್ರೆ ಭಾನುವಾರ 11ನೇ ದಿನ ಪೂರೈಸಿದೆ. ಆಲಪ್ಪುಳ ಜಿಲ್ಲೆಯ ಓಟ್ಟಪ್ಪನ, ಪುರಕ್ಕಾಡ್, ಕುರುವಟ್ಟಾ ಮಾರ್ಗವಾಗಿ ವಂದನಂ ಎಂಬ ಸ್ಥಳವನ್ನು ಯಾತ್ರೆ ತಲುಪಿತು. ಕುಟ್ಟನಾಡ್ ರೈತರ ಜೊತೆ ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರು ಸಂವಾದ ನಡೆಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಂವೇದನಾರಹಿತ ವರ್ತನೆಯಿಂದ ರೈತರು ತೊಂದರೆ ಎದುರಿಸುತ್ತಿದ್ದಾರೆ ಎಂದು ರಾಹುಲ್ ಆರೋಪಿಸಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಭಾಷೆ ಹಾಗೂ ಧರ್ಮದ ವಿಚಾರದಲ್ಲಿ ದೇಶವನ್ನು ಒಡೆಯುತ್ತಿದೆ ಎಂದು ಆರೋಪಿಸಿದರು. 'ಸಾಮರಸ್ಯವಿಲ್ಲದೇ ಅಭಿವೃದ್ಧಿ ಇಲ್ಲ, ಅಭಿವೃದ್ಧಿ ಸಾಧ್ಯವಾಗದಿದ್ದರೆ ಉದ್ಯೋಗ ಇಲ್ಲ, ಉದ್ಯೋಗ ಇಲ್ಲದಿದ್ದರೆ ಭವಿಷ್ಯವೇ ಇಲ್ಲ. ಭಾರತ ಜೋಡೊ ಯಾತ್ರೆಯು ಹತಾಶೆಯ ಧ್ವನಿಗಳನ್ನು ಒಗ್ಗೂಡಿಸುತ್ತಿದೆ. ನಿರುದ್ಯೋಗದ ಸಂಕೋಲೆಗಳನ್ನು ಬಿಡಿಸುತ್ತಿದೆ' ಎಂದು ಹೇಳಿದರು.

ಕೇರಳದ ಎಡರಂಗದ ಸರ್ಕಾರವನ್ನು ಅವರು ತರಾಟೆಗೆ ತೆಗೆದುಕೊಂಡರು. ಮರಳು ಮಾಫಿಯಾದಿಂದ ತೊಂದರೆ ಎದುರಿಸುತ್ತಿರುವ ಕುಟುಂಬಗಳನ್ನು ರಾಹುಲ್ ಭೇಟಿಯದರು. ಈ ಕುಟುಂಬಗಳು 466 ದಿನದಿಂದ ಪ್ರತಿಭಟನೆ ನಡೆಸುತ್ತಿವೆ.

ಯಾತ್ರೆಯ ಕೆಲವು ಚಿತ್ರಗಳನ್ನು ರಾಹುಲ್ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದಾರೆ. 'ಇವು ಕೇವಲ ಚಿತ್ರಗಳಲ್ಲ. ದೇಶದ ಪ್ರತಿಯೊಬ್ಬರ ಭಾವನೆ, ಪ್ರೀತಿ, ಭರವಸೆಗಳನ್ನು ಇವು ಬಿಂಬಿಸುತ್ತವೆ' ಎಂದು ಅವರು ಉಲ್ಲೇಖಿಸಿದ್ದಾರೆ.

ಕೇರಳದ ಆಲಪ್ಪುಳ ಮೂಲಕ ಸಾಗಿದ ಭಾರತ್ ಜೋಡೊ ಯಾತ್ರೆಯ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬಾಲಕಿಗೆ ಚಪ್ಪಲಿ ತೊಡಿಸಿದರು –ಪಿಟಿಐ ಚಿತ್ರ

'ರಾಹುಲ್ ಮನಸು ಬದಲಿಸಬಹುದು'

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಪಕ್ಷದ ಅಧ್ಯಕ್ಷ ಹುದ್ದೆಯಲ್ಲಿರಲಿ ಇಲ್ಲದಿರಲಿ, ಅವರು ಪಕ್ಷದಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ ಎಂದು ಹಿರಿಯ ಮುಖಂಡ ಪಿ.ಚಿದಂಬರಂ ಹೇಳಿದ್ದಾರೆ. ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಒಮ್ಮತದ ಅಭ್ಯರ್ಥಿ ಆಯ್ಕೆಯನ್ನು ಅವರು ಪ್ರತಿಪಾದಿಸಿದ್ದಾರೆ. ರಾಹುಲ್ ಅವರು ಅಧ್ಯಕ್ಷರಾಗಲು ಈಗಲೂ ಒಪ್ಪಿಕೊಂಡಿಲ್ಲ. ಆದರೆ, ಅವರು ತಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಚಿದಂಬರಂ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

> ಕಾಂಗ್ರೆಸ್ ಬಿಟ್ಟು ಬಿಜೆಪಿಯೇತರ ಪಕ್ಷಗಳ ಮೈತ್ರಿಕೂಟ ರಚನೆ ಮೂರ್ಖತನ. ಪ್ರಾದೇಶಿಕ ಪಕ್ಷಗಳು ಸ್ವಹಿತಾಸಕ್ತಿಗಾಗಿ ಕಾಂಗ್ರೆಸ್ ಬೆನ್ನಿಗೆ ಚೂರಿಹಾಕಿವೆ
> **ಜೈರಾಮ್ ರಮೇಶ್**
> ಕಾಂಗ್ರೆಸ್ ಮುಖಂಡ

ರಾಹುಲ್ ಪರ ನಿರ್ಣಯ ಅಂಗೀಕಾರ

ರಾಹುಲ್ ಗಾಂಧಿ ಅವರು ಪಕ್ಷದ ಅಧ್ಯಕ್ಷರಾಗಲಿ ಎಂಬ ಕೂಗು ಬಲವಾಗುತ್ತಿದೆ. ಛತ್ತೀಸಗಡ, ರಾಜಸ್ಥಾನ ಹಾಗೂ ಗುಜರಾತ್‌ನ ಕಾಂಗ್ರೆಸ್ ಘಟಕಗಳು ರಾಹುಲ್ ಅವರು ಅಧ್ಯಕ್ಷರಾಗಲಿ ಎಂದು ಒತ್ತಾಯಿಸಿವೆ. ರಾಹುಲ್ ಅವರು ಅಧ್ಯಕ್ಷರಾಗಲಿ ಎಂಬುದಾಗಿ ಆಗ್ರಹಿಸಿ ಛತ್ತೀಸಗಡದ ಕಾಂಗ್ರೆಸ್ ಘಟಕವು ಭಾನುವಾರ ನಿರ್ಣಯ ಅಂಗೀಕರಿಸಿದೆ. ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರು ಪ್ರಸ್ತಾಪಿಸಿದ ನಿರ್ಣಯವನ್ನು ಆರೋಗ್ಯ ಸಚಿವ ಟಿ.ಎಸ್. ಸಿಂಹದೇವ್ ಹಾಗೂ ಇತರರು ಬೆಂಬಲಿಸಿದರು. ಅಧ್ಯಕ್ಷರ ಚುನಾವಣೆಯಲ್ಲಿ ರಾಜ್ಯ ಘಟಕದ 310 ಸದಸ್ಯರು ಮತದಾನದ ಹಕ್ಕು ಹೊಂದಿದ್ದಾರೆ. ಅಧ್ಯಕ್ಷ ಹುದ್ದೆಗೆ ರಾಹುಲ್ ಅವರ ಮನವೊಲಿಸಲು ರಾಜಸ್ಥಾನ ರಾಜ್ಯ ಘಟಕ ಮುಂದಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತ ಎ ತಂಡದ ಆಟಗಾರರ ಸಂಭ್ರಮ —ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ನ್ಯೂಜಿಲೆಂಡ್ ಎ ವಿರುದ್ಧ ಭಾರತ ಎ ತಂಡಕ್ಕೆ ಸರಣಿ ಗೆಲುವು; ಕಾರ್ಟರ್ ಶತಕ

ಜಯದ ಕಾಣಿಕೆ ನೀಡಿದ ಸೌರಭ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ ಮೋಡಿಯ ಮುಂದೆ ನ್ಯೂಜಿಲೆಂಡ್ ಎ ತಂಡದ ಬ್ಯಾಟರ್‌ಗಳ ಆಟ ನಡೆಯಲಿಲ್ಲ. ಸೋಲಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಮುಕ್ತಾಯವಾದ 'ಟೆಸ್ಟ್'ನಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದ ಸೌರಭ್ ಆತಿಥೇಯ ಬಳಗಕ್ಕೆ 113 ರನ್‌ಗಳ ಜಯದ ಕಾಣಿಕೆ ನೀಡಿದರು. ಜೊತೆಗೆ ಮೂರು ಪಂದ್ಯಗಳ ಸರಣಿಯಲ್ಲಿ 1–0 ಗೆಲುವೂ ಒಲಿಯಿತು.

ಗೆಲುವಿಗಾಗಿ 416 ರನ್‌ಗಳ ಗುರಿ ಬೆನ್ನಟ್ಟಿದ್ದ ಪ್ರವಾಸಿ ಬಳಗದ ಜೋ ಕಾರ್ಟರ್ (111; 230ಎ, 4X12, 6X1) ಜಿಗುಟುತನದ ಹೋರಾಟ ತೋರಿದರು. ಶನಿವಾರ ದಿನದಾಟದ ಅಂತ್ಯಕ್ಕೆ 14 ಓವರ್‌ಗಳಲ್ಲಿ 1 ವಿಕೆಟ್‌ಗೆ 20 ರನ್ ಗಳಿಸಿತ್ತು. ಕೊನೆಯ ದಿನ ಬೆಳಿಗ್ಗೆ ಜೋ ವಾಕರ್ ಅವರನ್ನು ಬೌಲ್ಡ್ ಮಾಡುವಲ್ಲಿ ಶಾರ್ದೂಲ್ ಠಾಕೂರ್ ಯಶಸ್ವಿಯಾದರು. ಈ ಹಂತದಲ್ಲಿ ಕಾರ್ಟರ್ ಜೊತೆಗೂಡಿ ಡೇನ್ ಕ್ಲೀವರ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು. ಡೇನ್ ವಿಕೆಟ್ ಗಳಿಸಿದ ಸೌರಭ್ ಜೊತೆಯಾಟ ಮುರಿದರು.

ಆದರೂ ಛಲ ಬಿಡದ ಕಾರ್ಟರ್ ಮಾರ್ಕ್ ಚಾಪಮನ್ (45 ರನ್) ಜೊತೆಗೂಡಿ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 82 ರನ್ ಸೇರಿಸಿದರು. ತಂಡವನ್ನು ಸೋಲಿನಿಂದ ಪಾರು ಮಾಡಲು ಪ್ರಯತ್ನಿಸಿದರು. ಮಾರ್ಕ್ ವಿಕೆಟ್ ಗಳಿಸಿದ ಸರ್ಫರಾಜ್ ಖಾನ್ ಜೊತೆಯಾಟ ಮುರಿದರು. ಆದರೂ ಚಹಾ ವಿರಾಮಕ್ಕೆ 4 ವಿಕೆಟ್‌ಗಳಿಗೆ 221 ರನ್ ಗಳಿಸಿದ್ದ ತಂಡವು ಇನ್ನೊಂದು ಅವಧಿಯಲ್ಲಿ ಕನಿಷ್ಠ ಡ್ರಾ ಮಾಡಿಕೊಳ್ಳುವ ಭರವಸೆಯಲ್ಲಿತ್ತು.

ಮುಂದಿನ 81 ರನ್‌ಗಳ ಅಂತರದಲ್ಲಿ ಆರು ವಿಕೆಟ್‌ಗಳು ಪತನವಾದವು. ಅದರಲ್ಲಿ ಮೂರು ಸೌರಭ್ ಖಾನ್ ಖಾತೆ ಸೇರಿದವು. ಟೂರ್ನಿಯಲ್ಲಿ ಎರಡನೇ ಶತಕ ದಾಖಲಿಸಿದ ಕಾರ್ಟರ್ ವಿಕೆಟ್ ಮುಖೇಶ್ ಕುಮಾರ್ ಪಾಲಾಯಿತು.

ವೇಗಿ ಉಮ್ರಾನ್ ಮಲಿಕ್ ಕೂಡ ಒಂದು ವಿಕೆಟ್ ಗಳಿಸಿದರು. ಸರ್ಫರಾಜ್ ಮತ್ತೊಂದು ವಿಕೆಟ್ ಕಬಳಿಸಿದರು. ಸರಣಿಯ ಮೊದಲ ಎರಡೂ ಪಂದ್ಯಗಳು ಡ್ರಾ ಆಗಿದ್ದವು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 86.4 ಓವರ್‌ಗಳಲ್ಲಿ 293, ನ್ಯೂಜಿಲೆಂಡ್ ಎ: 71.2 ಓವರ್‌ಗಳಲ್ಲಿ 237. ಎರಡನೇ ಇನಿಂಗ್ಸ್: ಭಾರತ ಎ: 85 ಓವರ್‌ಗಳಲ್ಲಿ 7ಕ್ಕೆ359 ಡಿಕ್ಲೇರ್ಡ್. ನ್ಯೂಜಿಲೆಂಡ್ ಎ: 85.2 ಓವರ್‌ಗಳಲ್ಲಿ 302 (ಜೋ ಕಾರ್ಟರ್ 111, ಡೇನ್ ಕ್ಲೀವರ್ 44, ಮಾರ್ಕ್ ಚಾಪಮನ್ 45, ಸೌರಭ್ ಕುಮಾರ್ 103ಕ್ಕೆ5, ಸರ್ಫರಾಜ್ ಖಾನ್ 48ಕ್ಕೆ2) ಫಲಿತಾಂಶ: ಭಾರತ ಎ ತಂಡಕ್ಕೆ 113 ರನ್ ಜಯ. ಸರಣಿಯಲ್ಲಿ 1–0 ಗೆಲುವು.

ಮುಖ್ಯಾಂಶಗಳು

- ಕೊನೆಯ ಪಂದ್ಯದಲ್ಲಿ 113 ರನ್ ಜಯ
- 103ಕ್ಕೆ 5 ವಿಕೆಟ್ ಪಡೆದ ಸೌರಭ್
- ಜೋ ಕಾರ್ಟರ್ 111 ರನ್

ದಿಲೀಪ್ ಟಿರ್ಕೆ ನಾಮಪತ್ರ ಸಲ್ಲಿಕೆ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಮಾಜಿ ನಾಯಕ, ಒಲಿಂಪಿಯನ್ ದಿಲೀಪ್ ಟಿರ್ಕೆ ಅವರು ಹಾಕಿ ಇಂಡಿಯಾ (ಎಚ್‌ಐ) ಅಧ್ಯಕ್ಷ ಸ್ಥಾನದ ಚುನಾವಣೆಗೆ ಭಾನುವಾರ ನಾಮಪತ್ರ ಸಲ್ಲಿಸಿದರು.

ಹಾಕಿ ಇಂಡಿಯಾ ಚುನಾವಣೆ ಅ.1 ರಂದು ನಡೆಯಲಿದ್ದು, ನಾಮಪತ್ರ ಸಲ್ಲಿಕೆಗೆ ಭಾನುವಾರ ಕೊನೆಯ ದಿನವಾಗಿತ್ತು.

'ನಾನು ಹಾಕಿ ಇಂಡಿಯಾ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದು, ಒಡಿಶಾ ಹಾಕಿ ಸಂಸ್ಥೆಯ ಪ್ರತಿನಿಧಿಯಾಗಿ ನಾಮಪತ್ರ ಸಲ್ಲಿಸಿದ್ದೇನೆ' ಎಂದು ಅವರು ಪ್ರತಿಕ್ರಿಯಿಸಿದ್ದಾರೆ. ಟಿರ್ಕೆ ಅವರು ಒಡಿಶಾ ಹಾಕಿ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ.

ವಿಶ್ವ ಕುಸ್ತಿ: ಬಜರಂಗ್‌ಗೆ ಕಂಚು

ಬೆಲ್‌ಗ್ರೇಡ್, (ಪಿಟಿಐ): ಭಾರತದ ಬಜರಂಗ್ ಪೂನಿಯಾ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ವಿಶ್ವ ಕುಸ್ತಿಯಲ್ಲಿ ಅವರಿಗೆ ಒಟ್ಟಾರೆಯಾಗಿ ಲಭಿಸಿದ ನಾಲ್ಕನೇ ಪದಕ ಇದು. ಈ ಸಾಧನೆ ಮಾಡಿದ ಭಾರತದ ಮೊದಲ ಕುಸ್ತಿಪಟು ಎಂಬ ಗೌರವ ಅವರಿಗೆ ಒಲಿಯಿತು.

65 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕಕ್ಕಾಗಿ ಭಾನುವಾರ ನಡೆದ ಹಣಾಹಣಿಯಲ್ಲಿ ಬಜರಂಗ್, 11–9 ರಲ್ಲಿ ಪೋರ್ಟೊರಿಕೊದ ಸೆಬಾಸ್ಟಿಯನ್ ರಿವೆರಾ ಅವರನ್ನು ಮಣಿಸಿದರು.

ಬಜರಂಗ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಅಮೆರಿಕದ ಜಾನ್

ಬಜರಂಗ್ ಪೂನಿಯಾ

ಮೈಕಲ್ ಡೈಕೊಮಿಹಾಲಿಸ್ ಎದುರು ಸೋತಿದ್ದರು. ರಿಪೇಜ್ ಸುತ್ತಿನಲ್ಲಿ 7–6 ರಲ್ಲಿ ಅರ್ಮೇನಿಯದ ವಾಜ್ಗೆನ್ ತೆವನ್‌ವನ್ ಅವರನ್ನು ಮಣಿಸಿ, ಕಂಚಿನ ಪದಕದ ಸುತ್ತಿಗೆ ಅರ್ಹತೆ ಪಡೆದಿದ್ದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬಜರಂಗ್‌ಗೆ ದೊರೆತ ಮೂರನೇ ಕಂಚು ಇದು. ಅವರು 2013 ಮತ್ತು 2019 ರಲ್ಲೂ ಕಂಚು ಜಯಿಸಿದ್ದರು. 2018 ರಲ್ಲಿ ಬೆಳ್ಳಿ ಪದಕ ಪಡೆದದ್ದು ಅವರ ಉತ್ತಮ ಸಾಧನೆಯಾಗಿದೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ಕಂಚು ಜಯಿಸಿದ್ದರು.

ಬೆಲ್‌ಗ್ರೇಡ್‌ನಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತ 30 ಸದಸ್ಯರ ತಂಡವನ್ನು ಕಣಕ್ಕಿಳಿಸಿತ್ತು. ಕೇವಲ ಎರಡು ಪದಕ ಮಾತ್ರ ಲಭಿಸಿದೆ. ಬಜರಂಗ್ ಅಲ್ಲದೆ, ವಿನೇಶ್ ಫೋಗಾಟ್ ಅವರು ಮಹಿಳೆಯರ 53 ಕೆ.ಜಿ. ವಿಭಾಗದಲ್ಲಿ ಕಂಚು ಗೆದ್ದಿದ್ದಾರೆ.

ವಿಮ್ಸ್ ಐಸಿಯುನಲ್ಲಿ ನಡೆದ ಘಟನೆಗೆ ಆರೋಗ್ಯ ಸಚಿವ ಸುಧಾಕರ್ ಸ್ಪಷ್ಟನೆ

'ವಿದ್ಯುತ್ ಕೈಕೊಟ್ಟಿದ್ದಕ್ಕೂ ಸಾವಿಗೂ ಸಂಬಂಧವಿಲ್ಲ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ವಿಮ್ಸ್‌ನಲ್ಲಿ ಇದೇ 14ರಂದು ವಿದ್ಯುತ್ ಕಡಿತಗೊಂಡಿದ್ದು ನಿಜ. ಇದಕ್ಕೂ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಸಂಭವಿಸಿದ ಇಬ್ಬರ ಸಾವಿಗೂ ಸಂಬಂಧವಿಲ್ಲ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ಸ್ಪಷ್ಟಪಡಿಸಿದರು.

ವಿಮ್ಸ್ ಐಸಿಯುನಲ್ಲಿ ಬುಧವಾರ ಸಂಭವಿಸಿದ ಸಾವಿನ ಪ್ರಕರಣಗಳನ್ನು ಕುರಿತು ಪರಿಶೀಲಿಸಲು ಭಾನುವಾರ ಖುದ್ದು ವಿಮ್ಸ್‌ಗೆ ಭೇಟಿ ನೀಡಿದ್ದ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಅವರೊಂದಿಗೆ ಸಾರಿಗೆ ಸಚಿವರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಶ್ರೀರಾಮುಲು ಜತೆಗಿದ್ದರು.

'ಬುಧವಾರ ಬೆಳಿಗ್ಗೆ 8.30ಕ್ಕೆ ವಿದ್ಯುತ್ ಕಡಿತಗೊಂಡಿತ್ತು. 8.30 ರಿಂದ 9.30ರ ನಡುವೆ ಇಬ್ಬರ ಸಾವು ಸಂಭವಿಸಿದೆ. ಮೌಲಾ ಹುಸೇನ್ ಮೂತ್ರಪಿಂಡದ ತೀವ್ರ ಸಮಸ್ಯೆಯಿಂದ ಬಳಲುತ್ತಿದ್ದರು. ದೀರ್ಘ ಸಮಯದಿಂದ ಡಯಾಲಿಸಿಸ್‌ನಲ್ಲಿದ್ದರು. ಸೆ. 11ರಂದು ಆಸ್ಪತ್ರೆಗೆ ಬಂದ ದಿನದಿಂದಲೇ ಅವರಿಗೆ ಉಸಿರಾಟದ ಸಮಸ್ಯೆ ಇತ್ತು. ರಕ್ತದೊತ್ತಡವಿತ್ತು. ಮಿದುಳಿನಲ್ಲಿ ರಕ್ತಸ್ರಾವ ಆಗಿತ್ತು' ಎಂದು ಸಚಿವರು ವಿವರಿಸಿದರು.

'ಚಿಟ್ಟೆಮ್ಮ 13ರಂದು ಆಸ್ಪತ್ರೆಗೆ ದಾಖಲಾಗಿದ್ದರು. ರಕ್ತದೊತ್ತಡ ಕಡಿಮೆ ಇತ್ತು. ಆಮ್ಲಜನಕ ಮಟ್ಟವೂ ಇಳಿಮುಖವಾಗಿತ್ತು. ಬಾಯಿ ಮತ್ತು ಮೂಗಿನಲ್ಲಿ ರಕ್ತಸ್ರಾವ ಆಗುತ್ತಿತ್ತು. ಅಗತ್ಯ ಔಷಧೋಪಚಾರ ಮಾಡಿದರೂ ರೋಗಿಯ ಪರಿಸ್ಥಿತಿ ಸುಧಾರಣೆ ಆಗಲಿಲ್ಲ. 8.20ಕ್ಕೆ ವಿದ್ಯುತ್ ಕೈಕೊಟ್ಟರೂ ವೆಂಟಿಲೇಟರ್‌ಗೆ ಬ್ಯಾಟರಿ ಬ್ಯಾಕಪ್ ಇತ್ತು. ಆದರೆ, 8.30ಕ್ಕೆ ಅವರ ಹೃದಯ ಬಡಿತ ನಿಂತಿತು. ಇದನ್ನು ವೈದ್ಯಕೀಯ ವರದಿ ಹೇಳಿದೆ. ಈ ವರದಿಯನ್ನು ತನಿಖಾ ಸಮಿತಿಗೆ ಕೊಡಲಾಗಿದೆ' ಎಂದು ವಿವರಿಸಿದರು.

'ಈ ಎರಡು ಸಾವು ಸಹಜವಾಗಿ ಆಗಿದ್ದರೆ ಯಾರ ವಿರುದ್ಧವೂ ಕ್ರಮ ಇಲ್ಲ. ಯಾವುದೇ ನಿರ್ಲಕ್ಷ್ಯ ಅಥವಾ ಲೋಪದಿಂದ ಆಗಿದ್ದರೆ ನಿರ್ದಾಕ್ಷಿಣ್ಯ ಕ್ರಮ ಖಚಿತ. ಈ ಬಗ್ಗೆ ಯಾವ ಅನುಮಾನವೂ ಬೇಡ. ಸತ್ಯ ಎಲ್ಲರಿಗೂ ಗೊತ್ತಾಗಲಿ ಎಂಬ ಕಾರಣಕ್ಕೆ ತನಿಖಾ ಸಮಿತಿ ರಚಿಸಲಾಗಿದೆ. ಸಮಿತಿ ವರದಿಯನ್ನು ವಿಧಾನಸಭೆ, ಮಾಧ್ಯಮ ಮತ್ತು ಜನರ ಎದುರು ಇಡಲಾಗುವುದು' ಎಂದು ಅವರು ಭರವಸೆ ನೀಡಿದರು.

'ಬ್ಯಾಟರಿ ಬ್ಯಾಕಪ್ ಇರಲಿಲ್ಲ'

'ಇಬ್ಬರ ಸಾವು ಸಂಭವಿಸಿದ ಐಸಿಯುನಲ್ಲಿ ವೆಂಟಿಲೇಟರ್‌ಗಳಿಗೆ ಬ್ಯಾಟರಿ ಬ್ಯಾಕಪ್ ಇದ್ದರೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅರ್ಧಗಂಟೆಯೂ ವಿದ್ಯುತ್ ಇರುವುದಿಲ್ಲ' ಎಂಬ ಆತಂಕಕಾರಿ ಸಂಗತಿ ಭಾನುವಾರ ಸಚಿವ ಸುಧಾಕರ ಅವರ ಗಮನಕ್ಕೆ ಬಂತು.

'ಒಂದು ಬ್ಯಾಟರಿ ಬ್ಯಾಕಪ್ ಹೆಚ್ಚುವರಿಯಾಗಿ ಇರಬೇಕು. ಯುಪಿಎಸ್ ಇರಬೇಕು. ಹೆಚ್ಚುವರಿ ಬ್ಯಾಕಪ್ಪೂ ಇಲ್ಲ. ಯುಪಿಎಸ್ ಕೂಡಾ ಇಲ್ಲ' ಎಂದು ಬಯೋ ಮೆಡಿಕಲ್ ಅಧಿಕಾರಿ ಸಚಿವರಿಗೆ ತಿಳಿಸಿದರು. 'ನೀವು ಸರಿಯಾಗಿ ಕೆಲಸ ಮಾಡುತ್ತಿಲ್ಲ' ಎಂದು ಸಚಿವರು ಅವರನ್ನು ತರಾಟೆಗೆ ತೆಗೆದುಕೊಂಡರು.

ಕಠಿಣ ಕ್ರಮದ ಎಚ್ಚರಿಕೆ

'ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ದುಡಿಯುವ ವೈದ್ಯರು ಕರ್ತವ್ಯದ ವೇಳೆ ಖಾಸಗಿ ಆಸ್ಪತ್ರೆಗಳು ಅಥವಾ ಪಾಲುದಾರಿಕೆ ಸಂಸ್ಥೆಗಳಲ್ಲಿ ಕೆಲಸ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಸಚಿವ ಸುಧಾಕರ್ ಎಚ್ಚರಿಕೆ ನೀಡಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾನುವಾರ ಲಂಡನ್‌ನ ಲ್ಯಾನ್‌ಕಾಸ್ಟರ್ ಹೌಸ್‌ನಲ್ಲಿ ರಾಣಿ 2ನೇ ಎಲಿಜಬೆತ್ ಅವರಿಗೆ ಗೌರವ ನಮನ ಸಲ್ಲಿಸುವ ಪುಸ್ತಕದಲ್ಲಿ ಸಹಿ ಹಾಕಿದರು. ಪ್ರಭಾರ ಹೈಕಮಿಷನರ್ ಸುಜಿತ್ ಘೋಷ್ ಇದ್ದಾರೆ –ಎಪಿ ಚಿತ್ರ

ರಾಣಿ 2ನೇ ಎಲಿಜಬೆತ್ ಅಂತ್ಯಕ್ರಿಯೆ ಇಂದು: ರಾಷ್ಟ್ರಪತಿ ಮುರ್ಮು ಭಾಗಿ

ಲಂಡನ್ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೂರು ದಿನದ ಭೇಟಿಗಾಗಿ ಇಲ್ಲಿಗೆ ಆಗಮಿಸಿದ್ದು, ಸೋಮವಾರ ನಡೆಯುವ ರಾಣಿ 2ನೇ ಎಲಿಜಬೆತ್ ಅವರ ಅಂತ್ಯಕ್ರಿಯೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಅಂತ್ಯಕ್ರಿಯೆ ವೆಸ್ಟ್‌ಮಿನಿಸ್ಟರ್ ಅಬೆಯಲ್ಲಿ ಸ್ಥಳೀಯ ಕಾಲಮಾನ ಬೆಳಿಗ್ಗೆ 11ಕ್ಕೆ ನಡೆಯಲಿದೆ. ಭಾರತ ಸರ್ಕಾರದ ಪರವಾಗಿ ರಾಷ್ಟ್ರಪತಿ ಅವರು ಗೌರವ ನಮನ ಸಲ್ಲಿಸಲಿದ್ದಾರೆ.

ಅಂತ್ಯಕ್ರಿಯೆಯಲ್ಲಿ ಭಾಗಿಯಾಗಲು ಅಮೆರಿಕ ಅಧ್ಯಕ್ಷ ಜೋ ಬೈಡನ್, ವಿವಿಧ ರಾಷ್ಟ್ರಗಳ ಪ್ರಮುಖರು ಸೇರಿ 500ಕ್ಕೂ ಹೆಚ್ಚು ನಾಯಕರು ಆಗಮಿಸಿದ್ದಾರೆ. ಎರಡು ಸಾವಿರಕ್ಕೂ ಹೆಚ್ಚು ಗಣ್ಯರು ಭಾಗವಹಿಸುವ ನಿರೀಕ್ಷೆ ಇದೆ. 10 ಲಕ್ಷಕ್ಕೂ ಅಧಿಕ ಜನರು ಭಾಗಿಯಾಗುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಲ್ಯಾನ್‌ಕಾಸ್ಟರ್ ಹೌಸ್‌ನ ವೆಸ್ಟ್ ಮಿನಿಸ್ಟರ್ ಸಭಾಂಗಣದಲ್ಲಿ ರಾಣಿಯ ಪಾರ್ಥಿವ ಶರೀರಕ್ಕೆ ನಮನ ಸಲ್ಲಿಸಿದ ರಾಷ್ಟ್ರಪತಿ ಅವರು ಬಳಿಕ ಸಂತಾಪ ಸೂಚಕ ಕಡತದಲ್ಲಿ ಸಹಿಯನ್ನು ಹಾಕಿದರು.

ವಿಶಾಲ ಪರದೆ ಅಳವಡಿಕೆ: ಅಂತ್ಯಕ್ರಿಯೆ ಕಾರ್ಯದ ವೀಕ್ಷಣೆಗೆ ಅನುವಾಗುವಂತೆ ಲಂಡನ್‌ನ ಹೈಡ್ ಪಾರ್ಕ್, ಶೆಫೀಲ್ಡ್ ಕ್ಯಾಥೆಡ್ರಲ್ ಸ್ಕ್ವೈರ್, ಬರ್ಮಿಂಗ್‌ಹ್ಯಾಂ ಸೆಂಟಿನರಿ ಸ್ಕ್ವೈರ್, ಎಡಿನ್‌ಬರ್ಗ್ ಹಾಲಿರೂಡ್ ಪಾರ್ಕ್ ಸೇರಿ ವಿವಿಧೆಡೆ ವಿಶಾಲ ಪರದೆಗಳನ್ನು ಅಳವಡಿಸಲಾಗಿದೆ ಎಂದು ಅಲ್ಲಿನ ಸಂಸ್ಕೃತಿ ಮತ್ತು ಕ್ರೀಡಾ ಇಲಾಖೆಯು ತಿಳಿಸಿದೆ.

ನೇರ ತೆರಿಗೆ ಸಂಗ್ರಹ ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಸೆಪ್ಟೆಂಬರ್ 17ರವರೆಗೆ ನೇರ ತೆರಿಗೆ ಸಂಗ್ರಹವು ಒಟ್ಟು ಶೇಕಡ 30ರಷ್ಟು ಹೆಚ್ಚಾಗಿದ್ದು, ₹ 8.36 ಲಕ್ಷ ಕೋಟಿಗೆ ತಲುಪಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಹೇಳಿದೆ.

'ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 6.42 ಲಕ್ಷ ಕೋಟಿಯಷ್ಟು ನೇರ ತೆರಿಗೆ ಸಂಗ್ರಹ ಆಗಿತ್ತು' ಎಂದು ಸಚಿವಾಲಯ ಹೇಳಿದೆ.

ಒಟ್ಟು ತೆರಿಗೆ ಸಂಗ್ರಹದಲ್ಲಿ ಕಾರ್ಪೊರೇಟ್ ಆದಾಯ ತೆರಿಗೆ, ವೈಯಕ್ತಿಕ ಆದಾಯ ತೆರಿಗೆ ಹಾಗೂ ಷೇರು ವಹಿವಾಟಿಗೆ ವಿಧಿಸುವ ತೆರಿಗೆ ಸೇರಿದೆ.

ರೀಫಂಡ್ ಮೂಲಕ ವಾಪಸ್ ಕೊಡಬೇಕಿರುವ ಮೊತ್ತವನ್ನು ಪರಿಗಣಿಸಿದರೆ ನೇರ ತೆರಿಗೆ ಸಂಗ್ರಹವು ₹ 7 ಲಕ್ಷ ಕೋಟಿ ಆಗಿತ್ತು. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಇದು ₹ 5.68 ಲಕ್ಷ ಕೋಟಿ ಆಗಿತ್ತು.

ಅಕ್ಕಿ ಬೆಲೆ ಇಳಿಕೆ ಸಾಧ್ಯತೆ ಕಡಿಮೆ

ಒಂದನೇ ಪುಟದಿಂದ

ಮುಂಗಾರು ಹಂಗಾಮಿನಲ್ಲಿ ಅಕ್ಕಿ ಉತ್ಪಾದನೆ 1.2 ಕೋಟಿ ಟನ್ ಕಡಿಮೆ ಆದರೂ ದೇಶಿ ಮಾರುಕಟ್ಟೆಯಲ್ಲಿ ಲಭ್ಯತೆಗೆ ದೊಡ್ಡ ಅಪಾಯ ಉಂಟಾಗದು ಎಂದು ಅವರು ಹೇಳಿದ್ದಾರೆ.

ಗ್ರಾಹಕ ಬೆಲೆ ಸೂಚ್ಯಂಕದ ಈಚೆಗಿನ ಅಂಕಿ–ಅಂಶಗಳ ಪ್ರಕಾರ ಅಕ್ಕಿ ಬೆಲೆಯು ಆಗಸ್ಟ್ ತಿಂಗಳೊಂದರಲ್ಲಿ ಶೇ 6.94ರಷ್ಟು ಹೆಚ್ಚಾಗಿದೆ.

ಹಿಂದಿನ ವರ್ಷದ ಆಗಸ್ಟ್‌ನಲ್ಲಿ ಅಕ್ಕಿಯ ಹಣದುಬ್ಬರ ಪ್ರಮಾಣವು ಶೇ (–)1.2ರಷ್ಟು ಇತ್ತು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹400-670

ದ್ವಿತಳಿ (ಬಿ.ವಿ) ₹376-826

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ ₹440

12 ಮೊಟ್ಟೆಗೆ ₹60

ಮೈಸೂರು

100 ಮೊಟ್ಟೆಗೆ ₹440

ಚೀನಾ: ಬಸ್ ಮುಗುಚಿ 27 ಸಾವು

ಬೀಜಿಂಗ್ (ಎಪಿ): ಚೀನಾದ ನೈರುತ್ಯ ಭಾಗದಲ್ಲಿ ಹೆದ್ದಾರಿಯಲ್ಲಿ ಭಾನುವಾರ ಬಸ್ ಮುಗುಚಿದ ಪರಿಣಾಮ 27 ಮಂದಿ ಮೃತಪಟ್ಟಿದ್ದು, 20 ಮಂದಿ ಗಾಯಗೊಂಡಿದ್ದಾರೆ.

ಸಂದು ಪ್ರಾಂತ್ಯದ ಗಯಾಂಗ್‌ನಲ್ಲಿ ಘಟನೆ ನಡೆದಿದೆ. ಬಸ್‌ನಲ್ಲಿ 47 ಜನರಿದ್ದರು. ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೊಹಾಲಿ ನೆಟ್ಸ್‌ನಲ್ಲಿ ವಿರಾಟ್ ತಾಲೀಮು

ವಿಶ್ವಕಪ್ ಟೂರ್ನಿಗೂ ಮುನ್ನ 'ಆರಾಮ ವಲಯ' ಬಿಡಿ: ರೋಹಿತ್ ಸಲಹೆ

ಮೊಹಾಲಿ (ಪಿಟಿಐ): ದುಬೈನಲ್ಲಿ ಈಚೆಗೆ ಮುಗಿದ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಶತಕ ಬಾರಿಸುವ ಮೂಲಕ ದೀರ್ಘ ಸಮಯದ ನಂತರ ಲಯಕ್ಕೆ ಮರಳಿದ ವಿರಾಟ್ ಕೊಹ್ಲಿ ಈಗ ಬಲಿಷ್ಠ ಆಸ್ಟ್ರೇಲಿಯಾ ಎದುರು ಅಬ್ಬರಿಸುವ ಛಲದಲ್ಲಿದ್ದಾರೆ.

ಮಂಗಳವಾರ ಪಂಜಾಬ್ ಕ್ರಿಕೆಟ್ ಸಂಸ್ಥೆಯ ಮೈದಾನದಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ಎದುರಿನ ಮೊದಲ ಟಿ20 ಪಂದ್ಯಕ್ಕಾಗಿ ಭಾನುವಾರ ನೆಟ್ಸ್‌ನಲ್ಲಿ ವಿರಾಟ್ ಬ್ಯಾಟಿಂಗ್ ಅಭ್ಯಾಸ ಮಾಡಿದ ರೀತಿಯಲ್ಲಿಯೇ ಅವರ ಉದ್ದೇಶ ಸ್ಪಷ್ಟವಾಗಿ ಕಾಣುತ್ತಿತ್ತು.

ಸುಮಾರು 45 ನಿಮಿಷ ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದ ಅವರು, ಶಾರ್ಟ್‌ಬಾಲ್‌ಗಳನ್ನು ಎದುರಿಸುವತ್ತ ಚಿತ್ತ ನೆಟ್ಟರು. ವೇಗವಾಗಿ ಪುಟಿದು ಬರುವ ಎಸೆತಗಳನ್ನು ತಾವು ಎಡವುತ್ತಿರುವುದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಿದರು. ವೇಗದ ಬೌಲರ್‌ಗಳ ಎಸೆತಗಳಲ್ಲಿ ಪುಲ್ ಶಾಟ್‌ಗಳನ್ನು ಅಭ್ಯಾಸ ಮಾಡಿದರು. ಸ್ಪಿನ್ನರ್‌ಗಳಿಗೆ ಮುಂದಡಿ ಇಟ್ಟು ಬ್ಯಾಟ್ ಮಾಡುವ ಕೌಶಲದ ತಾಲೀಮು ನಡೆಸಿದರು.

ಏಷ್ಯಾ ಕಪ್ ಟೂರ್ನಿಯಲ್ಲಿ ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ ಅವರು ಭಾರತದ ಇನಿಂಗ್ಸ್ ಆರಂಭಿಸಿದ್ದರು. ಸುಮಾರು 34 ತಿಂಗಳುಗಳಿಂದ ಅವರು ಎದುರಿಸಿದ್ದ ಶತಕದ ಬರ ಅಂದು ನೀಗಿತ್ತು. ಇದು ಅವರ ಆತ್ಮವಿಶ್ವಾಸವನ್ನು ವೃದ್ಧಿಸಿದೆ.

ಮೊಹಾಲಿಯ ಪಿಸಿಎ ಕ್ರೀಡಾಂಗಣದಲ್ಲಿ ಭಾರತ ತಂಡದ ವಿರಾಟ್ ಕೊಹ್ಲಿ ಟೆನಿಸ್ ಬಾಲ್ ಹಾಗೂ ರೆಕೆಟ್‌ನಲ್ಲಿ ವಾರ್ಮ್ ಅಪ್ ನಡೆಸಿದರು —ಎಎಫ್‌ಪಿ ಚಿತ್ರ

ಟಿ20 ವಿಶ್ವಕಪ್ ಟೂರ್ನಿಯು ಮುಂದಿನ ತಿಂಗಳು 16ರಂದು ಆರಂಭವಾಗಲಿದೆ. ಅದಕ್ಕೂ ಮುನ್ನ ಭಾರತವು ಆಸ್ಟ್ರೇಲಿಯಾ ಹಾಗೂ ದಕ್ಷಿಣ ಆಫ್ರಿಕಾ ಎದುರಿನ ಸರಣಿಗಳಲ್ಲಿ ಆಡಲಿದೆ. ಈ ಎರಡೂ ಸರಣಿಗಳು ತಂಡಕ್ಕೆ ಪೂರ್ವಸಿದ್ಧತೆಗೆ ವೇದಿಕೆಯಾಗಲಿವೆ.

ಆರಾಮ ವಲಯ ಬಿಡಿ: ಶರ್ಮಾ

'ಟಿ20 ವಿಶ್ವಕಪ್ ಟೂರ್ನಿಗೆ ಹೆಚ್ಚು ಸಮಯ ಉಳಿದಿಲ್ಲ. ಈಗ ಇರುವ ಎರಡು ಸರಣಿಗಳಲ್ಲಿ ನಮ್ಮ ಆಟಗಾರರು ತಮ್ಮ ಕೌಶಲಗಳನ್ನು ಉತ್ತಮಪಡಿಸಿಕೊಂಡು ಹೊಸ ತಂತ್ರಗಳನ್ನು ರೂಢಿಸಿಕೊಳ್ಳಬೇಕು. ಆರಾಮ ವಲಯ ಬಿಟ್ಟು ಸೃಜನಾತ್ಮಕವಾಗಿ ಚಿಂತಿಸಬೇಕು' ಎಂದು ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ.

ಈಚೆಗೆ ಯುಎಇಯಲ್ಲಿ ನಡೆದ ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಭಾರತ ತಂಡವು ಸೂಪರ್ ಫೋರ್ ಹಂತದಲ್ಲಿ ನಿರ್ಗಮಿಸಿತ್ತು. ಅದರಿಂದಾಗಿ ಭಾರತದ ಆತಿಥ್ಯದಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ಹಾಗೂ ದಕ್ಷಿಣ ಆಫ್ರಿಕಾ ಎದುರಿನ ಸರಣಿಗಳನ್ನು ಗಂಭೀರವಾಗಿ ಪರಿಗಣಿಸಲು ಶರ್ಮಾ ಹೇಳಿದ್ದಾರೆ.

'ತಂಡದಲ್ಲಿ ಆಟಗಾರರಿಗೆ ಸುರಕ್ಷತಾ ಭಾವ ತರುವುದು ನನ್ನ ಉದ್ದೇಶವಾಗಿತ್ತು. ಆದ್ದರಿಂದಲೇ ಈ ಎರಡೂ ಸರಣಿಗಳಿಗಿಂತಲೂ ಮುನ್ನವೇ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡವನ್ನು ಪ್ರಕಟಿಸಲಾಗಿದೆ' ಎಂದು ರೋಹಿತ್ ಶರ್ಮಾ ಹೇಳಿದರು.

ಶಮಿ ಬದಲು ಉಮೇಶ್

ನವದೆಹಲಿ (ಪಿಟಿಐ): ವೇಗದ ಬೌಲರ್ ಮೊಹಮ್ಮದ್ ಶಮಿ ಅವರಿಗೆ ಕೋವಿಡ್ ಆಗಿರುವುದು ಖಚಿತವಾಗಿದೆ. ಆದ್ದರಿಂದ ಅವರ ಬದಲಿಗೆ ಭಾರತ ತಂಡದಲ್ಲಿ ಉಮೇಶ್ ಯಾದವ್ ಅವರಿಗೆ ಸ್ಥಾನ ನೀಡಲಾಗಿದೆ.

'ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಶಮಿ ಆಡಬೇಕಿತ್ತು. ಶನಿವಾರ ರಾತ್ರಿ ಅವರಿಗೆ ಕೋವಿಡ್ ಇರುವುದು ಖಚಿತವಾಯಿತು. ಆದ್ದರಿಂದ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಉಮೇಶ್ ಯಾದವ್ ಸ್ಥಾನ ಪಡೆದಿದ್ದಾರೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ದುಲೀಪ್ ಟ್ರೋಫಿ ಕ್ರಿಕೆಟ್: ದಕ್ಷಿಣ ವಲಯಕ್ಕೆ 645 ರನ್ ಜಯ

ಪ್ರಶಸ್ತಿಗೆ ದಕ್ಷಿಣ- ಪಶ್ಚಿಮ ವಲಯ ಪೈಪೋಟಿ

ಸೇಲಂ, ತಮಿಳುನಾಡು (ಪಿಟಿಐ): ದಕ್ಷಿಣ ವಲಯ ಮತ್ತು ಪಶ್ಚಿಮ ವಲಯ ತಂಡಗಳು ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದು, ಪ್ರಶಸ್ತಿಗೆ ಪೈಪೋಟಿ ನಡೆಸಲಿವೆ.

ಸೇಲಂನಲ್ಲಿ ಭಾನುವಾರ ಕೊನೆಗೊಂಡ ಸೆಮಿಫೈನಲ್‌ನಲ್ಲಿ ಹನುಮ ವಿಹಾರಿ ನೇತೃತ್ವದ ದಕ್ಷಿಣ ವಲಯ ತಂಡ, ಉತ್ತರ ವಲಯ ವಿರುದ್ಧ 645 ರನ್‌ಗಳ ಜಯ ಪಡೆಯಿತು. ದೇಸಿ ಕ್ರಿಕೆಟ್‌ನ ಪ್ರಥಮ ದರ್ಜೆ ಪಂದ್ಯವೊಂದರಲ್ಲಿ ದಾಖಲಾದ ಅತಿದೊಡ್ಡ ಗೆಲುವುಗಳಲ್ಲಿ ಇದೂ ಒಂದು.

ಅಂತಿಮ ದಿನ 4 ವಿಕೆಟ್‌ಗೆ 316 ರನ್ ಗಳಿಸಿ ಎರಡನೇ ಇನಿಂಗ್ಸ್ ಡಿಕ್ಲೇರ್ಡ್ ಮಾಡಿದ ದಕ್ಷಿಣ ವಲಯ, ಎದುರಾಳಿಗಳ ಗೆಲುವಿಗೆ 740 ರನ್‌ಗಳ ಗುರಿ ನೀಡಿತು. ಗುರಿ ಬೆನ್ನಟ್ಟಿದ ಉತ್ತರ ವಲಯ 94 ರನ್‌ಗಳಿಗೆ ಆಲೌಟಾಯಿತು.

ಮೊದಲ ಇನಿಂಗ್ಸ್‌ನಲ್ಲಿ ಏಳು ವಿಕೆಟ್ ಪಡೆದಿದ್ದ ಆರ್.ಸಾಯಿ ಕಿಶೋರ್ (28ಕ್ಕೆ 3) ಎರಡನೇ ಇನಿಂಗ್ಸ್‌ನಲ್ಲೂ ಕೈಚಳಕ ತೋರಿ ಪಂದ್ಯದಲ್ಲಿ ಒಟ್ಟಾರೆ 98 ರನ್‌ಗಳಿಗೆ 10 ವಿಕೆಟ್ ಸಾಧನೆ ಮಾಡಿದರು. ಉತ್ತರ ವಲಯ ತಂಡದ ಯಶ್ ಧೂಲ್ (59) ಮತ್ತು ಮನನ್ ವೊಹ್ರಾ (11) ಮಾತ್ರ ಎರಡಂಕಿಯ ಮೊತ್ತ ಗಳಿಸಿದರು.

ಪಶ್ಚಿಮ ವಲಯ ಜಯಭೇರಿ: ಕೊಯಮತ್ತೂರಿನಲ್ಲಿ ನಡೆದ ಇನ್ನೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಪಶ್ಚಿಮ ವಲಯ, 279 ರನ್‌ಗಳಿಂದ ಕೇಂದ್ರ ವಲಯ ತಂಡವನ್ನು ಮಣಿಸಿತು.

ಗೆಲುವಿಗೆ 501 ರನ್‌ಗಳ ಗುರಿ ಪಡೆದಿದ್ದ ಕೇಂದ್ರ ವಲಯ, 57.1 ಓವರ್‌ಗಳಲ್ಲಿ 221 ರನ್‌ಗಳಿಗೆ ಆಲೌಟಾಯಿತು. 72 ರನ್‌ಗಳಿಗೆ 5 ವಿಕೆಟ್ ಪಡೆದ ಶಮ್ಸ್ ಮುಲಾನಿ ಅವರು ಪಶ್ಚಿಮ ವಲಯದ ಗೆಲುವಿನ ಹಾದಿ ಸುಗಮಗೊಳಿಸಿದರು.

ದುಲೀಪ್ ಟ್ರೋಫಿ ಫೈನಲ್ ಪಂದ್ಯ ಸೆ.21 ರಿಂದ 25ರ ವರೆಗೆ ಕೊಯಮತ್ತೂರಿನಲ್ಲಿ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ವಲಯ 8 ವಿಕೆಟ್‌ಗೆ 630 ಡಿಕ್ಲೇರ್ಡ್. ಉತ್ತರ ವಲಯ 67 ಓವರ್‌ಗಳಲ್ಲಿ 207. ಎರಡನೇ ಇನಿಂಗ್ಸ್: ದಕ್ಷಿಣ ವಲಯ 65 ಓವರ್‌ಗಳಲ್ಲಿ 4 ವಿಕೆಟ್‌ಗೆ 316 ಡಿಕ್ಲೇರ್ಡ್ (ಮಯಂಕ್ ಅಗರವಾಲ್ 64, ರವಿ ತೇಜ ಔಟಾಗದೆ 104, ಮನೀಷ್ ಪಾಂಡೆ 26, ಪುಲಕಿತ್ ನಾರಂಗ್ 102ಕ್ಕೆ 2) ಉತ್ತರ ವಲಯ 30.4 ಓವರ್‌ಗಳಲ್ಲಿ 94 (ಯಶ್ ಧೂಲ್ 59, ಆರ್.ಸಾಯಿ ಕಿಶೋರ್ 28ಕ್ಕೆ 3, ತನಯ್ ತ್ಯಾಗರಾಜನ್ 12ಕ್ಕೆ 3, ಕೆ.ಗೌತಮ್ 50ಕ್ಕೆ 3) ಫಲಿತಾಂಶ: ದಕ್ಷಿಣ ವಲಯಕ್ಕೆ 645 ರನ್ ಗೆಲುವು

ಕೊಯಮತ್ತೂರಿನ ಪಂದ್ಯ: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 257. ಕೇಂದ್ರ ವಲಯ: 128. ಎರಡನೇ ಇನಿಂಗ್ಸ್: ಪಶ್ಚಿಮ ವಲಯ 371. ಕೇಂದ್ರ ವಲಯ 57.1 ಓವರ್‌ಗಳಲ್ಲಿ 221 (ರಿಂಕು ಸಿಂಗ್ 65, ಕುಮಾರ ಕಾರ್ತಿಕೇಯ 39, ಶಮ್ಸ್ ಮುಲಾನಿ 72ಕ್ಕೆ 5, ಚಿಂತನ್ ಗಜ 49ಕ್ಕೆ 3) ಫಲಿತಾಂಶ: ಪಶ್ಚಿಮ ವಲಯಕ್ಕೆ 279 ರನ್ ಗೆಲುವು

ಮುಖ್ಯಾಂಶಗಳು

- ಮತ್ತೆ ಮಿಂಚಿದ ಸಾಯಿ ಕಿಶೋರ್
- ಪಶ್ಚಿಮ ವಲಯಕ್ಕೆ 279 ರನ್ ಜಯ
- ಸೆ.21 ರಿಂದ ಫೈನಲ್ ಹಣಾಹಣಿ

ಹಣಕಾಸು ಸ್ವಾತಂತ್ರ್ಯಕ್ಕೆ ಗಮನಿಸಬೇಕಾದ ಸಂಗತಿಗಳು

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಆರ್ಥಿಕ ಸ್ವಾತಂತ್ರ್ಯ ಅಥವಾ ಹಣಕಾಸಿನ ಸ್ವಾತಂತ್ರ್ಯ ಯಾರಿಗೆ ಬೇಡ ಹೇಳಿ? ಹಣಕಾಸಿನ ವಿಚಾರದಲ್ಲಿ ಮತ್ತೊಬ್ಬರ ಮೇಲೆ ಅವಲಂಬಿತರಾಗಲು ಯಾರೂ ಇಷ್ಟಪಡುವುದಿಲ್ಲ. ಆದರೆ ಆರ್ಥಿಕ ಸ್ವಾತಂತ್ರ್ಯ ಸಾಧಿಸುವಾಗ ಹಲವು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಹಣಕಾಸು ಸ್ವಾತಂತ್ರ್ಯವನ್ನು ರಾತ್ರೋರಾತ್ರಿ ಸಾಧಿಸಲು ಸಾಧ್ಯವಿಲ್ಲ, ಅದೊಂದು ವ್ಯವಸ್ಥಿತ ಪ್ರಕ್ರಿಯೆ. ಹಣಕಾಸು ಸ್ವಾತಂತ್ರ್ಯ ಸಾಧಿಸಲು ಎಷ್ಟು ಬೇಗ ಸೂಕ್ತ ಮಾರ್ಗ ರೂಪಿಸಿಕೊಳ್ಳುವಿರೋ ಅಷ್ಟು ಬೇಗ ಗುರಿ ತಲುಪಬಹುದು.

ಹಣಕಾಸು ಸ್ವಾತಂತ್ರ್ಯ ಎಂದರೇನು?: ಕುಟುಂಬದ ಖರ್ಚುವೆಚ್ಚಗಳನ್ನು ನಿಭಾಯಿಸಲು, ಜೀವನ ನಡೆಸಲು ನಿರ್ದಿಷ್ಟ ಉದ್ಯೋಗದಿಂದ ಬರುವ ಆದಾಯವನ್ನು ನೆಚ್ಚಿಕೊಳ್ಳದೇ ಇರುವ ಸ್ಥಿತಿಯನ್ನು ಆರ್ಥಿಕ ಸ್ವಾತಂತ್ರ್ಯ ಎಂದು ಹೇಳಬಹುದು. ಹೆಚ್ಚು ಉಳಿತಾಯ ಮಾಡುವುದು, ಬೇಗ ಹೂಡಿಕೆ ಆರಂಭಿಸುವುದು, ಕುಟುಂಬಕ್ಕೆ ಆರ್ಥಿಕ ಭದ್ರತೆ ಒದಗಿಸುವುದು, ಪರ್ಯಾಯ ಆದಾಯ ಮೂಲಗಳನ್ನು ಕಂಡುಕೊಳ್ಳುವುದು ಸೇರಿದಂತೆ ವ್ಯವಸ್ಥಿತ ಯೋಜನೆ ರೂಪಿಸಿಕೊಳ್ಳುವ ಮೂಲಕ ಹಣಕಾಸು ಸ್ವಾತಂತ್ರ್ಯ ಸಾಧಿಸಬಹುದು.

ಬೇಗ ಹೂಡಿಕೆ ಆರಂಭಿಸುವುದು ಮುಖ್ಯ: 'ದುಡ್ಡೇನು ಗಿಡದಲ್ಲಿ ಬೆಳೆಯುತ್ತಾ?' ಅಂತ ಮನೆಯ ಹಿರಿಯರು ಹೇಳುವುದನ್ನು ನೀವು ಕೇಳಿರಬಹುದು. ದುಡ್ಡು ಗಿಡದಲ್ಲಿ ಬೆಳೆಯುವುದಿಲ್ಲ, ನಿಜ. ಆದರೆ ಸಮಯದ ಮೌಲ್ಯವನ್ನು ಅರಿತು ಉಳಿತಾಯ ಮಾಡಿದರೆ ನಾವು ದುಡ್ಡನ್ನು ಬೆಳೆಸಬಹುದು.

ಆಶ್ಚರ್ಯ ಅನ್ನಿಸಿದರೂ ಇದು ಸತ್ಯ. ರಾಮ, ಶಾಮ, ಭಾಮ ಎನ್ನುವ ಮೂವರು ಸ್ನೇಹಿತರಿದ್ದರು (ಇವರು ಕಾಲ್ಪನಿಕ ವ್ಯಕ್ತಿಗಳು). ಈ ಮೂವರು ಒಂದೇ ವರ್ಷ ಪದವಿ ಮುಗಿಸಿ 25ನೇ ವಯಸ್ಸಿಗೆ ದುಡಿಮೆ ಆರಂಭಿಸಿದರು. ರಾಮ ಕೆಲಸಕ್ಕೆ ಸೇರಿದ ಆರಂಭದಿಂದಲೇ ಪ್ರತಿ ತಿಂಗಳಿಗೆ ₹ 5 ಸಾವಿರ ಹೂಡಿಕೆ ಮಾಡಲು ಶುರು ಮಾಡಿದ. ಆದರೆ ಶಾಮ ಕೆಲಸಕ್ಕೆ ಸೇರಿದ ಮೊದಲ 5 ವರ್ಷ ಮೋಜು–ಮಸ್ತಿ ಮಾಡಿ 30ನೇ ವಯಸ್ಸಿಗೆ ಮದುವೆ ಆದ ನಂತರ ಪ್ರತಿ ತಿಂಗಳು ₹ 5 ಸಾವಿರ ಹೂಡಿಕೆ ಮಾಡಲು ಮುಂದಾದ.

ಭಾಮ ಇನ್ನೂ ಸ್ವಲ್ಪ ಸಮಯ ತೆಗೆದುಕೊಂಡ. ಮದುವೆ ಆಗಿ, ಮಕ್ಕಳಾದ ನಂತರ 35ನೇ ವಯಸ್ಸಿನಿಂದ ಪ್ರತಿ ತಿಂಗಳು ₹ 5 ಸಾವಿರ ಹೂಡಿಕೆ ಶುರು ಮಾಡಿದ. ಹೀಗೆ ಮೂವರು ಕೂಡ ತಮ್ಮ 55ನೇ ವಯಸ್ಸಿನ ತನಕ ಹೂಡಿಕೆ ಮುಂದುವರಿಸಿದರು. ಎಲ್ಲರಿಗೂ ಹೂಡಿಕೆಯ ಮೇಲೆ ಸರಾಸರಿ ಶೇ 12ರಷ್ಟು ಲಾಭ ಸಿಕ್ಕಿತು. ಆದರೆ 55ನೆಯ ವಯಸ್ಸಿನಲ್ಲಿ ಎಲ್ಲರಿಗೂ ಸಿಕ್ಕ ಒಟ್ಟು ಮೊತ್ತದಲ್ಲಿ ಭಾರೀ ವ್ಯತ್ಯಾಸವಿತ್ತು (ಪಟ್ಟಿ ಗಮನಿಸಿ).

ರಾಮ ಒಟ್ಟು 30 ವರ್ಷ ಹೂಡಿಕೆ ಮಾಡಿದ ಕಾರಣ ಅವನಿಗೆ ಒಟ್ಟು ₹ 1.74 ಕೋಟಿ ಸಿಕ್ಕಿತು. ಶಾಮ ಕೇವಲ ಐದು ವರ್ಷ ಕಡಿಮೆ, ಅಂದರೆ 25 ವರ್ಷ ಅವಧಿಗೆ ಹೂಡಿಕೆ ಮಾಡಿದ ಕಾರಣ ಅವನಿಗೆ ರಾಮನ ಅರ್ಧದಷ್ಟು ಮೊತ್ತ ಅಂದರೆ ₹ 93.94 ಕೋಟಿ ಮಾತ್ರ ಲಭಿಸಿತು. 10 ವರ್ಷ ತಡವಾಗಿ ಹೂಡಿಕೆ ಶುರುಮಾಡಿದ ಪರಿಣಾಮ ಭಾಮನಿಗೆ ₹ 49.46 ಲಕ್ಷ ಮಾತ್ರ ದಕ್ಕಿತು. ಬೇಗ ಹೂಡಿಕೆ ಆರಂಭಿಸುವುದು ಎಷ್ಟು ಮುಖ್ಯ ಎನ್ನುವುದು ಈ ಉದಾಹರಣೆಯಿಂದ ಅರಿವಿಗೆ ಬರುತ್ತದೆ.

ನೆನಪಿಡಿ: ಮೇಲಿನ ಪಟ್ಟಿಯಲ್ಲಿ ವಿವರಿಸಿರುವಂತೆ ಬೇಗ ಹೂಡಿಕೆ ಮಾಡಿದಾಗ ಹಣದ ಬೆಳವಣಿಗೆಗೆ ಹೆಚ್ಚು ಸಮಯ ಸಿಗುವ ಜೊತೆಗೆ ಚಕ್ರಬಡ್ಡಿಯ ಲಾಭವೂ ದೊರೆಯುತ್ತದೆ. ಹಣಕಾಸು ಸ್ವಾತಂತ್ರ್ಯ ಸಾಧಿಸಲು ಇರುವ ಅತ್ಯಂತ ಶಕ್ತಿಶಾಲಿ ಮಾರ್ಗ ಬೇಗ ಉಳಿತಾಯ ಶುರುಮಾಡುವುದು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಮತ್ತೆ ಮುಗ್ಗರಿಸಿದ ಸೂಚ್ಯಂಕಗಳು

ಸೆಪ್ಟೆಂಬರ್ 16ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಗಣನೀಯ ಕುಸಿತ ಕಂಡಿವೆ. 58,840 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.59ರಷ್ಟು ಇಳಿಕೆಯಾಗಿದೆ. 17,530 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.70ರಷ್ಟು ತಗ್ಗಿದೆ. ಅಮೆರಿಕದಲ್ಲಿ ಏರುಗತಿಯಲ್ಲಿರುವ ಹಣದುಬ್ಬರ ನಿಯಂತ್ರಣಕ್ಕೆ ಬಡ್ಡಿ ದರ ಹೆಚ್ಚಳದ ಅಸ್ತ್ರ ಪ್ರಯೋಗ ಆಗಬಹುದು ಎಂಬ ಆತಂಕದಿಂದಾಗಿ ಜಾಗತಿಕ ಮಾರುಕಟ್ಟೆಗಳಲ್ಲಿ ಮಾರಾಟದ ಒತ್ತಡ ಕಂಡುಬಂತು. ಇದರ ಪರಿಣಾಮವು ದೇಶಿ ಮಾರುಕಟ್ಟೆಗಳ ಮೇಲೂ ಆಯಿತು.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಪವರ್ ಸೂಚ್ಯಂಕ ಶೇ 1.80ರಷ್ಟು ಗಳಿಸಿದೆ. ಬಿಎಸ್‌ಇ ಬ್ಯಾಂಕೆಕ್ಸ್ ಸೂಚ್ಯಂಕ ಮತ್ತು ಲೋಹ ಸೂಚ್ಯಂಕ ಸಹ ಸಕಾರಾತ್ಮಕ ಗಳಿಕೆ ಕಂಡಿವೆ. ಬಿಎಸ್‌ಇ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 6.72ರಷ್ಟು, ರಿಯಲ್ ಎಸ್ಟೇಟ್, ತೈಲ ಮತ್ತು ಅನಿಲ ಸೂಚ್ಯಂಕ ಕ್ರಮವಾಗಿ ಶೇ 3.23ರಷ್ಟು ಮತ್ತು ಶೇ 2.93ರಷ್ಟು ತಗ್ಗಿವೆ. ನಿಫ್ಟಿ ಸೂಚ್ಯಂಕದಲ್ಲಿ 15ಕ್ಕೂ ಹೆಚ್ಚು ಕಂಪನಿಗಳ ಷೇರುಗಳು ಸಕಾರಾತ್ಮಕ ಗಳಿಕೆ ದಾಖಲಿಸಿವೆ. ಇಂಡಸ್ ಇಂಡ್ ಬ್ಯಾಂಕ್ ಶೇ 7.93ರಷ್ಟು ಗಳಿಸಿಕೊಂಡಿದೆ. ಪವರ್ ಗ್ರಿಡ್ ಶೇ 3.72ರಷ್ಟು, ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ ಶೇ 3.46ರಷ್ಟು, ಮಾರುತಿ ಸುಜುಕಿ ಇಂಡಿಯಾ ಶೇ 2.72ರಷ್ಟು, ಐಷರ್ ಮೋಟರ್ಸ್, ಭಾರ್ತಿ ಏರ್‌ಟೆಲ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಜಾಜ್ ಫೈನಾನ್ಸ್ ತಲಾ ಶೇ 1ರಷ್ಟು ಗಳಿಸಿಕೊಂಡಿವೆ.

ಮತ್ತೊಂದೆಡೆ ದೈತ್ಯ ಐ.ಟಿ. ಕಂಪನಿಗಳಾದ ಇನ್ಫೊಸಿಸ್, ಟೆಕ್ ಮಹೀಂದ್ರ ಮತ್ತು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಕ್ರಮವಾಗಿ ಶೇ 8.90ರಷ್ಟು, ಶೇ 8.29ರಷ್ಟು ಮತ್ತು ಶೇ 6.49ರಷ್ಟು ಕುಸಿದಿವೆ.

ಮುನ್ನೋಟ: ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರತದ ಮಾರುಕಟ್ಟೆಯಲ್ಲಿ ಎಷ್ಟರ ಮಟ್ಟಿಗೆ ಹೂಡಿಕೆ ಮುಂದುವರಿಸಲಿದ್ದಾರೆ ಎನ್ನುವ ಅಂಶ ಮತ್ತು ಡಾಲರ್ ಎದುರು ರೂಪಾಯಿ ಮೌಲ್ಯದ ಬೆಳವಣಿಗೆಗಳನ್ನೂ ಹೂಡಿಕೆದಾರರು ಗಮನಿಸಲಿದ್ದಾರೆ. ಜಾಗತಿಕ ಮಟ್ಟದಲ್ಲಿ ನೋಡುವುದಾದರೆ, ಅಮೆರಿಕದ ಗೃಹ ಮಾರಾಟ ದತ್ತಾಂಶ, ಅಮೆರಿಕ ಫೆಡರಲ್ ಬ್ಯಾಂಕ್‌ನ ಬಡ್ಡಿ ದರ ತೀರ್ಮಾನ ಸೇರಿದಂತೆ ಇತರ ಬೆಳವಣಿಗೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಬೇಗ ಹೂಡಿಕೆ ಶುರುಮಾಡಿದರೆ ಹೆಚ್ಚು ಲಾಭ

ಹೆಸರು	ಪ್ರತಿ 30ಗಳ ಹೂಡಿಕೆ	ಹೂಡಿಕೆ ಅವಧಿ	ಸಿಕ್ಕ ಒಟ್ಟು ಮೊತ್ತ
ರಾಮ	₹5 ಸಾವಿರ	30 ವರ್ಷ	₹1.74 ಕೋಟಿ
ಶಾಮ	₹5 ಸಾವಿರ	25 ವರ್ಷ	₹93.94 ಲಕ್ಷ
ಭಾಮ	₹5 ಸಾವಿರ	20 ವರ್ಷ	₹49.46 ಲಕ್ಷ

(ಗಮನಿಸಿ: ಹೂಡಿಕೆ ಮೇಲೆ ಶೇ 12ರ ಲಾಭಾಂಶ ಎನ್ನುವ ಲೆಕ್ಕಾಚಾರದಲ್ಲಿ ಈ ಪಟ್ಟಿ ತಯಾರಿಸಲಾಗಿದೆ)

ಸಂಕ್ಷಿಪ್ತ ಸುದ್ದಿ

ತೈವಾನ್: ಪ್ರಬಲ ಭೂಕಂಪ

ಬೀಜಿಂಗ್ (ಎಪಿ): ತೈವಾನ್‌ನ ಹಲವೆಡೆ ಭೂಕಂಪನ ಸಂಭವಿಸಿದ್ದು ಒಬ್ಬರು ಸಾವಿಗೀಡಾಗಿದ್ದಾರೆ. ನಾಲ್ವರು ಸಿಲುಕಿದ್ದು, ರಕ್ಷಣಾ ಕಾರ್ಯ ನಡೆದಿದೆ. ಭೂಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 6.4 ದಾಖಲಾಗಿದೆ.

ಬೆಟ್ಟ ಪ್ರದೇಶಗಳಲ್ಲಿ ಸುಮಾರು 400 ಮಂದಿ ಸಿಲುಕಿದ್ದಾರೆ. ರೈಲು ಸಂಚಾರ ಅಸ್ತವ್ಯಸ್ತಗೊಂಡಿದೆ. ಸಾವು ಪ್ರಕರಣಗಳು ತಕ್ಷಣಕ್ಕೆ ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿಶಾಂಗ್ ನಗರ ಭೂಕಂಪನದ ಕೇಂದ್ರಬಿಂದುವಾಗಿದೆ ಎಂದು ತೈವಾನ್‌ನ ಹವಾಮಾನ ಇಲಾಖೆ ತಿಳಿಸಿದೆ. ಯುಲಿ ನಗರದಲ್ಲಿ 3 ಅಂತಸ್ತಿನ ಕಟ್ಟಡ ಕುಸಿದಿದೆ. 7,000 ಮನೆಗಳಿಗೆ ವಿದ್ಯುತ್ ಸಂಪರ್ಕ ಕಡಿತವಾಗಿದೆ.

ಘಟನಾ ಸ್ಥಳದಿಂದ ಒಬ್ಬರನ್ನು ರಕ್ಷಿಸಿದ್ದು, ಸಿಕ್ಕಿಬಿದ್ದಿರುವ ಮೂವರ ರಕ್ಷಣೆಗೆ ಕಾರ್ಯಾಚರಣೆ ನಡೆದಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಈ ಬೆನ್ನಲ್ಲೇ ಜಪಾನ್‌ನ ಹವಾಮಾನ ಇಲಾಖೆ ತೈವಾನ್ ಬಳಿ ದಕ್ಷಿಣ ಜಪಾನ್ ದ್ವೀಪ ಪ್ರದೇಶಗಳಿಗೆ ಸುನಾಮಿ ಎಚ್ಚರಿಕೆ ನೀಡಿತ್ತು. ಕೆಲಹೊತ್ತಿನಲ್ಲೇ ವಾಪಸು ಪಡೆಯಿತು.

ಗಣಿಯಲ್ಲಿ ಪ್ರವಾಹ: 14 ಸಾವು, ಒಬ್ಬ ನಾಪತ್ತೆ

ಬೀಜಿಂಗ್ (ಎಪಿ): ಚೀನಾದ ಹೆಬೆ ಪ್ರಾಂತ್ಯದಲ್ಲಿರುವ ಕಬ್ಬಿಣದ ಗಣಿಯಲ್ಲಿ ಉಂಟಾಗಿರುವ ಪ್ರವಾಹದಲ್ಲಿ 14 ಮಂದಿ ಮೃತಪಟ್ಟಿದ್ದು, ಒಬ್ಬರು ನಾಪತ್ತೆಯಾಗಿದ್ದಾರೆ ಎಂದು ಹೇಳಿಕೆ ತಿಳಿಸಿದೆ. ಸೆ. 2ರಂದು ಅವಘಡ ಸಂಭವಿಸಿದ್ದು, ರಕ್ಷಣಾ ಕಾರ್ಯಾಚರಣೆ ಮುಗಿದಿದೆ. ತನಿಖೆ ಪ್ರಗತಿಯಲ್ಲಿದೆ ಎಂದು ತಂಗ್‌ಶಾನ್ ನಗರದ ಸ್ಥಳೀಯ ಆಡಳಿತ ತಿಳಿಸಿದೆ.

ಫುಟ್‌ಬಾಲ್: ಫೈನಲ್‌ನಲ್ಲಿ ಮುಂಬೈ ಸಿಟಿ ವಿರುದ್ಧ 2–1 ಗೋಲುಗಳ ಗೆಲುವು

ಬೆಂಗಳೂರು ಎಫ್‌ಸಿಗೆ ಡುರಾಂಡ್ ಕಪ್

ಡುರಾಂಡ್ ಕಪ್ ಗೆದ್ದುಕೊಂಡ ಬೆಂಗಳೂರು ಎಫ್‌ಸಿ ತಂಡದ ಆಟಗಾರರು ಸಂಭ್ರಮಿಸಿದರು –ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡ ಮೊದಲ ಬಾರಿ ಡುರಾಂಡ್ ಕಪ್ ಟ್ರೋಫಿ ಗೆದ್ದುಕೊಂಡು ಸಂಭ್ರಮಿಸಿತು.

ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ 2–1 ಗೋಲುಗಳಿಂದ ಪ್ರಬಲ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಮಣಿಸಿತು.

ಶಿವಶಕ್ತಿ (10ನೇ ನಿ.) ಮತ್ತು ಆ್ಯಲನ್ ಕೋಸ್ಟಾ (61ನೇ ನಿ.) ಅವರು ಗೋಲು ಗಳಿಸಿ ಬಿಎಫ್‌ಸಿ ತಂಡದ ಗೆಲುವಿನ ರೂವಾರಿ ಎನಿಸಿಕೊಂಡರು. ಮುಂಬೈ ತಂಡದ ಗೋಲನ್ನು ಅಪುಯಾ 30ನೇ ನಿಮಿಷದಲ್ಲಿ ತಂದಿತ್ತರು.

38 ವರ್ಷದ ಚೆಟ್ರಿ ಅವರು ಗೆದ್ದಿರುವ ಟ್ರೋಫಿಗಳ ಪಟ್ಟಿಯಲ್ಲಿ ಡುರಾಂಡ್ ಕಪ್ ಇರಲಿಲ್ಲ. ಅದೇ ರೀತಿ 2013ರಲ್ಲಿ ಅಸ್ತಿತ್ವಕ್ಕೆ ಬಂದ ಬಿಎಫ್‌ಸಿ ತಂಡಕ್ಕೆ ಪ್ರಮುಖ ಎಲ್ಲ ಪ್ರಶಸ್ತಿಗಳು ದಕ್ಕಿದ್ದರೂ ಡುರಾಂಡ್ ಕಪ್ ಮಾತ್ರ ಗೆದ್ದಿರಲಿಲ್ಲ. ಈ ಟ್ರೋಫಿಯೊಂದಿಗೆ ಚೆಟ್ರಿ ಹಾಗೂ ಬಿಎಫ್‌ಸಿ ತಂಡದ ಕೊರಗು ನೀಗಿದೆ.

2018–19ರ ಸಾಲಿನ ಇಂಡಿಯನ್ ಸೂಪರ್ ಲೀಗ್ ಚಾಂಪಿಯನ್ ಆಗಿರುವ ಬಿಎಫ್‌ಸಿ, ದೇಶಿ ಫುಟ್‌ಬಾಲ್‌ನ ಪ್ರಮುಖ ಆರು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ಇದೀಗ ಡುರಾಂಡ್ ಕಪ್ ಗೆದ್ದು, ತನ್ನ ಶಕ್ತಿ ಏನೆಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿತು.

ಎರಡು ಬಲಿಷ್ಠ ತಂಡಗಳ ನಡುವಿನ ಪಂದ್ಯ ರೋಚಕತೆಯಿಂದ ಕೂಡಿತ್ತು. ಹೊಂದಾಣಿಕೆಯ ಆಟವಾಡಿದ ಬಿಎಫ್‌ಸಿ ಬೇಗನೇ ಮುನ್ನಡೆ ಗಳಿಸಿತು. 10ನೇ ನಿಮಿಷದಲ್ಲಿ ಶಿವಶಕ್ತಿ ಅವರು ಚೆಂಡನ್ನು ನಿಯಂತ್ರಣಕ್ಕೆ ಪಡೆದು ಎದುರಾಳಿ ಗೋಲ್‌ಕೀಪರ್ ತಲೆಮೇಲಿಂದ ಗುರಿ ಸೇರಿಸಿದರು.

ಹಿನ್ನಡೆ ಅನುಭವಿಸಿದ ಮುಂಬೈ ಎಫ್‌ಸಿ ಮೇಲಿಂದ ಮೇಲೆ ಪ್ರತ್ಯಾಕ್ರಮಣ ನಡೆಸಿತು. ಅವರ ಪ್ರಯತ್ನಕ್ಕೆ 30ನೇ ನಿಮಿಷದಲ್ಲಿ ಫಲ ಲಭಿಸಿತು. ಗ್ರೆಗ್ ಸ್ಟಿವರ್ಟ್ ಅವರು ಗೋಲುಪೆಟ್ಟಿಗೆ ಗುರಿಯಾಗಿಸಿ ಒದ್ದ ಚೆಂಡನ್ನು ಬಿಎಫ್‌ಸಿ ಗೋಲ್‌ಕೀಪರ್ ತಡೆದರೂ, ರಿಬೌಂಡ್ ಆಗಿ ಬಂದ ಚೆಂಡನ್ನು ಅಪುಯಾ ಸುಲಭವಾಗಿ ಗುರಿ ಸೇರಿಸಿದರು. 1–1 ಸಮಬಲದೊಂದಿಗೆ ಎರಡೂ ತಂಡಗಳ ಆಟಗಾರರು ವಿರಾಮಕ್ಕೆ ತೆರಳಿದರು.

ಎರಡನೇ ಅವಧಿಯಲ್ಲೂ ತುರುಸಿನ ಪೈಪೋಟಿ ನಡೆಯಿತು. 61ನೇ ನಿಮಿಷದಲ್ಲಿ ಬಿಎಫ್‌ಸಿ ನಿರ್ಣಾಯಕ ಮುನ್ನಡೆ ಗಳಿಸಿತು. ಕಾರ್ನರ್ ಕಿಕ್ ಅವಕಾಶದಲ್ಲಿ ಸುನಿಲ್ ಚೆಟ್ರಿ ಅವರು ಒದ್ದ ಚೆಂಡನ್ನು ಕೋಸ್ಟಾ ಅವರು ಹೆಡರ್ ಮೂಲಕ ಗುರಿ ಸೇರಿಸಿ ಬಿಎಫ್‌ಸಿ ಪಾಳೆಯದಲ್ಲಿ ಹರ್ಷ ತಂದಿತ್ತರು.

ಆ ಬಳಿಕ ಮುಂಬೈ ತಂಡ ಸಮಬಲದ ಗೋಲಿಗಾಗಿ ಶಕ್ತಿಮೀರಿ ಪ್ರಯತ್ನಿಸಿದರೂ ಯಶಸ್ಸು ಲಭಿಸಲಿಲ್ಲ. ನಾಯಕ ಚೆಟ್ರಿ ಅವರಿಗೆ 69 ಮತ್ತು 87ನೇ ನಿಮಿಷಗಳಲ್ಲಿ ಗೋಲು ಗಳಿಸಲು ಉತ್ತಮ ಅವಕಾಶ ಲಭಿಸಿತ್ತಾದರೂ, ಅಲ್ಪ ಅಂತರದಲ್ಲಿ ಅವಕಾಶ ಕಳೆದುಕೊಂಡರು.

ಒಂದು ಗೋಲಿನ ಮುನ್ನಡೆಯನ್ನು ಕೊನೆಯವರೆಗೂ ಕಾಪಾಡಿಕೊಂಡ ಬಿಎಫ್‌ಸಿ ಗೆಲುವಿನ ಸಂಭ್ರಮ ಆಚರಿಸಿತು.

ಮುಖ್ಯಾಂಶಗಳು

- ಶಿವಶಕ್ತಿ, ಆ್ಯಲನ್ ಕೋಸ್ಟಾ ಗೋಲು
- 38 ವರ್ಷದ ಚೆಟ್ರಿಗೆ ಮೊದಲ ಡುರಾಂಡ್ ಕಪ್
- ಮುಂಬೈಗೆ ಗೋಲು ತಂದಿತ್ತ ಕೋಸ್ಟಾ

ಮಂದಾನ, ಕೌರ್ ಮಿಂಚು

ಕ್ರಿಕೆಟ್: ಇಂಗ್ಲೆಂಡ್ ಎದುರು ಭಾರತಕ್ಕೆ 7 ವಿಕೆಟ್ ಜಯ

ಭಾರತ ತಂಡಕ್ಕೆ ಆಸರೆಯಾದ ಸ್ಮೃತಿ ಮಂದಾನ

ಹೊವ್, ಇಂಗ್ಲೆಂಡ್ (ಪಿಟಿಐ): ಸ್ಮೃತಿ ಮಂದಾನ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಜವಾಬ್ದಾರಿಯುತ ಆಟದ ನೆರವಿನಿಂದ ಭಾರತ ಮಹಿಳಾ ತಂಡದವರು ಇಂಗ್ಲೆಂಡ್ ಎದುರಿನ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಏಳು ವಿಕೆಟ್‌ಗಳ ಜಯ ಸಾಧಿಸಿದರು.

ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 227 ರನ್ ಗಳಿಸಿತು. ಭಾರತ 44.2 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು. ಈ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ 1–0 ರಲ್ಲಿ ಮುನ್ನಡೆ ಗಳಿಸಿತು.

ಸ್ಮೃತಿ ಮಂದಾನ (91 ರನ್, 99 ಎ., 4X10, 6X1), ಹರ್ಮನ್‌ಪ್ರೀತ್ (ಔಟಾಗದೆ 74, 94 ಎ., 4X7, 6X1) ಮತ್ತು ಯಸ್ತಿಕಾ ಭಾಟಿಯಾ (50 ರನ್, 47 ಎ., 4X8, 6X1) ಅವರು ಭಾರತದ ಗೆಲುವಿನ ಹಾದಿಯನ್ನು ಸುಗಮಗೊಳಿಸಿದರು.

ಸಾಧಾರಣ ಗುರಿ ಬೆನ್ನಟ್ಟಿದ ಭಾರತ ತಂಡ, ಶಫಾಲಿ ವರ್ಮ (1) ಅವರನ್ನು ಬೇಗನೇ ಕಳೆದುಕೊಂಡಿತು. ಆದರೆ ಮಂದಾನ ಅವರು ಯಸ್ತಿಕಾ ಜತೆ ಎರಡನೇ ವಿಕೆಟ್‌ಗೆ 96 ಹಾಗೂ ಕೌರ್ ಜತೆ ಮೂರನೇ ವಿಕೆಟ್‌ಗೆ 99 ರನ್ ಸೇರಿಸಿ ತಂಡದ ಜಯಕ್ಕೆ ಕಾರಣರಾದರು.

ಉತ್ತಮ ಬೌಲಿಂಗ್: ತಮ್ಮ ವೃತ್ತಿಜೀವನದ ಕೊನೆಯ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡುತ್ತಿರುವ ಜೂಲನ್ ಗೋಸ್ವಾಮಿ ಹಾಗೂ ದೀಪ್ತಿ ಶರ್ಮಾ ಅವರ ಉತ್ತಮ ದಾಳಿಯಿಂದಾಗಿ ಇಂಗ್ಲೆಂಡ್ ಸಾಧಾರಣ ಮೊತ್ತ ಗಳಿಸಿತು.

ಇಂಗ್ಲೆಂಡ್‌ನ ಅಗ್ರ ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಆದರೆ, ಕೆಳಕ್ರಮಾಂಕದ ಡೇವಿಡಸನ್ ರಿಚರ್ಡ್ಸ್ (ಔಟಾಗದೆ 50; 61ಎ, 4X4), ಎಕ್ಸೆಲ್‌ಸ್ಟೋನ್ (31; 33ಎ, 4X4) ಹಾಗೂ ಶಾರ್ಲೊಟ್ ಡೀನ್ (ಔಟಾಗದೆ 24) ನೀಡಿದ ಮಹತ್ವದ ಕಾಣಿಕೆಗಳಿಂದಾಗಿ ತಂಡವು 200ರ ಗಡಿ ದಾಟಲು ಸಾಧ್ಯವಾಯಿತು.

10 ಓವರ್‌ಗಳನ್ನು ಬೌಲಿಂಗ್ ಮಾಡಿದ ಜೂಲನ್ ಕೇವಲ 20 ರನ್‌ಗಳನ್ನಷ್ಟೇ ಬಿಟ್ಟುಕೊಟ್ಟರು. ಒಂದು ವಿಕೆಟ್ ಕೂಡ ಗಳಿಸಿದರು. ಇನ್ನೊಂದೆಡೆ ದೀಪ್ತಿ ಶರ್ಮಾ (33ಕ್ಕೆ2) ಕೂಡ ಶಿಸ್ತಿನ ದಾಳಿ ನಡೆಸಿದರು. ಉಳಿದ ಬೌಲರ್‌ಗಳು ಕೂಡ ಉತ್ತಮವಾಗಿ ಬೌಲಿಂಗ್ ಮಾಡಿದ್ದರಿಂದ ಆತಿಥೇಯ ಬಳಗವನ್ನು ನಿಯಂತ್ರಿಸಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 50 ಓವರ್‌ಗಳಲ್ಲಿ 7ಕ್ಕೆ 227 (ಸೋಫಿಯಾ ಡಂಕ್ಲಿ 29, ಡೇನಿಯಲ್ ವ್ಯಾಟ್ 43, ಡೇವಿಡಸನ್ ರಿಚರ್ಡ್ಸ್ ಔಟಾಗದೆ 50, ಸೋಫಿ ಎಕ್ಸೆಲ್‌ಸ್ಟೋನ್ 31, ಶಾರ್ಲೊಟ್ ಡೀನ್ ಔಟಾಗದೆ 24, ದೀಪ್ತಿ ಶರ್ಮಾ 33ಕ್ಕೆ2)

ಭಾರತ: 44.2 ಓವರ್‌ಗಳಲ್ಲಿ 3 ವಿಕೆಟ್‌ಗೆ 232 (ಸ್ಮೃತಿ ಮಂದಾನ 91, ಯಸ್ತಿಕಾ ಭಾಟಿಯಾ 50, ಹರ್ಮನ್‌ಪ್ರೀತ್ ಕೌರ್ ಔಟಾಗದೆ 74, ಕೇರ್ ಕ್ರಾಸ್ 43ಕ್ಕೆ 2) ಫಲಿತಾಂಶ: ಭಾರತಕ್ಕೆ 7 ವಿಕೆಟ್ ಗೆಲುವು

ಸಂಕ್ಷಿಪ್ತ ಸುದ್ದಿ

ಚೆನ್ನೈ ಓಪನ್ ಪ್ರಶಸ್ತಿಯೊಂದಿಗೆ ಲಿಂಡಾ –ಎಎಫ್‌ಪಿ ಚಿತ್ರ

ಚೆನ್ನೈ ಓಪನ್: ಲಿಂಡಾ ಚಾಂಪಿಯನ್

ಚೆನ್ನೈ (ಪಿಟಿಐ): ಜೆಕ್ ಗಣರಾಜ್ಯದ ಲಿಂಡಾ ಫ್ರುವಿರ್ತೊವಾ ಅವರು ಡಬ್ಲ್ಯುಟಿಎ ಚೆನ್ನೈ ಓಪನ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು. ಭಾನುವಾರ ನಡೆದ ಫೈನಲ್‌ನಲ್ಲಿ 17 ವರ್ಷದ ಲಿಂಡಾ 4–6, 6–3, 6–4 ರಲ್ಲಿ ಮೂರನೇ ಶ್ರೇಯಾಂಕದ ಆಟಗಾರ್ತಿ ಮಾಗ್ಡಾ ಲಿನೆಟ್ ಅವರನ್ನು ಮಣಿಸಿದರು.

ಫುಟ್‌ಬಾಲ್: ಸ್ಟಿಮ್ಯಾಚ್ ಒಪ್ಪಂದ ವಿಸ್ತರಣೆ

ಕೋಲ್ಕತ್ತ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ಇಗೊರ್ ಸ್ಟಿಮ್ಯಾಚ್ ಅವರೊಂದಿಗಿನ ಒಪ್ಪಂದವನ್ನು 2023ರ ಜುಲೈವರೆಗೆ ಮುಂದುವರಿಸಲು ಎಐಎಫ್‌ಎಫ್ ತಾಂತ್ರಿಕ ಸಮಿತಿ ನಿರ್ಧರಿಸಿದೆ.

ದಿಗ್ಗಜ ಆಟಗಾರ ಐ.ಎಂ ವಿಜಯನ್ ನೇತೃತ್ವದ ತಾಂತ್ರಿಕ ಸಮಿತಿ ಭಾನುವಾರ ಸಭೆ ನಡೆಸಿ, ಸ್ಟಿಮ್ಯಾಚ್ ಅವರನ್ನು ಮುಂದುವರಿಸುವ ನಿರ್ಧಾರ ತೆಗೆದುಕೊಂಡಿತು.

‘ಎಎಫ್‌ಸಿ ಏಷ್ಯಾ ಕಪ್ 2023ರ ಜುಲೈನಲ್ಲಿ ನಡೆಯಲಿದ್ದು, ಅಲ್ಲಿಯವರೆಗೆ ಸ್ಟಿಮ್ಯಾಚ್ ಅವರನ್ನು ಕೋಚ್ ಆಗಿ ಮುಂದುವರಿಸಲು ತೀರ್ಮಾನಿಸಲಾಯಿತು’ ಎಂದು ಎಐಎಫ್‌ಎಫ್ ಪ್ರಕಟಣೆ ತಿಳಿಸಿದೆ.

ಕ್ರೊವೇಷ್ಯದ ಸ್ಟಿಮ್ಯಾಚ್ ಅವರು 2019ರ ಮೇ ತಿಂಗಳಲ್ಲಿ ರಾಷ್ಟ್ರೀಯ ತಂಡದ ಕೋಚ್ ಆಗಿ ನೇಮಕಗೊಂಡಿದ್ದರು. ಆ ಬಳಿಕ ಮೂರು ಸಲ ಅವರ ಒಪ್ಪಂದದ ಅವಧಿ ವಿಸ್ತರಿಸಲಾಗಿದೆ. 2021 ರಲ್ಲಿ ಎರಡು ಸಲ ಅವರೊಂದಿಗಿನ ಒಪ್ಪಂದವನ್ನು ವಿಸ್ತರಿಸಲಾಗಿತ್ತು.

ಹಾಕಿ: ಬೆಂಗಳೂರು ಬ್ಲೂಸ್‌ಗೆ ಗೆಲುವು

ಬೆಂಗಳೂರು: ಬೆಂಗಳೂರು ಬ್ಲೂಸ್ ಹಾಕಿ ತಂಡದವರು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ (ಕೆಎಸ್‌ಎಚ್‌ಎ) ಆಶ್ರಯದಲ್ಲಿ ನಡೆಯುತ್ತಿರುವ ಪ್ರೆಸಿಡೆಂಟ್ಸ್ ಕಪ್ ‘ಫೈವ್ ಎ ಸೈಡ್’ ಹಾಕಿ ಟೂರ್ನಿಯಲ್ಲಿ ಜಯ ಸಾಧಿಸಿದರು.

ಕೆಎಸ್‌ಎಚ್‌ಎ ಹಾಕಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಮಹಿಳೆಯರ ವಿಭಾಗದ ಪಂದ್ಯದಲ್ಲಿ ಬ್ಲೂಸ್ ತಂಡ 8–5 ಗೋಲುಗಳಿಂದ ಚಿನ್ಮಯ ವಿದ್ಯಾಲಯ ತಂಡವನ್ನು ಮಣಿಸಿತು.

ಇನ್ನೊಂದು ಪಂದ್ಯದಲ್ಲಿ ಜೆನಿತ್ ಹಾಕಿ ಕ್ಲಬ್, 10–4 ಗೋಲುಗಳಿಂದ ಬಿಷಪ್ ಕಾಟನ್ ತಂಡವನ್ನು ಮಣಿಸಿತು.

ಪುರುಷರ ವಿಭಾಗದ ಪಂದ್ಯಗಳಲ್ಲಿ ಜೆಎಫ್‌ಎಚ್‌ಎ 9–1 ರಲ್ಲಿ ಸ್ಟಾರ್ ಹಾಕಿ ಕ್ಲಬ್ ವಿರುದ್ಧ; ರೇನ್‌ಬೊ ಹಾಕಿ ಕ್ಲಬ್ 7–0 ರಲ್ಲಿ ನವೀನ್ ಹಾಕಿ ಕ್ಲಬ್ ವಿರುದ್ಧ ಗೆಲುವು ಪಡೆದವು.

ಫುಟ್‌ಬಾಲ್: ಸ್ಟೇಡಿಯಂ ಎಫ್‌ಸಿ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಯದ್ ಉಮಜಿ ಗಳಿಸಿದ ಎರಡು ಗೋಲುಗಳ ನೆರವಿನಿಂದ ಸ್ಟೇಡಿಯಂ ಎಫ್‌ಸಿ ತಂಡ ಕೆಎಸ್‌ಎಫ್‌ಎ ಯೂತ್ ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯ 18 ವರ್ಷದೊಳಗಿನವರ ವಿಭಾಗದಲ್ಲಿ ಜಯ ಸಾಧಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಸ್ಟೇಡಿಯಂ ಎಫ್‌ಸಿ 4–1 ಗೋಲುಗಳಿಂದ ರಾಣಾ ಎಸ್‌ಎ ತಂಡವನ್ನು ಮಣಿಸಿತು.

ಸೈಯದ್ ಅವರು 46 ಮತ್ತು 65ನೇ ನಿಮಿಷದಲ್ಲಿ ಗೋಲು ಗಳಿಸಿದರು. ಇತರ ಗೋಲುಗಳನ್ನು ಮಂಗಳನ್ ಕಿಪ್ಗಿಮ್ (54) ಹಾಗೂ ಸಂಜುಮನ್ (80 + 2) ಗಳಿಸಿದರು. ರಾಣಾ ತಂಡದ ಏಕೈಕ ಗೋಲನ್ನು ಕೌಶಿಕ್ ಬಾಲಾಜಿ (80 + 1) ತಂದಿತ್ತರು.

ಬಿಬಿಎಫ್‌ಎಸ್ ಮತ್ತು ಎನ್‌ಇವೈಎಫ್‌ಸಿ ನಡುವಿನ ಪಂದ್ಯ 2–2 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು. ಎನ್‌ಇವೈಎಫ್‌ಸಿ ಪರ ಎರಡೂ ಗೋಲುಗಳನ್ನು ಒಕೊಜಮ್ ಚಿತ್ರಂಜನ್ ಸಿಂಗ್ (47, 53ನೇ ನಿ.) ಗಳಿಸಿದರು.